ಬ್ರಹ್ಮರ್ಷಿ ಪಿತಾಮಹ ಡಾ. ಸುಭಾಷ್ ಪತ್ರೀಜಿಯವರ ಆಶೀರ್ವಾದಗಳೊಂದಿಗೆ

# ಗುರು ಪೂರ್ಣಿಮೆಯ ವಿಶಿಷ್ಟತೆ

ರಚನೆ: ಬ್ರಹ್ಮವಿದ್ವರಿಷ್ಠ ತಟವರ್ತಿ ರಾಜ್ಯಲಕ್ಷ್ಮಿ



# ಗುರು ಪೂರ್ಣಿಮೆಯ ವಿಶಿಷ್ಟತೆ



**ರಚನೆ: ಬ್ರಹ್ಮವಿದ್ವರಿಷ್ಠ ತಟವರ್ತಿ ರಾಜ್ಯಲಕ್ಷ್ಮಿ**

**ಕನ್ನಡಕ್ಕೆ ಅನುವಾದ: ಹಗದೂರು ಶ್ರೀನಿವಾಸ**


**ಪ್ರತಿಗಳು ದೊರೆಯುವ ಸ್ಥಳ**

**ಶ್ರೀರಾಮ ಪಬ್ಲಿಕೇಶನ್ಸ್**
ಶ್ರೀ ರಾಮಧಾಮ ಧ್ಯಾನ ಮಂದಿರ
ನಾರಾಯಣಪ್ಪ ಗಾರ್ಡನ್, ವೈಟ್‌ಫೀಲ್ಡ್ ಬೆಂಗಳೂರು– 560 066

**ಪಿರಮಿಡ್ ವ್ಯಾಲಿ ಇಂಟರ್‌ನ್ಯಾಷನಲ್**
ಕೆಬ್ಬೆದೊಡ್ಡಿ ಗ್ರಾಮ, ಹಾರೋಹಳ್ಳಿ ಹೋಬಳಿ, ಕನಕಪುರ ರಸ್ತೆ, ಬೆಂಗಳೂರು

**pmckannadashop.org**
ಹೆಚ್ಚಿನ ಮಾಹಿತಿಗಾಗಿ **pmckannadatv.org**

**GURU POORNIMEYA VISHISHTATHE**
Edited & Published by Sriram Publications,
Sri Ramadhama Dhyana Mandira
Narayanappa Garden, Whitefield,
Bangalore - 560066, M.: 9449695503, 8050082689

| | | |
|---|---|---|
| ಮೊದಲನೆಯ ಮುದ್ರಣ | : | 2026 |
| ಹಕ್ಕುಗಳು | : | ಪ್ರಕಾಶಕರು |
| ಪ್ರಕಾಶಕರು | : | ಶ್ರೀರಾಮ ಪಬ್ಲಿಕೇಶನ್ಸ್<br>ಶ್ರೀರಾಮಧಾಮ ಧ್ಯಾನ ಮಂದಿರ<br>ನಾರಾಯಣಪ್ಪ ಗಾರ್ಡನ್ ವೈಟ್ ಫೀಲ್ಡ್<br>ಬೆಂಗಳೂರು–560066<br>ಮೊ: 9449695503 |
| ಪ್ರತಿಗಳು | : | 500 |
| ಬೆಲೆ | : | 60 ರೂ. |
| ಪುಟಗಳು | : | 48 |


**ಆ**ತ್ಮನಿಂದ ಪ್ರಜ್ಞೆ ಲಭಿಸುವವರೆಗೂ ಸ್ವಾಧ್ಯಾಯ, ಶ್ರವಣ, ಮನನ ಅಗತ್ಯವೆಂದು ಬ್ರಹ್ಮಸೂತ್ರಗಳಲ್ಲಿ ವ್ಯಾಸರು ಹೇಳಿದ್ದಾರೆ.
“ಮಾನವ ಜನ್ಮ ತೆಗೆದುಕೊಂಡ ಮೇಲೆ ಪ್ರತಿ ಮಾನವರು ಕುಜ್ಞಾನ ಸ್ಥಿತಿಯಿಂದ ಅಜ್ಞಾನಿಯಾಗಿ, ಜ್ಞಾನಿಯಾಗಿ, ಆತ್ಮಜ್ಞಾನಿಯಾಗಿ, ವಿಜ್ಞಾನಿಯಾಗಿ, ಪ್ರಜ್ಞಾನಿಯಾಗಿ, ಕಟ್ಟ ಕಡೆಗೆ ಬ್ರಹ್ಮಜ್ಞಾನಿಯ ಸ್ಥಿತಿಯವರೆಗೆ ಬೆಳೆಯುತ್ತಾನೆ. ಎಷ್ಟು ಮಾತ್ರವೂ ಜ್ಞಾನವಿಲ್ಲದಿರುವುದು ಕುಜ್ಞಾನ. ಇರುವುದಕ್ಕೆ ವಿರುದ್ಧವಾಗಿ ಅರ್ಥವಾಗುವುದು ಅಜ್ಞಾನ.

– ಬ್ರಹ್ಮವಿದ್ವರಿಷ್ಠ ತಟವರ್ತಿ ರಾಜ್ಯಲಕ್ಷ್ಮಿ

# ಗುರು ಪೂರ್ಣಿಮೆಯ ವಿಶಿಷ್ಟತೆ

ಗುರು ಪೂರ್ಣಿಮೆಯು ಜಗತ್ತಿನ ಎಲ್ಲಾ ಗುರುಗಳಿಗೂ ಜನ್ಮದಿನವೇ. ಏಕೆಂದರೆ, ಜಗತ್ತಿಗೆ ಜ್ಞಾನವನ್ನು ನೀಡಿದ ವ್ಯಾಸ ಭಗವಾನರು ಜನಿಸಿದ ದಿನವಿದು. ವ್ಯಾಸ ಭಗವಾನರು ವೇದಗಳನ್ನು ಬರೆಯುವವರೆಗೂ, ಈ ಜ್ಞಾನವನ್ನೆಲ್ಲಾ ಗುರುಗಳು ಶಿಷ್ಯರಿಗೆ ಮೌಖಿಕವಾಗಿ (ಹೇಳಿಕೊಡುವ ಮೂಲಕ) ತಿಳಿಸುತ್ತಿದ್ದರು. ಅಂದರೆ ಗುರುಗಳು ಹೇಳುವುದನ್ನು ಕೇಳಿಸಿಕೊಳ್ಳುವ ಮೂಲಕ ಶಿಷ್ಯರು ಅಧ್ಯಯನ ಮಾಡುತ್ತಿದ್ದರು.

ಆದರೆ, ಹೀಗಾಗಿ ಇಂತಹ ಸಮಯದಲ್ಲಿ ಈ ಕಲಿಯುಗದಲ್ಲಿ ಜನರು ಜ್ಞಾನವಿಲ್ಲದೆ ಅಶಾಂತಿ ಮತ್ತು ದುಃಖದಿಂದ ಬಳಲುತ್ತಾರೆ ಎಂದು ಪರಾಶರ ಮಹರ್ಷಿಗಳು ತಮ್ಮ ದಿವ್ಯ ದೃಷ್ಟಿಯಿಂದ ಅರಿತರು. ಈ ಕಲಿಯುಗಕ್ಕೆ ಜ್ಞಾನದ ಅಗತ್ಯವಿದೆ ಮತ್ತು ಅದು ಎಲ್ಲರಿಗೂ ತಲುಪಬೇಕೆಂದು ತನ್ನ ಸಂಕಲ್ಪದಿಂದ ಅವರು ಒಬ್ಬ ಪುತ್ರನನ್ನು ಪಡೆದರು. ಆ ಪರಾಶರ ಮಹರ್ಷಿ ಯಾರು ಎಂದರೆ? ವಶಿಷ್ಠರ ಪುತ್ರ ಶಕ್ತಿ... ಶಕ್ತಿಯ ಪುತ್ರ ಪರಾಶರ ಮಹರ್ಷಿ. ಈ ಪರಾಶರ ಮಹರ್ಷಿ ಮತ್ತು ಮತ್ಸ್ಯಗಂಧಿಯ ಪುತ್ರನೇ ವ್ಯಾಸ ಭಗವಾನರು.

ಮೊಟ್ಟಮೊದಲಿಗೆ ಪರಮಾತ್ಮನು ಈ ಜ್ಞಾನವನ್ನು ಬ್ರಹ್ಮದೇವನಿಗೆ ಶಬ್ದ ರೂಪದಲ್ಲಿ ಕೇಳಿಸಿದನು. ಬ್ರಹ್ಮನು ಶಬ್ದ ರೂಪದಲ್ಲಿ ಕೇಳಿಸಿಕೊಂಡ ಕಾರಣ ಅವುಗಳಿಗೆ 'ಶೃತಿಗಳು' ಎಂದು ಹೆಸರು ಬಂದಿತು. ಈ ಜ್ಞಾನವು ಕೇವಲ ಶೃತಿಗಳಾಗಿದ್ದರೆ ಕಲಿಯುಗದ ಮಾನವರಿಗೆ ಅರ್ಥಮಾಡಿಕೊಳ್ಳಲು ಸಾಧ್ಯವಾಗುವುದಿಲ್ಲ ಎಂದು ಪರಾಶರ ಮಹರ್ಷಿಗಳು ಅರಿತು, ವ್ಯಾಸರ ಮೂಲಕ ಆ ಶೃತಿಗಳನ್ನು ನಾಲ್ಕು ಭಾಗಗಳಾಗಿ ವಿಂಗಡಿಸಿ 'ವೇದಗಳು' ಎಂದು ಹೆಸರಿಸಿದರು. ವೇದ ಎಂದರೆ ಜ್ಞಾನ ಎಂದರ್ಥ. ವೇದಗಳನ್ನು ಒಟ್ಟು ನಾಲ್ಕು ಭಾಗಗಳಾಗಿ ವಿಂಗಡಿಸಲಾಗಿದೆ:

**1) ಋಗ್ವೇದ, 2) ಯಜುರ್ವೇದ, 3) ಸಾಮವೇದ, 4) ಅಥರ್ವಣ ವೇದ**

**1)** ಋಗ್ವೇದ ಸೃಷ್ಟಿಯಲ್ಲಿ ಏನೇನು ಇವೆ ಎಂಬುದನ್ನು ಇದು ತಿಳಿಸಿಕೊಡುತ್ತದೆ. ಮತ್ತು ಅವುಗಳನ್ನು ಯಾವ ರೀತಿಯಲ್ಲಿ ಪಡೆಯಬಹುದು ಎಂದು ಹೇಳಲಾಗಿದೆ.

**2)** ಯಜುರ್ವೇದದಲ್ಲಿ ಯಜ್ಞ ಯಾಗಾದಿಗಳನ್ನು ಮಾಡಿ (ಫಲವನ್ನು) ಹೇಗೆ ಪಡೆಯಬಹುದು ಎಂದು ಹೇಳಲಾಗಿದೆ.

**3)** ಸಾಮವೇದದಲ್ಲಿ ಎಷ್ಟೋ ಆಧ್ಯಾತ್ಮಿಕ ವಿಷಯಗಳನ್ನು ತಿಳಿಸಿಕೊಟ್ಟಿದ್ದಾರೆ. ಅಂದರೆ ಭಗವಂತ ಯಾರು? ಆತನನ್ನು ಹೇಗೆ ತಲುಪಬಹುದು? ಈ ಲೌಕಿಕ ಜೀವನದಲ್ಲಿ ಎಷ್ಟೇ ಕಲಿತರೂ, ಏನನ್ನು ಪಡೆದರೂ ಪರಮಾತ್ಮನನ್ನು ಪಡೆದರೆ ಮಾತ್ರ ಜೀವನ ಪರಿಪೂರ್ಣವಾಗುತ್ತದೆ; ಅದೇ ಮಾನವ ಜೀವನದ ಪರಮಾರ್ಥ ಮತ್ತು ಗುರಿ ಎಂದು

ತಿಳಿಸಿದ್ದಾರೆ. ಪರಮಾತ್ಮನನ್ನು ತಲುಪುವ ಅವಕಾಶ ಬೇರೆ ಯಾವ ಜೀವಿಗೂ ಇಲ್ಲ, ಅದು ಕೇವಲ ಮಾನವನಿಗೆ ಮಾತ್ರ ಇದೆ ಎಂದು ಸಾಮವೇದ ಹೇಳುತ್ತದೆ. ಮೊದಮೊದಲು ವೇದವ್ಯಾಸರು ಈ ಮೂರು ವೇದಗಳನ್ನೇ ಕಂಡುಕೊಂಡಿದ್ದರು. ಆದರೆ ಆ ದಿನಗಳಲ್ಲಿ ಯುದ್ಧಗಳು ನಡೆಯುತ್ತಿದ್ದಾಗ ರಾಕ್ಷಸರ ಬಲ ಹೆಚ್ಚಾಗಿತ್ತು ಮತ್ತು ದೇವತೆಗಳು ಯಾವಾಗಲೂ ಸೋಲುತ್ತಿದ್ದರು. ಆಗ ದೇವತೆಗಳು ರಾಕ್ಷಸರನ್ನು ಹೇಗೆ ಗೆಲ್ಲಬಹುದು ಎಂದು ಕೇಳಿದಾಗ, ರಾಕ್ಷಸರನ್ನು ಸೋಲಿಸಲು ಬೇಕಾದ ಅಸ್ತ್ರವಿದ್ಯೆಯನ್ನು ವ್ಯಾಸರು ಅಥರ್ವಣ ವೇದದಲ್ಲಿ ಅಳವಡಿಸಿದರು. ಹಾಗಾಗಿ ಅವರು ಅಥರ್ವಣ ವೇದವನ್ನು ಕೊನೆಯಲ್ಲಿ ಬರೆದರು. ಅಥರ್ವಣ ವೇದದಲ್ಲಿ ಸಂಪೂರ್ಣವಾಗಿ ಯುದ್ಧನೀತಿ ಮತ್ತು ವೈದ್ಯಕೀಯದ ಬಗ್ಗೆ ಹೇಳಲಾಗಿದೆ. ಅಂದರೆ, ಒಂದು ಮಂತ್ರವನ್ನು ಪಠಿಸಿ ಬಾಣ ಬಿಟ್ಟರೆ ಅದು ಕೆಲಸ ಮಾಡುತ್ತಿತ್ತಂತೆ.

ಆದರೆ ಭಾರತ ಯುದ್ಧದ (ಮಹಾಭಾರತ) ನಂತರ ಕೃಷ್ಣನು ಮಂತ್ರ ವಿದ್ಯೆಯನ್ನು ಇಲ್ಲದಂತೆ ಮಾಡಿದನು. ಕಲಿಯುಗದಲ್ಲಿ ಜನರಿಗೆ ಸ್ವಾರ್ಥ ಹೆಚ್ಚಾಗಿರುತ್ತದೆ ಎಂದು ಕೃಷ್ಣ ಪರಮಾತ್ಮನಿಗೆ ತಿಳಿದಿತ್ತು. ಈ ವಿದ್ಯೆಯನ್ನು ಉಪಯೋಗಿಸಿ ಸೃಷ್ಟಿಯನ್ನು ನಾಶಮಾಡುವ ಅವಕಾಶ ಇರುವುದರಿಂದ ಆ ಮಂತ್ರ ವಿದ್ಯೆಯನ್ನು ಇಲ್ಲದಂತೆ ಮಾಡಿದನು.

ವ್ಯಾಸ ಭಗವಾನರು ವೇದಗಳನ್ನು ಹಾಗೆಯೇ ಬರೆದಿಟ್ಟು ಭೂಮಿಯ ಮೇಲೆ ಬಿಟ್ಟು ಹೋಗಲಿಲ್ಲ. ಅವರು ತಮ್ಮ ಶಿಷ್ಯರ ಮೂಲಕ ಅವುಗಳನ್ನು ಪ್ರಚಾರ ಮಾಡಿಸಿದರು. ಋಗ್ವೇದವನ್ನು ಪೈಲನಿಂದ, ಯಜುರ್ವೇದವನ್ನು ವೈಶಂಪಾಯನನಿಂದ, ಸಾಮವೇದವನ್ನು ಜೈಮಿನಿ ಮಹರ್ಷಿಯಿಂದ ಮತ್ತು ಅಥರ್ವಣ ವೇದವನ್ನು ಸುಮಂತನಿಂದ – ಹೀಗೆ ನಾಲ್ಕು ವೇದಗಳನ್ನು ನಾಲ್ವರು ಶಿಷ್ಯರ ಮೂಲಕ ಪ್ರಚಾರ ಮಾಡಿಸಿದರು. ಶಿಷ್ಯರೊಂದಿಗೆ ನಾಲ್ಕು ದಿಕ್ಕುಗಳಲ್ಲೂ ಪ್ರಚಾರ ಮಾಡಲಾಯಿತು. ಆದರೆ ನಾಲ್ಕು ವೇದಗಳನ್ನು ಬರೆದ ನಂತರವೂ ವ್ಯಾಸ ಭಗವಾನರು ತಮ್ಮ ದಿವ್ಯ ದೃಷ್ಟಿಯಿಂದ ಕಲಿಯುಗದಲ್ಲಿ ಜನರು ಈ ವೇದಗಳನ್ನು ಓದಿ ಜ್ಞಾನವಂತರಾಗುತ್ತಾರೆಯೇ ಎಂದು ನೋಡಿದರೆ, ಅವುಗಳನ್ನು ಓದುವವರೇ ಅವರಿಗೆ ಕಾಣಿಸಲಿಲ್ಲವಂತೆ. ಆಗ ಅಷ್ಟಾದಶ ಪುರಾಣಗಳ ರೂಪದಲ್ಲಿ ಅಂದರೆ ಕಥೆಗಳ ರೂಪದಲ್ಲಿ ಆ ಜ್ಞಾನವನ್ನೆಲ್ಲಾ ಅವರು ಅಳವಡಿಸಿದರು. ಮತ್ತು ಆ ಅಷ್ಟಾದಶ ಪುರಾಣಗಳನ್ನು ಸೂತರು ನೈಮಿಷಾರಣ್ಯದಲ್ಲಿ ಶಿಷ್ಯರಿಗೆ ಬೋಧಿಸಿ ಪ್ರಚಾರ ಮಾಡಿದರು.

ಆದರೆ ಈಗಿನವರು ಆ ನೈಮಿಷಾರಣ್ಯಕ್ಕೆ ಹೋಗಿ ಅಲ್ಲಿರುವ ಗುಹೆಗಳನ್ನೆಲ್ಲಾ ಸುತ್ತಿ ಬರುತ್ತಿದ್ದಾರೆಯೇ ಹೊರತು, ಪುರಾಣಗಳ ಮೂಲಕ ವ್ಯಾಸ ಭಗವಾನರು ಯಾವ ಜ್ಞಾನವನ್ನು ನೀಡಿದ್ದಾರೋ ಅದನ್ನು ತಿಳಿದುಕೊಳ್ಳುತ್ತಿಲ್ಲ. ಆ ಜ್ಞಾನವು

ಮೆಲ್ಲ ಮೆಲ್ಲಗೆ ಮರೆಯಾಗುತ್ತಿದೆ. ವ್ಯಾಸ ಭಗವಾನರು ಈ ವೇದಗಳನ್ನು ಹೇಳುತ್ತಿರುವಾಗ, ಗಣಪತಿಯು ಬರೆಯುತ್ತಾ.. "ಯಾತಕ್ಕಾಗಿ ಇವೆಲ್ಲವನ್ನೂ ಬರೆಯುತ್ತಿದ್ದೇವೆ? ಇದರ ಸಾರಾಂಶವೇನು?" ಎಂದು ಕೇಳಿದಾಗ, "ಪರೋಪಕಾರಾಯ ಪುಣ್ಯಾಯ, ಪಾಪಾಯ ಪರಪೀಡನಮ್" ಎಂದು ಹೇಳಿದರು. ಅಂದರೆ ಯಾವುದೇ ಯುಗದಲ್ಲಾದರೂ, ಯಾವಾಗಲೂ, ಎಲ್ಲೇ ಆದರೂ ಇತರರಿಗೆ ಉಪಕಾರ ಮಾಡಿದಾಗಲೇ ಧರ್ಮವು ನಿಲ್ಲುತ್ತದೆ, ಇತರರನ್ನು ಪೀಡಿಸಿದಾಗ ಅಧರ್ಮವು ಹೆಚ್ಚಾಗುತ್ತದೆ ಎಂದು ಹೇಳಿದರು. ಈ ರೀತಿಯಾಗಿ ಎಷ್ಟೇ ಹೇಳಿದರೂ ಅದನ್ನು ಓದಿ ಆಚರಿಸುವವರು ಇಲ್ಲದಂತಾದರು. ವ್ಯಾಸರು ಇಷ್ಟೆಲ್ಲಾ ಬರೆದುಕೊಟ್ಟರೂ ಅವರಿಗೆ ತೃಪ್ತಿ ಸಿಗಲಿಲ್ಲವಂತೆ. ಮತ್ತೆ ಅವರು ವಿಚಾರದಲ್ಲಿದ್ದಾಗ ನಾರದರು ಬಂದು 'ಭಾರತ'ವನ್ನು (ಮಹಾಭಾರತ) ಬರೆಯಿರಿ ಎಂದು ಹೇಳಿದರಂತೆ. ಆ ಭಾರತದಲ್ಲಿರುವುದೇ ಭಗವದ್ಗೀತೆ.

ಭಗವದ್ಗೀತೆಯ ಮೂಲಕ ಜನರು ಯಾವ ರೀತಿಯಲ್ಲಿ ಜೀವಿಸಬೇಕು? ಎಂತಹ ಆಹಾರ ಸೇವಿಸಬೇಕು? ಎಂತಹ ವ್ಯವಹಾರದಲ್ಲಿ ಇರಬೇಕು? ಪರಮಾತ್ಮನನ್ನು ತಲುಪುವವರೆಗೂ ಮನುಷ್ಯನಿಗೆ ಶಾಂತಿ ಇಲ್ಲ ಎಂಬ ಸತ್ಯವನ್ನು ಭಗವದ್ಗೀತೆಯ ಮೂಲಕ ತಿಳಿಸಬೇಕೆಂದು ಅವರು ಅಂದುಕೊಂಡರು. ಹಾಗೆ ನಾರದರು ಹೇಳಿದಾಗ ಮತ್ತೆ ಭಾರತವನ್ನು ಬರೆದರು. ಅದಕ್ಕಾಗಿಯೇ ಮಹಾಭಾರತವನ್ನು 'ಪಂಚಮ ವೇದ' ಎಂದು ಕರೆಯುತ್ತಾರೆ. ವೇದಗಳಲ್ಲಿ ಎಷ್ಟು ಜ್ಞಾನವಿದೆಯೋ, ಭಗವದ್ಗೀತೆಯಲ್ಲೂ ಅಷ್ಟೇ ಜ್ಞಾನವಿದೆ. ಮಾನವರು ಪುರಾಣಗಳನ್ನು ಕೇವಲ ಹವ್ಯಾಸಕ್ಕಾಗಿ ಓದುತ್ತಿದ್ದಾರೆ, ಅವನ್ನು ಪಾರಾಯಣ ಮಾಡುವ ಗ್ರಂಥಗಳೆಂದು ಭಾವಿಸುತ್ತಿದ್ದಾರೆ. ಆದರೆ ಅದನ್ನು ಜೀವನದಲ್ಲಿ ಆಚರಿಸಬೇಕಾದ ಗ್ರಂಥವೆಂದು ಯಾರೂ ಅಂದುಕೊಳ್ಳುತ್ತಿಲ್ಲ. ಎಂದರೆ ನಮ್ಮ ಜ್ಞಾನ ಮತ್ತು ಬುದ್ಧಿ ಎಷ್ಟು ಕೆಳಮಟ್ಟಕ್ಕೆ ಇಳಿದಿದೆ ಎಂದು ನಾವು ಯೋಚಿಸಬೇಕಾಗಿದೆ. ಈ ಪುರಾಣಗಳನ್ನು ಬರೆದವರ ಉದ್ದೇಶವೇನು? ನಾವು ಮಾಡುತ್ತಿರುವ ಕೆಲಸವೇನು? ಎಂದು ಆಲೋಚಿಸಿದರೆ ನಾವು ಎಷ್ಟು ಅಲ್ಪರಾಗಿದ್ದೇವೆ ಎಂಬುದು ಅರ್ಥವಾಗುತ್ತದೆ. ಇಂತಹ ಜ್ಞಾನವನ್ನು ಲೋಕಕ್ಕೆ ನಿರಂತರವಾಗಿ ತಲುಪಿಸಿದ ವ್ಯಾಸ ಭಗವಾನರು ಹುಟ್ಟಿದ ದಿನವೇ, ಜ್ಞಾನವನ್ನು ನೀಡುವ ಎಲ್ಲಾ ಗುರುಗಳ ಜನ್ಮದಿನ (ಗುರು ಪೂರ್ಣಿಮೆ).

ವ್ಯಾಸ ಭಗವಾನರು ಕೇವಲ ಪುರಾಣಗಳನ್ನು ರಚಿಸಿ ಬಿಡಲಿಲ್ಲ, ತನ್ನ ಶಿಷ್ಯರ ಮೂಲಕ ಅವುಗಳನ್ನು ಹೇಗೆ ಪ್ರಚಾರ ಮಾಡಿಸಿದರು! ಹಾಗೆಯೇ ಪತ್ರೀಜಿಯವರು ಕೂಡ ತಾವು ಬೋಧಿಸಿದ ಜ್ಞಾನವನ್ನೆಲ್ಲಾ ಎಲ್ಲರಿಗೂ "ಹೇಳಿ, ಹೇಳಿ" ಎಂದು ಪ್ರಚಾರ ಮಾಡಿಸಿದರು. ಹೀಗೆ ಪ್ರಚಾರ ಮಾಡುವುದರಿಂದ ಎರಡು ಲಾಭಗಳಿವೆ:

1) ಹೇಳುವ ಶಿಷ್ಯನಿಗೆ ಅದು ಮನನವಾಗುತ್ತದೆ (ನೆನಪಿನಲ್ಲಿ ಉಳಿಯುತ್ತದೆ).

2) ಹೊಸಬರಿಗೆ ಅದರ ಶ್ರವಣವಾಗುತ್ತದೆ (ಕೇಳಿಸಿಕೊಳ್ಳುವ ಭಾಗ್ಯ ಸಿಗುತ್ತದೆ).

ಅದೇ ರೀತಿ ಪತ್ರೀಜಿಯವರು ಕೇವಲ ಸತ್ಯವನ್ನು ಮಾತ್ರ ಹೇಳಿ ಸುಮ್ಮನಿರಲಿಲ್ಲ. ಎಂದರೆ ದೇವರು ಯಾರೆಂದು ತಿಳಿಸಿ ಸುಮ್ಮನಾಗದೆ, ಆತನ ಧರ್ಮವನ್ನೂ ಕೂಡ ಬೋಧಿಸಿದರು. **"ಪರರನ್ನು ಹಿಂಸಿಸುವುದು ಪಾಪ, ಪರರಿಗೆ ಒಳಿತು ಮಾಡುವುದು ಪುಣ್ಯ"** ಎಂದು ವ್ಯಾಸ ಭಗವಾನರು ಹೇಳಿದಂತೆಯೇ, ಪತ್ರೀಜಿಯವರು ಕೂಡ 'ಪರರು' ಎಂದರೆ ಕೇವಲ ಮನುಷ್ಯರು ಮಾತ್ರವಲ್ಲ, ಭೂಮಿಯ ಮೇಲಿರುವ ಪ್ರತಿ ಜೀವಿಯೂ ಆತ್ಮಸ್ವರೂಪವೇ ಎಂದು ಹೇಳಿದರು. ಆದ್ದರಿಂದ ಅನ್ಯ ಜೀವಿಗಳನ್ನು ಹಿಂಸಿಸಬಾರದು ಎಂದು ಬೋಧಿಸಿದರು. ಅಷ್ಟೇ ಅಲ್ಲದೆ, ಪ್ರತಿಯೊಂದು ಜೀವಿಯೂ ತನ್ನ ಆಯಸ್ಸು ಇರುವವರೆಗೂ ಸಂಪೂರ್ಣವಾಗಿ ಬದುಕಲು ಬಿಡಬೇಕು; ಯಾವುದೇ ಜೀವಿಯೂ ಅರ್ಧಾಯುಷ್ಯ ಅಥವಾ ಅಲ್ಪಾಯುಷ್ಯದಲ್ಲಿ ಮರಣ ಹೊಂದಬಾರದು ಎಂದು ಅವರು ತಿಳಿಸಿದರು.

ಭೂಮಿಯ ಮೇಲೆ ಎಲ್ಲಾ ಜೀವಿಗಳಿಗಿಂತ ಮನುಷ್ಯನೇ ಅತ್ಯಂತ ಶಕ್ತಿವಂತ. ಆದರೆ ಈ ಕಲಿಯುಗದಲ್ಲಿ ಜ್ಞಾನವನ್ನು ಪಡೆಯದೆ, ಬುದ್ಧಿಯನ್ನು ವಿಕಸನಗೊಳಿಸಿಕೊಳ್ಳದೆ ಮನುಷ್ಯನು ತನ್ನ ಬುದ್ಧಿಯನ್ನು ದುರುಪಯೋಗಪಡಿಸಿಕೊಳ್ಳುತ್ತಿದ್ದಾನೆ. ಹಿಂಸೆ ಮಾಡುವ ಮೂಲಕ ತನ್ನ ಶಕ್ತಿಯನ್ನು ಕಳೆದುಕೊಳ್ಳುತ್ತಿದ್ದಾನೆ. ಅದಕ್ಕಾಗಿಯೇ ಪತ್ರೀಜಿಯವರು ಮೊಟ್ಟಮೊದಲು ಆಹಾರದ ಮೇಲೆ ನಿಯಂತ್ರಣವನ್ನು ಹೇರಿದರು.

ಬುದ್ಧನು ಕೂಡ ಸಸ್ಯಾಹಾರದ ಬಗ್ಗೆ ಹೇಳಿದ್ದಾನೆ. ಯಾವುದೇ ಜೀವಿಯು ಸಾಯಬಾರದು ಎಂದು ಅಂತಿಮವಾಗಿ ಯಜ್ಞಗಳನ್ನು ಕೂಡ ನಿಲ್ಲಿಸಿಬಿಡಿ, ಅದರಲ್ಲಿ ಪ್ರಾಣಿ ಹಿಂಸೆ ನಡೆಯುತ್ತದೆ ಎಂದು ಹೇಳಿದರು. ಹಾಗೆಯೇ ಮಲಯಾಳ ಸ್ವಾಮಿ ಕೂಡ ಬಹಳವಾಗಿ ಹೋರಾಡಿದರು. ಮತ್ತೆ ಬುದ್ಧ, ಮಲಯಾಳ ಸ್ವಾಮಿ, ತದನಂತರ ಪತ್ರಿಜಿಯವರು ಹಿಂಸೆ ಬೇಡ ಎಂದು ಹೋರಾಡಲು ಕಾರಣ – ಹಿಂಸಾಯುತವಾದ ಆಹಾರ ಸೇವಿಸುವುದರಿಂದಲೇ ಮಾನವನು ಜ್ಞಾನವನ್ನು ಕಳೆದುಕೊಳ್ಳುತ್ತಿದ್ದಾನೆ ಮತ್ತು ಪಶು ಗುಣಗಳನ್ನು ಬೆಳೆಸಿಕೊಳ್ಳುತ್ತಿದ್ದಾನೆ ಎಂಬುದು ಅವರ ಅಭಿಪ್ರಾಯ.

ಯಾವಾಗ ಸಸ್ಯಾಹಾರವನ್ನು ಸ್ವೀಕರಿಸುತ್ತಾರೋ, ಬುದ್ಧಿಯನ್ನು ಬೆಳೆಸಿಕೊಳ್ಳುತ್ತಾರೋ... ಜೀವನ ಅಂದರೆ ಕೇವಲ 'ಖಾನಾ, ಪೀನಾ, ಸೋನಾ' (ತಿನ್ನುವುದು, ಕುಡಿಯುವುದು, ಮಲಗುವುದು) ಮಾತ್ರವಲ್ಲ. ಜ್ಞಾನವನ್ನು ಪಡೆಯುವುದೇ ಮಾನವನ ಗುರಿ ಎಂದು ತಿಳಿದುಕೊಂಡು, ಪಶುಗಳಂತೆ ಇರದೆ 'ಪಶುಪತಿ'ಯಾಗಿ ಬೆಳೆಯಲು ಪ್ರಯತ್ನಿಸುತ್ತಾರೆ. ಮಾಂಸಾಹಾರ ಸೇವನೆಯಿಂದ ಸ್ಥೂಲ ಶರೀರ ಮತ್ತು ಸೂಕ್ಷ್ಮ ಶರೀರ ಎರಡೂ ನಾಶವಾಗುತ್ತವೆ. ಸ್ಥೂಲ ಶರೀರವು ರೋಗಗಳಿಂದ ಮತ್ತು ಸೂಕ್ಷ್ಮ ಶರೀರವು ಕಲುಷಿತ ಮನಸ್ಸಿನಿಂದ ಕೂಡಿರುತ್ತದೆ. ಅಂದರೆ ಆಹಾರದ

ಮೇಲೆಯೇ ಮನಸ್ಸು ಆಧಾರಪಟ್ಟಿರುವುದರಿಂದ, ಸರಿಯಾದ ಆಹಾರ ಸೇವಿಸದಿದ್ದರೆ ನಡವಳಿಕೆಯೂ ಸರಿಯಾಗಿರುವುದಿಲ್ಲ.

ಮಾಂಸಾಹಾರದಿಂದ ಮಾನವನ ಮನಸ್ಸು ಅಶುದ್ಧವಾಗುವುದರಿಂದ ರಾಕ್ಷಸ ಗುಣಗಳು, ತಮೋಗುಣ ಮತ್ತು ರಜೋಗುಣಗಳು ಹೆಚ್ಚಾಗುತ್ತಿವೆ. ಈ ಎರಡು ಗುಣಗಳಿಂದಾಗಿ ಮನುಷ್ಯನು ಮನುಷ್ಯನಾಗಿ ಬದುಕಲಾರದೆ, ರಾಕ್ಷಸ ಪ್ರವೃತ್ತಿಯಿಂದ ಅಂದರೆ ಸ್ವಾರ್ಥ, ಅಹಂಕಾರ ಮತ್ತು ತನಗಾಗಿ ಯಾರನ್ನಾದರೂ ನೋಯಿಸುವ ತತ್ವದೊಂದಿಗೆ ಬದುಕುತ್ತಿದ್ದಾನೆ.

ಈಗ ಪ್ರಪಂಚದಲ್ಲಿ ಎಷ್ಟೊಂದು ಸ್ವಾರ್ಥವಿದೆಯೆಂದರೆ ಧನೇಷಣೆ, ಧಾರೇಷಣೆ, ಪುತ್ರೈಷಣ – ಅಂದರೆ ಹಣ, ಹೆಂಡತಿ ಮತ್ತು ಮಕ್ಕಳ ಮೇಲಿನ ಈ ಮೂರು ವ್ಯಾಮೋಹಗಳೇ ಹೊರತು, ಪರೋಪಕಾರವನ್ನು ಬಯಸುವ ಮಾನವನು ಹುಡುಕಿದರೂ ಕಾಣದ ಸ್ಥಿತಿಗೆ ಪ್ರಪಂಚವು ಬದಲಾಗಿಹೋಗಿದೆ.

ಯಾರು ಸಸ್ಯಾಹಾರವನ್ನು ಸ್ವೀಕರಿಸುತ್ತಾರೋ ಅವರಿಗೆ ಆತ್ಮಶಕ್ತಿ ಹೆಚ್ಚುತ್ತಾ ಹೋಗುತ್ತದೆ. ಯಾರು ಜೀವಿಗಳನ್ನು ಹಿಂಸಿಸಿ ಮಾಂಸಾಹಾರವನ್ನು ಸೇವಿಸುತ್ತಾರೋ ಅವರಿಗೆ ಆತ್ಮಶಕ್ತಿ ಕುಂದುತ್ತಾ ಹೋಗುತ್ತದೆ. ಮತ್ತು ಎಲ್ಲಿಯೂ, ಯಾವುದೇ ವೇದವಾಗಲಿ, ಯಾವುದೇ ಉಪನಿಷತ್ತಾಗಲಿ ಮಾಂಸಾಹಾರ ಸೇವಿಸಬಹುದು ಎಂದು ಹೇಳಿಲ್ಲ; ಅದು ಕ್ಷುದ್ರ ದೇವತೆಗಳಿಗೆ ಪ್ರೀತಿಕರ ಎಂದು ಹೇಳಲಾಗಿದೆ. ಭಗವದ್ಗೀತೆಯಲ್ಲಿ **"ಜ್ಞಾನಾಗ್ನಿ ದಗ್ಧ ಕರ್ಮಾಣಂ"** ಎಂದು ಹೇಳಲ್ಪಟ್ಟಿದೆ. ಆದರೆ ಈ ಜ್ಞಾನವು ಏಕೆ ಬೆಳೆಯಬೇಕೆಂದರೆ, ಹಿಂದಿನ ಜನ್ಮಗಳಲ್ಲಿ ಮಾಡಿದ ಕರ್ಮಗಳೆಲ್ಲವೂ ಇರುವುದರಿಂದ ಮತ್ತು ಈ ಕರ್ಮಗಳಿಂದ ಪರಮಾತ್ಮನ ದರ್ಶನವಾಗುವುದಿಲ್ಲವಾದ್ದರಿಂದ, ಈ ಜ್ಞಾನವನ್ನು ಹೆಚ್ಚಿಸಿಕೊಳ್ಳಬೇಕು. ಯಾವ ಜ್ಞಾನ? "ನಾನು ಆತ್ಮನು, ಸೃಷ್ಟಿಯಲ್ಲಿನ ಸರ್ವ ಜೀವಿಗಳೂ ಆತ್ಮ ಸ್ವರೂಪಗಳೇ, ಸೃಷ್ಟಿಯೆಲ್ಲವೂ ಆ ಚೈತನ್ಯದಿಂದಲೇ ನಡೆಸಲ್ಪಡುತ್ತಿದೆ, ನಾನೆಂಬುದೇನೂ ಇಲ್ಲ, ನನ್ನದೆಂಬುದೇನೂ ಇಲ್ಲ, ಎಲ್ಲವೂ ಪರಮಾತ್ಮನೇ" ಎಂದು ನೀನು ಜ್ಞಾನವನ್ನು ಪೂರ್ಣವಾಗಿ ಹೊಂದಿದಾಗ, ಯಾರನ್ನು ನೋಡಿದರೂ ನಿನಗೆ ಭಗವಂತನೇ ನೆನಪಾಗುತ್ತಾನೆ. ಎಲ್ಲರೂ ಆತ್ಮ ಸ್ವರೂಪಗಳೇ ಎಂದು ನೀನು ಜ್ಞಾನವನ್ನು ಪಡೆದಾಗ ಈ ಕರ್ಮಗಳೆಲ್ಲವೂ ಸುಟ್ಟು ಭಸ್ಮವಾಗುತ್ತವೆ.

ಅದಕ್ಕಾಗಿಯೇ ಯೋಗಾಗ್ನಿಯನ್ನು, ಜ್ಞಾನಾಗ್ನಿಯನ್ನು ಹೆಚ್ಚಿಸಿಕೊಳ್ಳುವವನು ಮಾನವನೊಬ್ಬನೇ. ಉಳಿದ ಜೀವಿಗಳೆಲ್ಲವೂ ಭೋಗ ಜೀವಿಗಳು.

ಇವೆಲ್ಲವೂ ನಮಗೆ ಹೇಗೆ ತಿಳಿಯುತ್ತವೆ ಎಂದರೆ? ವ್ಯಾಸ ಭಗವಾನರು ಬರೆದಿಟ್ಟು ಹೋಗಿದ್ದಾರೆ. ಅವುಗಳನ್ನು ಅಧ್ಯಯನ ಮಾಡಿದವರು ಎಲ್ಲರಿಗಿಂತಲೂ ಉನ್ನತವಾಗಿ

ಬೆಳೆದರು. ಅಧ್ಯಯನ ಮಾಡಲು ಸೋಮಾರಿತನ ಪಟ್ಟವರು ಕರ್ಮಗಳನ್ನು ಅನುಭವಿಸುತ್ತಾ ದುಃಖದಲ್ಲಿದ್ದಾರೆ.

ಈ ಧ್ಯಾನಕ್ಕೆ ಬಂದವರು ಯೋಗಾಗ್ನಿಯನ್ನು, ಜ್ಞಾನಾಗ್ನಿಯನ್ನು ಪ್ರಜ್ವಲಿಸಿಕೊಳ್ಳುತ್ತಾ ಯೋಗದ ಮೂಲಕ ಪರಮಾತ್ಮನನ್ನು ಸೇರಬಹುದು ಎಂದು ಗುರುವಿನ ಮೂಲಕ ತಿಳಿದುಕೊಂಡು ನಿತ್ಯವೂ ಯೋಗ ಮಾಡುತ್ತಿದ್ದಾರೆ.

ಒಂದು ಗುಡಿಯನ್ನು ಕಟ್ಟಿದಾಗ ಅಖಂಡ ದೀಪವನ್ನು ಬೆಳಗಿಸುತ್ತಾರೆ. ತದನಂತರ ಪೂಜಾರಿಗಳು ಒಬ್ಬರಾದ ಮೇಲೆ ಒಬ್ಬರು ಬಂದು ಆ ಅಖಂಡ ದೀಪವು ಆರಿಹೋಗದಂತೆ ಎಣ್ಣೆಯನ್ನು ಸುರಿಯುತ್ತಲೇ ಇರುತ್ತಾರೆ. ಅದೇ ರೀತಿ ಪತ್ರಿಜಿಯವರು ಧ್ಯಾನ ಮತ್ತು ಜ್ಞಾನವೆಂಬ ಅಖಂಡ ದೀಪವನ್ನು ಬೆಳಗಿಸಿದ್ದಾರೆ. ಅದನ್ನು ರಾಘವರಾವ್ ಅವರು ಜ್ಞಾನಬೋಧೆ ಎಂಬ ಎಣ್ಣೆಯನ್ನು ಸುರಿದು ಪ್ರತಿದಿನ ಪ್ರಜ್ವಲಿಸುವಂತೆ ನೋಡಿಕೊಳ್ಳುತ್ತಿದ್ದಾರೆ. ಈ ರೀತಿಯಾಗಿ ತಿಳಿದುಕೊಂಡ ನಾವೆಲ್ಲರೂ ಅಖಂಡ ಜ್ಯೋತಿಯಂತಿರಬೇಕು ಹೊರತು, ಆರಿಹೋಗುವ ದೀಪದಂತಿರಬಾರದು ಎಂದು ನಿತ್ಯವೂ ಧ್ಯಾನಿಸುತ್ತಾ, ಜ್ಞಾನವನ್ನು ಹೆಚ್ಚಿಸಿಕೊಳ್ಳುತ್ತಾ ಒಂದು ಅಗ್ನಿಯಂತೆ ಪ್ರಜ್ವಲಿಸೋಣ. ಈ ಯೋಗಾಗ್ನಿ, ಜ್ಞಾನಾಗ್ನಿ ಎಂದಿಗೂ ಆರಿಹೋಗುವಂಥವಲ್ಲ. ಈ ಜ್ಞಾನ ನಮ್ಮವರೆಗೂ ಬಂದಿದೆ ಎಂದರೆ ಅದು ವ್ಯಾಸ ಭಗವಾನರು ನಮಗೆ ನೀಡಿದ ಭಿಕ್ಷೆ.

ಆದರೆ ಆಧ್ಯಾತ್ಮಿಕ ವಿದ್ಯೆಯೊಂದೇ ದೊಡ್ಡದು, ಲೌಕಿಕ ವಿದ್ಯೆ ದೊಡ್ಡದಲ್ಲ ಎಂದರೆ ಅದು ನಮ್ಮ ಮೂರ್ಖತನವೇ ಆಗುತ್ತದೆ. ಪರಾ ವಿದ್ಯೆ (ಆಧ್ಯಾತ್ಮಿಕ) ಮತ್ತು ಅಪರಾ ವಿದ್ಯೆ (ಲೌಕಿಕ) ಎರಡೂ ಶ್ರೇಷ್ಠವೇ. ಈ ಎರಡೂ ವಿದ್ಯೆಗಳು ಉಳ್ಳವನಿಗೇ ಆತ್ಮಜ್ಞಾನ ಮತ್ತು ಬ್ರಹ್ಮಜ್ಞಾನ ಪಡೆಯಲು ಅರ್ಹತೆ ಇದೆ ಎಂದು ವ್ಯಾಸ ಭಗವಾನರೇ ಹೇಳಿದ್ದಾರೆ. ಏಕೆಂದರೆ ಅಪರಾ ವಿದ್ಯೆಯನ್ನು ಕಲಿಯದಿದ್ದರೆ ಪರಾ ವಿದ್ಯೆಯಲ್ಲಿ ಶ್ರೇಷ್ಠರಾಗಲು ಸಾಧ್ಯವಿಲ್ಲ. ಜ್ಞಾನ ಮಾರ್ಗಕ್ಕೆ ಬಂದ ಮೇಲೆ ಸತ್ಯವನ್ನು ಅರಿಯದೆ, ಜ್ಞಾನವನ್ನು ತಿಳಿದುಕೊಳ್ಳದೆ, ನಮಗೆ ಏನು ನೀಡಲ್ಪಟ್ಟಿದೆ ಎಂದು ಯೋಚಿಸದೆ ಬಾಯಿಗೆ ಬಂದಂತೆ ಮಾತನಾಡಿದರೆ ಅದೂ ಕೂಡ ಕರ್ಮವೇ. "ಸೃಷ್ಟಿಯಲ್ಲಿ ಇರುವುದೆಲ್ಲವೂ ಸರಿಯಾದದ್ದೇ. ನೀನು ಯಾವುದನ್ನು ಉಪಯೋಗಿಸಬೇಕು, ಯಾವುದನ್ನು ಉಪಯೋಗಿಸಬಾರದು ಎಂದು ತಿಳಿದು ವರ್ತಿಸಬೇಕು" ಎಂದು ಪತ್ರಿಜೀಯವರು ಹೇಳುತ್ತಿದ್ದರು. ಜ್ಞಾನ ಬೆಳೆದವನು ಯಾವುದು ಸರಿ? ಹೇಗೆ? ಎಂದು ತಿಳಿದು ಉಪಯೋಗಿಸಿಕೊಳ್ಳುತ್ತಾನೆ. ಜ್ಞಾನವಿಲ್ಲದವನು ಯಾವುದನ್ನಾದರೂ ಕುರುಡಾಗಿ ಅನುಕರಿಸುತ್ತಾನೆ ಎಂದು ಅವರು ಹೇಳುತ್ತಿದ್ದರು.

ನಾನು ಆತ್ಮನು, ಆತ್ಮ ಶಕ್ತಿಯೇ, ಆತ್ಮನ ಚೈತನ್ಯವೇ ಈ ಸೃಷ್ಟಿಯನ್ನೆಲ್ಲಾ

ನಡೆಸುತ್ತಿದೆ. ಈ ಪರಮ ಸತ್ಯವನ್ನು ಪರಲೋಕಕ್ಕೆ ಹೋಗುವವರೆಗೂ ಮರೆಯಬಾರದು. ಅಲ್ಲಿಗೆ ಹೋಗುವುದು ದೇಹವಲ್ಲ, ಆತ್ಮ ಎಂದು ನೆನಪಿಟ್ಟುಕೊಳ್ಳಬೇಕು.
ಈ ಆತ್ಮಕ್ಕೆ ಈ ಶರೀರ ಕೇವಲ ಒಂದು ಉಪಕರಣ ಮಾತ್ರ. ಉಪಕರಣ ನೀನಲ್ಲ. ಪರಲೋಕಕ್ಕೆ ಹೋಗುವವರೆಗೂ ಈ ಶರೀರವೆಂಬ ಉಪಕರಣವನ್ನು ಬಹಳ ಜಾಗರೂಕತೆಯಿಂದ ಇಟ್ಟುಕೊಳ್ಳುತ್ತಾ, ಉಪಯೋಗಿಸುತ್ತಾ, ಇರುವ ಸ್ಥಿತಿಯಿಂದ ಉನ್ನತ ಸ್ಥಿತಿಗೆ ಹೋಗಲು ನಿನಗೆ ಶರೀರವನ್ನು ನೀಡಲಾಗಿದೆ.

ಅದನ್ನು ದುರುಪಯೋಗಪಡಿಸಿಕೊಂಡರೆ ನೀನು ಆತ್ಮ ಹಂತಕನಾಗುತ್ತಿಯಾ. ಅದನ್ನು ಸರಿಯಾಗಿ ಉಪಯೋಗಿಸಿಕೊಂಡರೆ ದೊಡ್ಡವನಾಗುತ್ತೀಯಾ, ದೈವಸ್ವರೂಪಿಯಾಗಿ ಬೆಳೆಯುತ್ತೀಯಾ. ಇದು ಆತ್ಮ ತಂದುಕೊಂಡಿರುವ ಶರೀರ. ಇದರ ಮೇಲೆ ನಿನಗೆ ಎಂದಿಗೂ ನಿರ್ಲಕ್ಷ್ಯ ಇರಬಾರದು. ಇದನ್ನು ಅಪರೂಪವಾಗಿ, ಭದ್ರವಾಗಿ ಕಾಪಾಡಿಕೊಂಡರೆ ಮಾತ್ರ ನೀನು ಸಾಧನೆ ಮಾಡಿ ಯೋಗಾಗ್ನಿಯನ್ನು, ಜ್ಞಾನಾಗ್ನಿಯನ್ನು ಹೆಚ್ಚಿಸಿಕೊಂಡು ಆತ್ಮನನ್ನು ದೈವದ ಹತ್ತಿರಕ್ಕೆ ಸೇರಿಸುವ ಮಾರ್ಗವನ್ನು ಸಿದ್ಧಪಡಿಸಿಕೊಳ್ಳಬಹುದು. ಮತ್ತೆ ಕರ್ಮವಿದ್ದರೆ ಹೋಗಲು ಸಾಧ್ಯವಿಲ್ಲ, ಆದ್ದರಿಂದ ಜ್ಞಾನದ ಮೂಲಕ ಕರ್ಮಗಳನ್ನೆಲ್ಲ ದಹಿಸುವ ಶಕ್ತಿ ಬರುತ್ತದೆ. ಇದು ಕೇವಲ ಮಾನವನಿಗಷ್ಟೇ ನೀಡಿದ ವರ. ಇದನ್ನು ಸದ್ವಿನಿಯೋಗ ಮಾಡಿಕೊಂಡು ಸಾಧನೆ ಮಾಡುತ್ತಾ, ಜ್ಞಾನವನ್ನು ಬೆಳೆಸಿಕೊಂಡರೆ ಇದಕ್ಕಿಂತ ದೊಡ್ಡ ವರ ಇನ್ನೊಂದಿಲ್ಲ. ಜೀವನದಲ್ಲಿ ಕೋಟಿಗಳಿದ್ದರೂ ಪಡೆಯಲಾಗದ ಆನಂದವನ್ನು ಧ್ಯಾನ ಸಾಧನೆಯ ಮೂಲಕ ಪಡೆಯಬಹುದು.

ಮತ್ತೆ ಈ ಸತ್ಯವನ್ನು ತಿಳಿದುಕೊಳ್ಳಲು ಅವಕಾಶ ನೀಡಿದ ವ್ಯಾಸ ಭಗವಾನರಿಗೆ ಮತ್ತು ನಮಗೆ ತಿಳಿಸಿಕೊಟ್ಟ ಗುರುಗಳಿಗೆ ಕೋಟಿ ಕೋಟಿ ವಂದನೆಗಳು. ಮತ್ತೆ ಈ ಕಲಿಯುಗದಲ್ಲಿ ಎಲ್ಲರೂ ಪಡೆಯುತ್ತಿರುವ ಜ್ಞಾನವು ವ್ಯಾಸ ಭಗವಾನರು ಹೇಳಿದ ವೇದಗಳು, ಉಪನಿಷತ್ತುಗಳು, ಬ್ರಹ್ಮಸೂತ್ರಗಳು, ಅಷ್ಟಾದಶ ಪುರಾಣಗಳು ಮತ್ತು ಮಹಾ ಭಾರತದ ಮೂಲಕವೇ ಹೊಂದುತ್ತಿದ್ದಾರೆ. ಪ್ರಪಂಚಕ್ಕೆ ಜ್ಞಾನವನ್ನು ನೀಡಿದ ವ್ಯಾಸ ಭಗವಾನರ ಹುಟ್ಟಿದ ದಿನವನ್ನು ಎಲ್ಲರೂ ತುಂಬಾ ಸಂತೋಷದಿಂದ ಆಚರಿಸಬೇಕು. ಅದಕ್ಕಾಗಿಯೇ ಎಲ್ಲರೂ ಇದನ್ನು ಹಬ್ಬದಂತೆ ಭಾವಿಸಬೇಕು. ಆದ್ದರಿಂದಲೇ ಜ್ಞಾನಿಗಳೆಲ್ಲರಿಗೂ ಗುರು ಪೂರ್ಣಿಮೆ ಎಂದರೆ 'ವ್ಯಾಸ ಪೂರ್ಣಿಮೆ' ಎಂಬ ದೊಡ್ಡ ಹಬ್ಬ.ಅದಕ್ಕಾಗಿಯೇ ಲೋಕದಲ್ಲಿ ಎಲ್ಲರೂ ಈ ಗುರು ಪೂರ್ಣಿಮೆಯಂದು ವ್ಯಾಸ ಭಗವಾನರನ್ನು ನೆನಪಿಸಿಕೊಳ್ಳುತ್ತಾರೆ ಮತ್ತು ಗುರು ಪೂರ್ಣಿಮೆಯನ್ನು ಆಚರಿಸುತ್ತಾರೆ.

# ಮೂರ್ಖತ್ವದಿಂದ ಮುಮುಕ್ಷುತ್ವದ ಕಡೆಗೆ!

ನಾವು ಎಲ್ಲಿಂದ ಎಲ್ಲಿಗೆ ಪ್ರಯಾಣಿಸುತ್ತಿದ್ದೇವೆ? ಹುಟ್ಟಿದಾಗ ಜೀವಿಯಾಗಿ ಹೇಗಿರುತ್ತೇವೆ? ಮತ್ತೆ ಯಾವ ಪ್ರಯತ್ನ ಮಾಡಿ ದೈವವಾಗಿ ಬೆಳೆಯುತ್ತಿದ್ದೇವೆ? ಮೂರ್ಖತ್ವದಿಂದ ಮುಮುಕ್ಷುತ್ವಕ್ಕೆ (ಮೋಕ್ಷದ ಹಂಬಲ) ಹೇಗೆ ಕಾಲಿಡುತ್ತೇವೆ? ಅಸಲಿಗೆ ಮೂರ್ಖತ್ವ ಯಾವಾಗ ಬರುತ್ತದೆ? ಅದರಿಂದ ಯಾವಾಗ, ಹೇಗೆ ಹೊರಬರುತ್ತೇವೆ? ಇವೆಲ್ಲವನ್ನೂ ತಿಳಿದುಕೊಳ್ಳೋಣ.

ಒಂದು ಆತ್ಮವು ಪರಮಾತ್ಮನಿಂದ ಬೇರ್ಪಟ್ಟು ಭೂಮಿಯ ಮೇಲೆ ಬಂದಾಗ, ವಿವಿಧ ಜನ್ಮಗಳನ್ನು ಎತ್ತಿ ಕೊನೆಯದಾಗಿ ಮಾನವ ಜನ್ಮವನ್ನು ಪಡೆ-ಯುತ್ತದೆ. ಹಾಗಾದರೆ ಮಾನವ ಜನ್ಮ ಎತ್ತಿದಾಗ ಹೇಗಿರುತ್ತಾರೆ ಎಂದರೆ? ಈ ಪ್ರಪಂಚವು ಶಾಶ್ವತವೆಂದು, ಶರೀರವು ಶಾಶ್ವತವೆಂದು ಅಹಂಕಾರದಿಂದ, ಅಜ್ಞಾನದಿಂದ ವರ್ತಿಸುತ್ತಾರೆ. ಈ ಅಹಂಕಾರ, ಅಜ್ಞಾನ ಎಷ್ಟೆಷ್ಟು ಹೆಚ್ಚಾಗಿರುತ್ತದೆಯೋ ಅಷ್ಟರಮಟ್ಟಿಗೆ ಪರಮ ಮೂರ್ಖರಂತೆ ಇರುತ್ತಾರೆ. ಆದರೆ ಅವರು ಹಾಗೆಯೇ ಇರುವುದಿಲ್ಲ, ಅಭಿಪ್ರಾಯಗಳು ಬದಲಾಗುತ್ತಿರುತ್ತವೆ. ಅದಕ್ಕಾಗಿಯೇ ಪ್ರತಿ ಜನ್ಮವೂ ಉನ್ನತಿಗೆ (ಬೆಳವಣಿಗೆಗೆ) ಪೂರಕವೆಂದು ಗುರುಗಳು ಹೇಳುತ್ತಿರುತ್ತಾರೆ.

ಜೀವನದಲ್ಲಿ ಮೊದಲು ಪ್ರಾಪಂಚಿಕ ವಿದ್ಯೆಗಳನ್ನು ಕಲಿಯುತ್ತಾರೆ. ಅದರಿಂದ ಪದವಿಗಳು ಬರುತ್ತವೆ, ಅಧಿಕಾರಗಳು, ಸಂಪತ್ತು ಬರುತ್ತದೆ ಆದರೆ ಮೂರ್ಖತ್ವ ಹೋಗುವುದಿಲ್ಲ. ಆದರೆ ಪೂರ್ವಜನ್ಮದ ಸುಕೃತವಿದ್ದರೆ ಈ ಸ್ಥಿತಿಯನ್ನು ದಾಟಬಹುದು.

ಇದು ಕೇವಲ ವರ್ತಮಾನದಲ್ಲಿರುವ ಸ್ಥಿತಿಯಲ್ಲ. ಯಾರಾದರೂ ಆಧ್ಯಾತ್ಮಿಕತೆಗೆ ಬಂದಿದ್ದಾರೆ ಎಂದರೆ ಅವರಿಗೆ ಖಂಡಿತವಾಗಿಯೂ ಪೂರ್ವಜನ್ಮದ ಸತ್ಕರ್ಮಗಳ ಫಲ, ಪುಣ್ಯ ಕರ್ಮಗಳ ಫಲವಿದ್ದರೆ ಮಾತ್ರ ಬರಲು ಸಾಧ್ಯ. ಪರಮ ಮೂರ್ಖರು ಕೂಡ ಮೋಕ್ಷ ಸ್ಥಿತಿಯನ್ನು ಒಂದೇ ಜನ್ಮದಲ್ಲಿ ಪಡೆಯಬಹುದು ಎಂದು ಎಷ್ಟೋ ಜನರು ಈ ಭೂಮಿಯ ಮೇಲೆ ನಿರೂಪಿಸಿದ್ದಾರೆ. ಗಮನಿಸಿದರೆ ಈ ಮಧ್ಯಕಾಲದಲ್ಲಿ ವೇಮನನನ್ನು ತೆಗೆದುಕೊಂಡರೂ, ತ್ರೇತಾಯುಗದಲ್ಲಿ ವಾಲ್ಮೀಕಿಯನ್ನು ತೆಗೆದುಕೊಂಡರೂ ನಮಗೆ ಅರ್ಥವಾಗುತ್ತದೆ.

ರತ್ನಾಕರನಿಗೆ ಓದು ಬರಹ ಇರಲಿಲ್ಲ, ಆತ ಒಬ್ಬ ಬೇಡ. ಆತ ಅಜ್ಞಾನದಲ್ಲಿ ಹಿಂದೆ ಎಷ್ಟೋ ತಪ್ಪುಗಳನ್ನು ಮಾಡಿದ್ದರೂ, ನಾರದರು ಜ್ಞಾನವನ್ನು ಬೋಧಿಸಿದ ನಂತರ ಅವರು ಮಹಾನ್ ಋಷಿಯಾದರು, ವಾಲ್ಮೀಕಿಯಾಗಿ ಬದಲಾದರು. ಹುಟ್ಟಿನಿಂದ ಎಲ್ಲರೂ ಅಜ್ಞಾನದಲ್ಲಿ ಇರಬಹುದು ಮತ್ತು ಎಷ್ಟೋ ತಪ್ಪುಗಳನ್ನು ಮಾಡಿರಬಹುದು.

ಇಲ್ಲಿ ತಪ್ಪು ಅಂದರೆ ಸ್ವಾರ್ಥಕ್ಕಾಗಿ ಎದುರಿನವರನ್ನು ನೋಯಿಸುವುದು; ಹಾಗೆ ನೋಯಿಸುವುದು ತಪ್ಪು ಎಂದು ಕೂಡ ಅವರು ಗ್ರಹಿಸಿರುವುದಿಲ್ಲ. ಆದರೆ ನಿಮಗೆ ತಪ್ಪೆನಿಸಿದ್ದು ಎದುರಿನವರಿಗೆ ಸರಿಯಾಗಿರಬಹುದು, ನೀವು ಸರಿಯೆಂದುಕೊಂಡದ್ದು ಎದುರಿನವರನ್ನು ನೋಯಿಸಿರಬಹುದು. ಆದರೆ ಗುರುಗಳು ಬಂದ ಮೇಲೆಯೇ ಸತ್ಯವನ್ನು ತಿಳಿದುಕೊಳ್ಳುವ ಅವಕಾಶವಿರುತ್ತದೆ. ಆ ಗುರುಗಳು ಬರುವ ಮೊದಲು ಅಸತ್ಯದಲ್ಲಿ ಜೀವಿಸುತ್ತಾ, ಅದೇ ಸತ್ಯವೆಂಬ ಭ್ರಾಂತಿಯಲ್ಲಿದ್ದುಕೊಂಡು ಅಜ್ಞಾನವನ್ನು ಹೋಗಲಾಡಿಸಿಕೊಳ್ಳಲು ಸಾಧ್ಯವಾಗುವುದಿಲ್ಲ.

ಆದರೆ ಪೂರ್ವಜನ್ಮದ ಪುಣ್ಯದ ಫಲವಾಗಿ ಗುರುಗಳು ಬಂದ ನಂತರ ಆತ್ಮವಿದ್ಯೆಯನ್ನು ಕಲಿತರೆ, ಅದೇ ಮಾನವ ಜನ್ಮದ ಕೊನೆಯ ಗುರಿಯಾಗಿಬಿಡುತ್ತದೆ. ಆದ್ದರಿಂದ ತಿಳಿಯದ ವಿಷಯಗಳನ್ನು ಯಾರು ಹೇಳಿಕೊಟ್ಟರೂ ಅವರನ್ನು ಗುರುಗಳಾಗಿ ಸ್ವೀಕರಿಸಬೇಕು. ಜೀವನದಲ್ಲಿ ಗುರುಗಳು ಬಂದ ನಂತರವೇ ಸತ್ಯವು ಅರ್ಥವಾಗುತ್ತದೆ. ಆದರೆ ಸತ್ಯವನ್ನು ದರ್ಶಿಸಬೇಕೆಂದರೆ ಯಾರ ಜೀವನದಲ್ಲಾದರೂ ಮೊಟ್ಟಮೊದಲು ಇರಬೇಕಾದದ್ದು ಸಾಧನೆ. ಏಕೆಂದರೆ ಪ್ರತಿಯೊಬ್ಬ ಮನುಷ್ಯನೂ ತನ್ನ ಮನಸ್ಸಿನಂತೆಯೇ ವರ್ತಿಸುತ್ತಾನೆ. ಅಂದರೆ ಮನಸ್ಸು ಏನು ಹೇಳುತ್ತದೋ ಅದನ್ನೇ ಮಾಡುತ್ತಾನೆ. ಆ ಮನಸ್ಸು ಪ್ರಪಂಚದ ಕಡೆಗೆ ತಿರುಗಿದ್ದಾಗ ಲೋಕದ ವಾಸನೆಗಳಿಂದ ಕಲುಷಿತವಾಗುತ್ತದೆ, ಮಲಿನವಾಗುತ್ತದೆ. ಈ ಲೋಕದ ವಾಸನೆಗಳು ಇರುವವರೆಗೂ ಸ್ವಾರ್ಥವೇ ಇರುತ್ತದೆ, ಎದುರಿನವರ ಬಗ್ಗೆ ಯೋಚಿಸುವುದಿಲ್ಲ.

ಇಷ್ಟೇ ಅಲ್ಲದೆ ಈ ಮಲಿನ ಮನಸ್ಸು ಅರಿಷಡ್ವರ್ಗಗಳಿಂದ ಸ್ಥೂಲವಾಗಿ (ಭಾರವಾಗಿ) ಬಿಡುತ್ತದೆ. ಅಂದರೆ ಈ ಮನಸ್ಸು ಬೆಳೆದು ಬೆಳೆದು ದೊಡ್ಡದಾಗುತ್ತಾ ಹೋಗುತ್ತದೆ. ಮನಸ್ಸು ಯಾವಾಗ ಪ್ರಪಂಚದ ಕಡೆಗೆ ತಿರುಗಿರುತ್ತದೆಯೋ, ಎಷ್ಟು ಕೋರಿಕೆಗಳಿರುತ್ತವೆಯೋ, ಎಷ್ಟರ ಮಟ್ಟಿಗೆ ಅರಿಷಡ್ವರ್ಗಗಳಿಗೆ ದಾಸನಾಗುತ್ತದೆಯೋ, ಮನಸ್ಸು ಅಷ್ಟೇ ಸ್ಥೂಲವಾಗಿರುತ್ತದೆ. ಕಳೆದ ಜನ್ಮಗಳ ಪುಣ್ಯದಿಂದಾಗಿ ಗುರುಗಳು ಬಂದಾಗ, ಸ್ಥೂಲವಾಗಿ ಇರುವ ಮನಸ್ಸನ್ನು ಪೂರ್ಣವಾಗಿ, ಸೂಕ್ಷ್ಮವಾಗಿ ಮಾಡಿಕೊಂಡಾಗಲೇ ನೀವ್ಯಾರೆಂದು ನಿಮಗೆ ತಿಳಿಯುತ್ತದೆ.

ಆದರೆ ಗುರುವಿನ ಹತ್ತಿರ ಬಂದಾಗ ಮೊಟ್ಟಮೊದಲಿಗೆ ಸಂಯಮವನ್ನು ಪಾಲಿಸಬೇಕು. ಸಂಯಮವೆಂದರೆ ನಮ್ಮ ಬಗ್ಗೆ ನಾವು ಕಠಿಣವಾಗಿ ಇರಬೇಕು, ಎದುರಿಗಿರುವವರ ಬಗ್ಗೆ ಉದಾರವಾಗಿ ಇರಬೇಕು. ಏಕೆ ನಮ್ಮ ಬಗ್ಗೆ ನಾವು ಕಠಿಣವಾಗಿ ಇರಬೇಕು? ಎಂದರೆ, ನಾವು ಕಠಿಣವಾಗಿ ಇರದಿದ್ದರೆ ನಮಗೆ ಇಂದ್ರಿಯ ನಿಗ್ರಹ ಬರುವುದಿಲ್ಲ. ಇಂದ್ರಿಯ ನಿಗ್ರಹ ಏಕೆ ಇರಬೇಕು? ಎಂದರೆ ಇಂದ್ರಿಯಗಳ ಮೂಲಕವೇ

ಈ ಮನಸ್ಸು ಸ್ಥೂಲವಾಗಿ (ಜಡವಾಗಿ) ಹೋಗುತ್ತದೆ.

ಈಗ ಯಾವುದಾದರೂ ನೋಡಬಾರದ ವಿಷಯವನ್ನು ಒಂದು ಸಾರಿಯೂ ನೋಡದಿದ್ದರೆ ಮನಸ್ಸು ತುಂಬಾ ಹಗುರವಾಗಿರುತ್ತದೆ. ಒಂದು ನೋಡಬಾರದ ವಿಷಯವನ್ನು ನೋಡುತ್ತಾ, ಅದರ ಬಗ್ಗೆ ಹತ್ತು ಜನರೊಂದಿಗೆ ಮಾತನಾಡುತ್ತಾ, ಆ ವಿಷಯಗಳನ್ನು ಯಾರಾದರೂ ಹೇಳಿದರೆ ಕೇಳುತ್ತಾ ಇದ್ದರೆ, ಈ ಸೂಕ್ಷ್ಮವಾಗಿರುವ ಮನಸ್ಸು ಸ್ಥೂಲವಾಗಿ ಹೋಗುತ್ತದೆ. ಅದು ಧ್ಯಾನಕ್ಕೆ ಅಡ್ಡಿಯಾಗುತ್ತದೆ. ಅದಕ್ಕೇ ಗುರುಗಳು ಮೊಟ್ಟಮೊದಲಿಗೆ ಹೇಳುವುದೇನೆಂದರೆ: ಇಂದ್ರಿಯ ನಿಗ್ರಹ ಇರಬೇಕು ಎಂದು. ಇಂದ್ರಿಯ ನಿಗ್ರಹ ಎಂದರೆ ಯಾವುದನ್ನೂ ನೋಡಬಾರದು ಎಂದಲ್ಲ. ನೋಡಬಾರದ್ದನ್ನು ನೋಡಬಾರದು, ಕೇಳಬಾರದ್ದನ್ನು ಕೇಳಬಾರದು, ಅನ್ನಬಾರದ್ದನ್ನು ಅನ್ನಬಾರದು, ತಿನ್ನಬಾರದ್ದನ್ನು ತಿನ್ನಬಾರದು – ಹೀಗೆ ಕೆಲವು ನಿಯಮಗಳನ್ನು ಪಾಲಿಸಬೇಕು. ಕಾರಣವೇನೆಂದರೆ, ಮನಸ್ಸು ಪ್ರಪಂಚದ ಕಡೆಗೆ ತಿರುಗಿ ಸ್ಥೂಲವಾಗಿ ಹೋಗಿದೆ, ಅದನ್ನು ಸೂಕ್ಷ್ಮ ಮಾಡಬೇಕಾದರೆ, ಇಂದ್ರಿಯಗಳ ಮೂಲಕವೇ ಮನಸ್ಸು ಸ್ಥೂಲವಾಗಿರುವುದರಿಂದಲೂ, ಅದರ ಮೂಲಕ ಮನುಷ್ಯನು ಅರಿಷಡ್ವರ್ಗಗಳನ್ನು ಕಡಿಮೆ ಮಾಡಿಕೊಳ್ಳಲು ಸಾಧ್ಯವಾಗದಿರುವುದರಿಂದಲೂ, ಅವುಗಳನ್ನು ಕಡಿಮೆ ಮಾಡಿಕೊಳ್ಳಬೇಕಾದರೆ ಮೊದಲು ಇಂದ್ರಿಯ ಸಂಯಮ ಬೇಕು.

ಆ ಇಂದ್ರಿಯ ಸಂಯಮವನ್ನು ಪಾಲಿಸುವಾಗ ನಿಮ್ಮ ಬಗ್ಗೆ ನೀವು ತುಂಬಾ ಕಠಿಣವಾಗಿ ನಡೆದುಕೊಳ್ಳಬೇಕು. ಏಕೆಂದರೆ? ಪ್ರಪಂಚದ ಕಡೆಗೆ ತಿರುಗಿ ನೀವು ಆನಂದವಾಗಿ ಇಲ್ಲ. ಆನಂದವಾಗಿ ಇರಲು, ನಿಮ್ಮ ಸ್ವರೂಪವನ್ನು ನೀವು ತಿಳಿದುಕೊಳ್ಳಲು ಕಠಿಣವಾಗಿ ನಡೆದುಕೊಳ್ಳಬೇಕು. ಗುರುಗಳನ್ನು ಭೇಟಿಯಾದ ತಕ್ಷಣವೇ ಹೇಳಿದರು ನೀನು ಶರೀರವಲ್ಲ, ಆತ್ಮ. ಆತ್ಮವೇ ಭಗವಂತ, ಆ ಭಗವಂತನೇ ನೀನು ಎಂದು ಇಷ್ಟೆಲ್ಲಾ ವಿಷಯಗಳನ್ನು ನಮಗೆ ಬೋಧಿಸಿದರೂ, ಮನಸ್ಸಿಗಿರುವ ಗುಣಗಳಿಂದಾಗಿ ಮತ್ತು ಆ ಸ್ಥೂಲ ಮನಸ್ಸಿನಿಂದಾಗಿ ನಮಗೆ ನಂಬಿಕೆ ಬರುವುದಿಲ್ಲ.

ಅದಕ್ಕಾಗಿಯೇ ಗುರುಗಳು ನಮ್ಮ ಆಹಾರದ ಬಗ್ಗೆ ಜಾಗರೂಕರಾಗಿರಬೇಕು ಎಂದು ಹೇಳುತ್ತಾರೆ. ಏಕೆಂದರೆ ಆಹಾರದಿಂದಲೇ ಮನಸ್ಸು ರೂಪಿತವಾಗುತ್ತದೆ. ಆದ್ದರಿಂದ ಇಂದ್ರಿಯ ನಿಗ್ರಹದಲ್ಲಿ ಮೊದಲ ಪಾತ್ರ ಆಹಾರದ್ದೇ ಆಗಿದೆ. ನಾವು ಆಹಾರವನ್ನು ಎಷ್ಟು ಜಾಗರೂಕತೆಯಿಂದ ಸೇವಿಸುತ್ತೇವೆಯೋ, ಅಷ್ಟು ಚೆನ್ನಾಗಿ ಮನಸ್ಸು ಶುದ್ಧಿಯಾಗುತ್ತದೆ (Purify). ಮನಸ್ಸು ಶುದ್ಧಿಯಾಗುವುದೆಂದರೆ ನಾನೇ ಕಷ್ಟಪಟ್ಟರೂ ಪರವಾಗಿಲ್ಲ, ಎದುರಿಗಿರುವವರನ್ನು ಎಂದಿಗೂ ಕಷ್ಟಪಡಿಸಬಾರದು ಎಂದುಕೊಳ್ಳುವುದು. ಇದು ಮಹಾತ್ಮರ ಲಕ್ಷಣ. ತಮ್ಮ ಆನಂದಕ್ಕಾಗಿ ಎದುರಿಗಿರುವವರನ್ನು ಕಷ್ಟಪಡಿಸುವುದು

ಮೂರ್ಖರ ಲಕ್ಷಣ. ಅದಕ್ಕಾಗಿಯೇ ಇಲ್ಲಿಗೆ ಬರುವಾಗ ನೀವು ಮೊದಲು ಮನಸ್ಸನ್ನು ನಿಯಂತ್ರಿಸುತ್ತಾ, ಮಾತನ್ನು ಹತೋಟಿಯಲ್ಲಿಟ್ಟುಕೊಂಡು, ಸರಿಯಾದ ಆಹಾರವನ್ನು ಸೇವಿಸುತ್ತಾ, ಸರಿಯಾದ ವ್ಯವಹಾರದಲ್ಲಿರಬೇಕು. ಇದೇ ಇಂದ್ರಿಯ ಸಂಯಮ.
ಹಾಗೆಯೇ ಸಾಧನೆ ಮಾಡುವಾಗ ಪಟ್ಟುಹಿಡಿತ (ಛಲ) ಮತ್ತು ಸಹನೆ ಇರಬೇಕು. ಇವೆಲ್ಲವೂ ಸಾಧನೆಯಲ್ಲಿ ಉನ್ನತ ಸ್ಥಿತಿಯನ್ನು ತಲುಪಲು ಮಾರ್ಗಗಳಾಗುತ್ತವೆ. ಸಾಧನೆ ಮಾಡುವಾಗ ಇನ್ನೂ ಇನ್ನೂ ಮಾಡಬೇಕು ಎಂದು ಅನಿಸಬೇಕೇ ಹೊರತು ತೃಪ್ತಿಪಡಬಾರದು. ತೃಪ್ತಿಪಟ್ಟರೆ ಸೋಂಬೇರಿತನ ಆವರಿಸುತ್ತದೆ. ಕೆಲವೊಮ್ಮೆ ಸಾಧನೆ ಮಾಡುವಾಗ ತುಂಬಾ ಕಷ್ಟವೆನಿಸಬಹುದು, ಆದರೆ ಆ ಕಷ್ಟವನ್ನು ಕೂಡ ಇಷ್ಟವಾಗಿ ಬದಲಾಯಿಸಿಕೊಳ್ಳುವುದನ್ನು ರೂಢಿಸಿಕೊಳ್ಳಬೇಕು.

ಆಧ್ಯಾತ್ಮಿಕ ಯೋಗದಲ್ಲಿ ಪ್ರವೇಶಿಸುವುದು ಎಂದರೆ ಇಂದ್ರಿಯ ನಿಗ್ರಹ, ಪಟ್ಟುಹಿಡಿತ, ಸಹನೆ, ಇವೆಲ್ಲವನ್ನೂ ರೂಢಿಸಿಕೊಳ್ಳುವುದು. ಆಗಲೇ ಸಾಧನೆಯಲ್ಲಿ ಬಹಳ ಉತ್ತಮವಾಗಿ ಮುಂದುವರಿಯುತ್ತೀರಿ. ಯಾವಾಗ ನೀವು ಬಾಹ್ಯದಿಂದ ಅಂತರಂಗಕ್ಕೆ ಬರುತ್ತೀರೋ, ಆಗ ನೀವು ಆತ್ಮವನ್ನು ತಿಳಿಯಲು, ಆತ್ಮದ ಹತ್ತಿರಕ್ಕೆ ಸೇರಲು ಪ್ರಯತ್ನಿಸುತ್ತಿದ್ದೀರಿ ಎಂದರ್ಥ. ಆಧ್ಯಾತ್ಮಿಕ ಮಾರ್ಗವೆಂದರೆ ಆತ್ಮದೊಂದಿಗೆ ಅನುಸಂಧಾನವಾಗುವುದಕ್ಕೆ ನಿಮ್ಮ ಮನಸ್ಸು ಪ್ರಯತ್ನಿಸುತ್ತಿದೆ ಎಂದು ಇದರ ಅರ್ಥ. ಇಲ್ಲಿ ಮನಸ್ಸು ಮತ್ತು ಆತ್ಮದ ಮಿಲನವನ್ನೇ 'ಆತ್ಮ ಯೋಗ' ಎಂದು ಕರೆಯುತ್ತಾರೆ, ಇದನ್ನೇ 'ಆಧ್ಯಾತ್ಮಿಕ ಯೋಗ' ಎಂದೂ ಹೇಳಲಾಗುತ್ತದೆ. ಹೊರಗಿನ ವಿಷಯಗಳಲ್ಲಿರುವ ಮನಸ್ಸನ್ನು ಅಂತರಂಗದ ಕಡೆಗೆ ತಿರುಗಿಸುವುದೇ ಆಧ್ಯಾತ್ಮಿಕ ಯೋಗದ ಪ್ರವೇಶ.

**ಆಧ್ಯಾತ್ಮಿಕ ಯೋಗದ ಪ್ರವೇಶ:**

ಈ ಆಧ್ಯಾತ್ಮಿಕ ಯೋಗದಲ್ಲಿ ಪ್ರವೇಶಿಸಿದವರು:

- ಬಾಹ್ಯ ವಿಷಯಗಳ ಮೇಲಿನ ಆಸಕ್ತಿಯನ್ನು ಕಡಿಮೆ ಮಾಡಿಕೊಳ್ಳುತ್ತಾರೆ.
- ಇಂದ್ರಿಯ ನಿಗ್ರಹವನ್ನು ಪಾಲಿಸುತ್ತಾರೆ.
- ಛಲದಿಂದ ಧ್ಯಾನ ಮಾಡುತ್ತಾರೆ.
- ಗುರುವಿನ ಮಾತುಗಳನ್ನು ಆಲಿಸುತ್ತಾ ಮುಂದೆ ಸಾಗುತ್ತಾರೆ.

ಹೀಗೆ ಮಾಡಿದಾಗ ಅವರಲ್ಲಿರುವ ಕೆಟ್ಟ ಗುಣಗಳು ಕ್ರಮೇಣ ಮರೆಯಾಗಿ, ಒಳ್ಳೆಯ ಗುಣಗಳು ಪ್ರವೇಶಿಸುತ್ತವೆ. ಸೇವಾ ಮನೋಭಾವ ಮತ್ತು ಅರಿಷಡ್ವರ್ಗಗಳ ನಿಯಂತ್ರಣ ಒಳ್ಳೆಯ ಗುಣಗಳು ಬರುವುದೆಂದರೆ ಸ್ವಾರ್ಥ ದೂರವಾಗಿ, ತ್ಯಾಗಬುದ್ಧಿ ಮೂಡುವುದು ಎಂದರ್ಥ. "ನಾನು ಯಾಕೆ ಮಾಡಬೇಕು?" ಎಂಬ ಸ್ವಾರ್ಥವಿದ್ದವರು, **"ಸರ್ವ ಜೀವಿಗಳ ಸೇವೆಯೇ ಸರ್ವೇಶ್ವರನ ಸೇವೆ"** ಎಂದು ತಿಳಿದುಕೊಂಡು

ತ್ಯಾಗಬುದ್ಧಿಯಿಂದ ಬದುಕುತ್ತಾರೆ. ಅಂತಹ ಸೇವಾ ಮಾರ್ಗದಲ್ಲಿದ್ದಾಗ ಮಾತ್ರ ಭಗವಂತನ ಕೃಪೆ ಲಭಿಸುತ್ತದೆ ಎಂದು ತಿಳಿದಾಗ ಸೇವೆ, ಪ್ರೇಮ, ತ್ಯಾಗದಂತಹ ಗುಣಗಳು ಮೈಗೂಡುತ್ತವೆ.

ಆಗ ಅವರಲ್ಲಿರುವ ಅರಿಷಡ್ವರ್ಗಗಳು (ಕಾಮ, ಕ್ರೋಧ, ಲೋಭ, ಮೋಹ, ಮದ, ಮಾತ್ಸರ್ಯ) ಶಾಂತವಾಗಿರುತ್ತವೆ. ಶಾಂತವಾಗಿರುವುದು ಎಂದರೆ ಅವು ಸಂಪೂರ್ಣವಾಗಿ ಇಲ್ಲದಿರುವುದಲ್ಲ, ಬದಲಾಗಿ ನಿಯಂತ್ರಣದಲ್ಲಿರುವುದು ಎಂದರ್ಥ. ಅಂದರೆ ಅಗತ್ಯವಿದ್ದಾಗ ಮಾತ್ರ ಅವುಗಳನ್ನು ಬಳಸಬೇಕು, ಇಲ್ಲದಿದ್ದರೆ ಅವುಗಳನ್ನು ವಿಜೃಂಭಿಸಲು ಬಿಡದೆ ಅಧ್ಯಾತ್ಮದ ಹಾದಿಯಲ್ಲಿ ಆತ್ಮದ ಕಡೆಗೆ ಪ್ರಯಾಣಿಸಬೇಕು.
ಏಕತ್ವದ ಸಾಕ್ಷಾತ್ಕಾರ ಒಂದೇ ಮಾತಿನಲ್ಲಿ ಹೇಳಬೇಕೆಂದರೆ, ಹೊರಗಿನ ಪ್ರಾಪಂಚಿಕ ವಿಷಯಗಳ ಕಡೆಗೆ ತಿರುಗಿರುವ ಮನಸ್ಸನ್ನು ಅಂತರಂಗದ ಆತ್ಮದ ಕಡೆಗೆ ತಿರುಗಿಸುವುದೇ

ಇದರ ಉದ್ದೇಶ. ಈ ಮನಸ್ಸನ್ನು ಭಿನ್ನತ್ವದಿಂದ (ವೈವಿಧ್ಯತೆ) ಏಕತ್ವದ ಕಡೆಗೆ ತರಬೇಕು. ಸೃಷ್ಟಿಯನ್ನು ನೋಡಿದಾಗ ಅದು ಭಿನ್ನವಾಗಿ ಕಾಣುತ್ತದೆ, ಆದರೆ ಆತ್ಮದ ಕಡೆಗೆ ತಿರುಗಿದಾಗ ಎಲ್ಲವೂ ಒಂದೇ, ಎಲ್ಲವೂ ಆತ್ಮಮಯ ಎಂಬುದು ಅರ್ಥವಾಗುತ್ತದೆ. ಕೇವಲ ರೂಪಗಳನ್ನು ನೋಡಿದರೆ ಮನಸ್ಸು ಭಿನ್ನತ್ವದಲ್ಲಿರುತ್ತದೆ, ಆದರೆ ಆ ರೂಪಗಳ ಹಿಂದಿರುವ ಚೈತನ್ಯವನ್ನು ನೋಡಿದಾಗ ಏಕತ್ವದ ಅನುಭವವಾಗುತ್ತದೆ.

ಯೋಗ ಎಂದರೆ ಸಂಯೋಗ, ಅಂದರೆ ಮನಸ್ಸನ್ನು ಆತ್ಮದಲ್ಲಿ ಲೀನವಾಗಿಸುವುದು. ಆಗ ಅದು ಮನಸ್ಸಾಗಿ ಉಳಿಯುವುದಿಲ್ಲ, ಕೇವಲ ಆತ್ಮವಾಗಿಯೇ ಉಳಿಯುತ್ತದೆ. ನಾವು ಸೇವಾ ಮಾರ್ಗದಲ್ಲಿದ್ದಾಗ ಅಧ್ಯಾತ್ಮಿಕ ವಿಷಯಗಳನ್ನು ಬೋಧಿಸುತ್ತಿದ್ದರೆ, ಅಧ್ಯಾತ್ಮಿಕವಾಗಿ ಉನ್ನತ ಸ್ಥಿತಿ ಲಭಿಸುತ್ತದೆ. ಅಷ್ಟೇ ಅಲ್ಲ, ನೀನೇ ದೇವರು ಎಂದು ತಿಳಿದುಕೊಳ್ಳಬೇಕು. ಅಂತಹ ಜ್ಞಾನ ಪಡೆದಾಗ, ನೀನು ಆತ್ಮನಾಗಿ ಜೀವಿಸುತ್ತಿದ್ದೀಯೆ ಎಂದು ಅರಿವಾದಾಗ, ನೀನು ಮಾಡುವ ಕೆಲಸಗಳೆಲ್ಲವೂ ಆತ್ಮೋನ್ನತಿಗಾಗಿ ನಡೆಯುವ ಕೆಲಸಗಳೇ ಎಂದು ಅರ್ಥವಾಗುತ್ತದೆ.

ಇವೆಲ್ಲವನ್ನೂ ಸಾಧಿಸಬೇಕೆಂದರೆ ಆ ಗುರುಗಳು ಹೇಳಿದ ಸಾಧನೆ, ಆಚಾರ್ಯರ ಸಾಂಗತ್ಯ, ಸ್ವಾಧ್ಯಾಯ ಮತ್ತು ಸೇವೆ – ಇವುಗಳನ್ನು ತಪ್ಪದೇ ಪಾಲಿಸಿದರೆ ಮೋಕ್ಷ ಸ್ಥಿತಿಯನ್ನು ತಲುಪಬಹುದು. ಮಾತುಗಳನ್ನು ಯಾರು ಬೇಕಾದರೂ ಹೇಳಬಹುದು, ಪಂಡಿತರು ಕೂಡ ಗಿಳಿಪಾಠದಂತೆ ಒಪ್ಪಿಸಬಹುದು. ಆದರೆ ಹಾಗೆ ಹೇಳುವವರೆಲ್ಲರೂ ಮೋಕ್ಷ ಸ್ಥಿತಿಗೆ ತಲುಪಲಾರರು. ಕಾರಣ ಆಚರಣೆ ಮುಖ್ಯ. ಅದಕ್ಕಾಗಿಯೇ ಪತ್ರೀಜಿಯವರು, **"ತಾನು ಆಚರಿಸಿ, ಹತ್ತು ಜನರಿಂದ ಆಚರಿಸುವಂತೆ ಮಾಡುವವನೇ ಆಚಾರ್ಯನಾಗುತ್ತಾನೆ"** ಎಂದು ಹೇಳಿದ್ದಾರೆ.

ಅದಕ್ಕಾಗಿಯೇ ನೀನು ಆಚರಿಸಿದ ಮಾತುಗಳನ್ನೇ ಹತ್ತು ಜನರಿಗೆ ಹೇಳು. ಹೇಳುವುದು ತುಂಬಾ ಸುಲಭ, ಆದರೆ ಹೇಳುವವರೆಲ್ಲರೂ ಆಚಾರ್ಯರಾಗುವುದಿಲ್ಲ. ಆಚರಿಸಿ ಹೇಳುವವನೇ ನಿಜವಾದ ಆಚಾರ್ಯ. ಅದಕ್ಕಾಗಿಯೇ ಸುಮ್ಮನೆ 'ಆಚಾರ್ಯ' ಎಂಬ ಬಿರುದನ್ನು ಎಲ್ಲರಿಗೂ ನೀಡುವುದಿಲ್ಲ. ಆದ್ದರಿಂದ ನಾವೇನೋ ದೊಡ್ಡ ಮಟ್ಟಕ್ಕೆ ಬೆಳೆದುಬಿಟ್ಟಿದ್ದೇವೆ ಎಂದು ಯಾರೂ ಅಂದುಕೊಳ್ಳಬೇಡಿ. **"ಗುರುಗಳು ಹೇಳಿದ್ದರಲ್ಲಿ ನಾನು ಎಷ್ಟರ ಮಟ್ಟಿಗೆ ಆಚರಿಸಿದ್ದೇನೆ? ಹೇಳಿದ ಪ್ರತಿಯೊಂದು ವಿಷಯವನ್ನೂ ಆಚರಿಸಲು ಸಾಧ್ಯವಾಗುತ್ತಿದೆಯೇ?"** ಎಂದು ನಿಮ್ಮನ್ನು ನೀವೇ ಪ್ರಶ್ನಿಸಿಕೊಳ್ಳಿ.

ಆಚರಿಸಿದರೆ ಮಾತ್ರ ಹೇಳಿ. ಆಚರಿಸದ ಮಾತುಗಳನ್ನು ಹೇಳುವುದರಿಂದ ಜನರಲ್ಲಿ ನಂಬಿಕೆ ಇರುವುದಿಲ್ಲ ಮತ್ತು ಆ ಮಾತಿಗೆ ಬೆಲೆಯೂ ಇರುವುದಿಲ್ಲ.

ಅದಕ್ಕಾಗಿಯೇ ಶಂಕರಾಚಾರ್ಯರು **"ಮೋಹಕ್ಷಯವೇ ಮೋಕ್ಷ"** ಎಂದಿದ್ದಾರೆ. ಮೋಹ ಇರುವವರೆಗೂ ದುಃಖ ಇದ್ದೇ ಇರುತ್ತದೆ. ಮೋಹವಿಲ್ಲದ ಸ್ಥಿತಿಯಲ್ಲೇ ನೀವು ದುಃಖವಿಲ್ಲದ ಸ್ಥಿತಿಯಲ್ಲಿರುತ್ತೀರಿ. ಈ ಮೋಹವು ಬಂಧನದಿಂದ ಹುಟ್ಟುತ್ತದೆ. **'ನಾನು', 'ನನ್ನವರು'** ಎಂಬ ಬಂಧನ ಹೋಗಬೇಕು. ನನ್ನ ಶರೀರ, ನನ್ನ ರಕ್ತ ಸಂಬಂಧಿಗಳು ಎಂಬ ಭಾವನೆಯಿಂದ ಸಂಭ್ರಮಿಸಬಾರದು.

ಕಾರಣವೇನೆಂದರೆ ಬಂಧವು ಶಾಶ್ವತವಲ್ಲ. **"ನಾನು ದೇಹವಲ್ಲ, ಆತ್ಮ"** ಎಂದು ಗುರುಗಳು ಹೇಳಿದ್ದಾರೆ. ಆತ್ಮನಾದ ನನಗೆ ಯಾರೊಂದಿಗೂ ಬಂಧವಿಲ್ಲ ಎಂದು ಭಾವಿಸುತ್ತಿರಬೇಕು. ಏಕೆ? ನಾನು ದೇಹ ಎಂದು ಅಂದುಕೊಂಡರೆ ದುಃಖ ಉಂಟಾಗುತ್ತದೆ, ನಾನು ಆತ್ಮ ಎಂದು ಅಂದುಕೊಂಡರೆ ದುಃಖವಿಲ್ಲದ ಸ್ಥಿತಿ ಬರುತ್ತದೆ. ನಾನು ಆತ್ಮ ಎಂದು ಭಾವಿಸಿದರೆ ಎಲ್ಲವನ್ನೂ ಬಿಡಬಲ್ಲಿರಿ. ಅದೇ ದೇಹ ಎಂದು ಭಾವಿಸಿದರೆ ಎಲ್ಲವನ್ನೂ ಹಿಡಿದಿಟ್ಟುಕೊಳ್ಳುತ್ತೀರಿ.

ಮತ್ತೆ ಸತ್ಯ ತಿಳಿದಿದ್ದರೂ ಸತ್ಯವನ್ನು ಏಕೆ ಹಿಡಿದುಕೊಳ್ಳಲು ಸಾಧ್ಯವಾಗುತ್ತಿಲ್ಲ ಎಂದರೆ? ನಿಮಗೆ ಎಲ್ಲೋ ಒಂದು ಸಣ್ಣ ಅನುಮಾನವಿದೆ. ಗುರುವಿನ ಮಾತಿನ ಮೇಲೆ ಅನುಮಾನ, ಸತ್ಯದ ಮೇಲೆ ಅನುಮಾನ. ಹೃದಯಪೂರ್ವಕವಾಗಿ ನೀವು ಭಗವಂತನನ್ನು ಪ್ರೀತಿಸುತ್ತಿಲ್ಲ. **"ಜನರು ಏನು ಅಂದುಕೊಳ್ಳುತ್ತಾರೋ ಎಂದು ಮಾಡುತ್ತಿದ್ದೀರೆ ಹೊರತು, ಲೋಕೇಶ್ವರನು (ದೇವರು) ಏನು ಅಂದುಕೊಳ್ಳುತ್ತಾನೋ ಎಂದು ಮಾಡುತ್ತಿಲ್ಲ"**.

ಅದಕ್ಕಾಗಿಯೇ ಜನರು ಏನೇ ಅಂದುಕೊಂಡರೂ, ಲೋಕೇಶ್ವರನಿಗೆ ಮೆಚ್ಚುಗೆಯಾಗುವ ಕೆಲಸಗಳನ್ನು ಮಾಡಿ, ಆತನಿಗೆ ಇಷ್ಟವಾಗುವ ಮಾತುಗಳನ್ನು ಆಡಿದರೆ ಈ ಭೂಮಿಯ ಮೇಲಿರುವಾಗಲೇ ಮೋಕ್ಷ ಸ್ಥಿತಿಗೆ ತಲುಪುತ್ತೀರಿ. ಎಂದೋ ಭಗವಂತನ ಕೃಪೆಯಿಂದ ನಿಮಗೆ ಗುರುವು ಸಿಕ್ಕಿದ್ದಾರೋ.. ಅವರ ಮಾತುಗಳನ್ನು ಅಕ್ಷರಶಃ ತಪ್ಪದೇ ಪಾಲಿಸುವ

ಅವಶ್ಯಕತೆಯಿದೆ. ಆಗಲೇ ಆ ಮೂರ್ಖತನವನ್ನು ಬಿಡುತ್ತೀರಿ, ದುಃಖವನ್ನು ಬಿಡುತ್ತೀರಿ ಮತ್ತು ಬಂಧನಗಳನ್ನು ಬಿಡುತ್ತೀರಿ.

ಅಸಲಿಗೆ ಬಂಧವಿದ್ದರೇನೇ ಸಂಕಟ, ಭಯ. ಬಂಧವು ಹೋಗಿಬಿಡುತ್ತದೆಯೇನೋ ಎಂಬ ಸಂಕಟ, ಜನರು ಏನು ಅಂದುಕೊಳ್ಳುತ್ತಾರೋ ಎಂಬ ಭಯ. ಇವೆರಡರ ಕಾರಣದಿಂದಲೇ ಬಂಧನಗಳು ಬಂದಿವೆ. ಬಂಧನವಿರುವವರೆಗೆ ದುಃಖ ಹೋಗದು, ಮೂರ್ಖತನ ಹೋಗದು. ಅವುಗಳೆರಡು ಹೋಗಬೇಕೆಂದರೆ ಗುರುಗಳು ಹೇಳಿದಂತೆ ಸಾಧನೆ ಮತ್ತು ಸ್ವಾಧ್ಯಾಯ (ಆತ್ಮಾವಲೋಕನ/ಅಧ್ಯಯನ) ಮಾಡಬೇಕು. ಹಾಗೆಯೇ ಆಹಾರ ನಿಯಮಗಳನ್ನು ಕಟ್ಟುನಿಟ್ಟಾಗಿ ಪಾಲಿಸಬೇಕು. ಈ ಮೂರೂ ಇದ್ದರೆ ಮನುಷ್ಯನು ಉನ್ನತ ಸ್ಥಿತಿಯತ್ತ ಸಾಗುತ್ತಾನೆ ಮತ್ತು ಮೋಕ್ಷ ಸ್ಥಿತಿಯಲ್ಲಿ ಇರಬಲ್ಲನು.

ಅದಕ್ಕಾಗಿಯೇ **"ಮೂರ್ಖನಾಗಿ ಹುಟ್ಟುವುದು ತಪ್ಪಲ್ಲ, ಅಜ್ಞಾನಿಯಾಗಿ ಹುಟ್ಟುವುದು ತಪ್ಪಲ್ಲ, ಆದರೆ ಜ್ಞಾನಿಯಾಗಿ ಮರಣ ಹೊಂದಬೇಕು"**. ನಿಮ್ಮ ಜೀವನದಲ್ಲಿ ಗುರುವು ಬಂದಾಗ ಅಜ್ಞಾನದಿಂದ ಜ್ಞಾನದ ಕಡೆಗೆ ಸಾಗಬೇಕು, ಮೂರ್ಖತ್ವದಿಂದ ಮುಮುಕ್ಷುತ್ವದ (ಮೋಕ್ಷದ ಕಾಂಕ್ಷೆ) ಕಡೆಗೆ ಸಾಗಲು ಪ್ರಯತ್ನಿಸಬೇಕು. ಇಲ್ಲದಿದ್ದರೆ ಈ ಸಾಧನೆಯು ನಿನಗೆ ಉಪಯೋಗಕ್ಕೆ ಬರುವುದಿಲ್ಲ. ಆದ್ದರಿಂದ ಎಷ್ಟು ಸಾಧನೆ ಮಾಡಿದ್ದೇವೆ ಎಂಬುದು ಮುಖ್ಯವಲ್ಲ; ಸಾಧನೆ ಮಾಡಿದ ಮೇಲೆ ನಾನು ಏನನ್ನು ಬಿಟ್ಟಿದ್ದೇನೆ? ವಿಷಯಗಳ ಬಗ್ಗೆ ವಿರಕ್ತಿ ಉಂಟಾಗಿದೆಯೇ? ಬಾಹ್ಯ ವ್ಯಾಮೋಹವನ್ನು ಬಿಟ್ಟಿದ್ದೇನೆಯೇ? ಇಲ್ಲವೇ? ಎಂದು ನಾವೇ ಪರಿಶೀಲಿಸಿಕೊಳ್ಳಬೇಕು.

ನೀನು ವಿಷಯಾಸಕ್ತಿಯನ್ನು ಬಿಟ್ಟರೆ ಮಾತ್ರ ಆಧ್ಯಾತ್ಮದಲ್ಲಿ ಉನ್ನತ ಶಿಖರಗಳನ್ನು ಏರಲು ಸಾಧ್ಯವಾಗುತ್ತದೆ. ಬಾಹ್ಯದಿಂದ ಅಂತರಂಗದ ಕಡೆಗೆ ಪ್ರಯಾಣಿಸಿದಾಗ ನೀನೇ ಆತ್ಮ ಎಂದು ತಿಳಿದು, ಆತ್ಮವಾಗಿ ಭೂಮಿಯ ಮೇಲೆ ಬದುಕುವುದೇ ಮೋಕ್ಷ ಸ್ಥಿತಿ.

- ನಾನು ಮನಸ್ಸು, ನಾನು ಜೀವ, ನಾನು ಶರೀರ ಎಂದು ಅಂದುಕೊಂಡರೆ ಎಲ್ಲರಿಂದ ಎಲ್ಲವನ್ನೂ ನಿರೀಕ್ಷಿಸುತ್ತಾ ಇರುತ್ತೀಯ.
- ಅದೇ 'ನಾನು ಆತ್ಮ', 'ನಾನೇ ಭಗವಂತ' ಎಂದು ತಿಳಿದುಕೊಂಡರೆ ಎಲ್ಲರಿಗೂ ನೀಡಬೇಕು ಎಂದು ಹಂಬಲಿಸುತ್ತೀಯ.

ಪಡೆಯುವುದರಲ್ಲಿ ದುಃಖವಿದೆ, ನೀಡುವುದರಲ್ಲಿ ಆನಂದವಿದೆ ಎಂದು ತಿಳಿದುಕೊಳ್ಳಬೇಕು. ಈ ಆನಂದವನ್ನು ಅವರವರೇ ಅನುಭವಿಸಬೇಕು. ಅದಕ್ಕಾಗಿಯೇ ಮೂರ್ಖತ್ವದಿಂದ ಮುಮುಕ್ಷುತ್ವದ ಕಡೆಗೆ ಪ್ರಯಾಣ ಬೆಳೆಸಿದರೆ ಮಾತ್ರ ಮಾನವ ಜನ್ಮ ಸಾರ್ಥಕವಾಗುತ್ತದೆ. ಅದಕ್ಕೆ ಉತ್ತಮ ಸಾಧನೆ ಇರಬೇಕು. ಸಾಧನೆಗೆ ಅನುಕೂಲವಾಗುವಂತೆ ಶರೀರ ಮತ್ತು ಮನಸ್ಸನ್ನು ಇಟ್ಟುಕೊಳ್ಳಬೇಕು. ಇವೆರಡೂ

ಆಹಾರದ ಮೇಲೆ ಅವಲಂಬಿತವಾಗಿರುವುದರಿಂದ, ಆಹಾರವನ್ನು ಮಿತವಾಗಿ ಮತ್ತು ಸರಿಯಾಗಿ ಸೇವಿಸಿದರೆ ನಡವಳಿಕೆಯೂ ಸರಿಯಾಗಿರುತ್ತದೆ. ಆಗ ಶರೀರ ಮತ್ತು ಮನಸ್ಸಿನ ಸ್ಥಿತಿಗಳನ್ನು ಮೀರಿ ಆತ್ಮ ಸ್ಥಿತಿಯನ್ನು ಪ್ರವೇಶಿಸಿ, ಆತ್ಮವಾಗಿಯೇ ಉಳಿಯುತ್ತಾರೆ. ಆತ್ಮವಾಗಿ ಬೆಳೆಯುವುದೇ ಮೋಕ್ಷ ಸ್ಥಿತಿಯನ್ನು ತಲುಪಿದಂತೆ.

## ಅಹಂಕಾರವನ್ನು ತೊಡೆದುಹಾಕುವುದು ಹೇಗೆ?

ಪ್ರತಿಯೊಬ್ಬರೂ ಆತ್ಮವನ್ನು ಅನ್ವೇಷಿಸುತ್ತಿದ್ದಾರೆ. ಅಂದರೆ ಆತ್ಮದರ್ಶನಕ್ಕಾಗಿ, ಆತ್ಮಾನುಭೂತಿಗಾಗಿ ಪ್ರಯತ್ನಿಸುತ್ತಿದ್ದಾರೆ. ಇಷ್ಟೊಂದು ಪ್ರಯತ್ನ ಮಾಡುತ್ತಿದ್ದರೂ ಇನ್ನೂ ಏಕೆ ಸಾಧಿಸಲು ಸಾಧ್ಯವಾಗುತ್ತಿಲ್ಲ ಎಂದರೆ? ನಿಮ್ಮಲ್ಲಿರುವ ಲೋಪದೋಷಗಳನ್ನು ಮತ್ತು ಅಹಂಕಾರಗಳನ್ನು ನೀವು ಬಿಡದ ಕಾರಣದಿಂದಲೇ.

ಆ ಲೋಪಗಳನ್ನು ಸರಿಪಡಿಸಿಕೊಳ್ಳುವವರೆಗೂ ಆತ್ಮಾನುಭೂತಿ ಉಂಟಾಗುವುದಿಲ್ಲ. ಆದರೆ ಸಜ್ಜನರ ಸಹವಾಸದಲ್ಲಿ (ಸತ್ಸಂಗದಲ್ಲಿ) ಪಾಲ್ಗೊಂಡಾಗ ಮಾತ್ರ ನಾವು ಎಲ್ಲಿ ತಪ್ಪು ಮಾಡುತ್ತಿದ್ದೇವೆ ಎಂಬುದು ತಿಳಿಯುತ್ತದೆ. ಆಗ ಆ ತಪ್ಪುಗಳನ್ನು ತಿದ್ದಿಕೊಳ್ಳುತ್ತಾ ಮುಂದೆ ಸಾಗಬಹುದು. ನಿಮಗೆ ಎಷ್ಟೋ ವಿಷಯಗಳು ಗೊತ್ತು ಎಂದು ನೀವು ಅಂದುಕೊಳ್ಳುತ್ತೀರಿ. ಆದರೆ ಎಲ್ಲವೂ ತಿಳಿಯದು; ಒಂದು ವೇಳೆ ಎಲ್ಲವೂ ತಿಳಿದುಬಿಟ್ಟರೆ ಈ ಭೂಮಿಯ ಮೇಲೆ ಇರುವುದೇಕೆ? ಅದಕ್ಕಾಗಿಯೇ ಎಲ್ಲವೂ ತಿಳಿದಿದೆ ಎಂದುಕೊಳ್ಳುವುದು ಅಹಂಕಾರ, ಇನ್ನೂ ತಿಳಿದುಕೊಳ್ಳಬೇಕಾದದ್ದು ಇದೆ ಅಂದುಕೊಳ್ಳುವುದು ವಿನಯ. ನೀವು ಎಷ್ಟು ವಿನಯದಿಂದ ಇರುತ್ತೀರೋ ಅಷ್ಟು ಜ್ಞಾನವು ಹೆಚ್ಚುತ್ತಾ ಹೋಗುತ್ತದೆ. ಅಹಂಕಾರವಿದ್ದಾಗ ಕಲಿಯುವುದು ಏನೂ ಇಲ್ಲ ಎಂದು ಭಾವಿಸುತ್ತೀರಿ. ಅಹಂಕಾರವಿಲ್ಲದಿದ್ದರೆ ಇನ್ನೂ ಕಲಿಯುವುದು ಬಾಕಿ ಇದೆ ಎಂದು ಭಾವಿಸುತ್ತೀರಿ. ಆದುದರಿಂದ ಅಸಲಿಗೆ ಅಹಂಕಾರ ಎಂದರೆ ಏನು? ಅದು ಹೇಗೆ ಉಂಟಾಗುತ್ತದೆ? ಈ ಅಹಂಕಾರವನ್ನು ತೊಡೆದುಹಾಕುವುದು ಹೇಗೆ? ಎಂಬ ವಿಷಯಗಳನ್ನು ತಿಳಿದುಕೊಳ್ಳೋಣ. ಲೌಕಿಕ ಜೀವನದಲ್ಲಿರುವ ನೀವು ಆಧ್ಯಾತ್ಮಿಕ ಜೀವನಕ್ಕೆ ಪ್ರವೇಶಿಸಿದ ಮೇಲೆ ಒಂದೊಂದೇ ಮೆಟ್ಟಿಲನ್ನು ಏರಬೇಕು. ಲೌಕಿಕ ಜೀವನದಲ್ಲಿ ಧರ್ಮ–ಅಧರ್ಮ, ಸುಖ–ದುಃಖಗಳಂತಹ ದ್ವಂದ್ವಗಳಿರುತ್ತವೆ. ಇವೆಲ್ಲವೂ ಮನಸ್ಸು ಮತ್ತು ಬುದ್ಧಿಯ ಲಕ್ಷಣಗಳು. ಇವುಗಳಿಗೂ ಆತ್ಮಕ್ಕೂ ಯಾವುದೇ ಸಂಬಂಧವಿಲ್ಲ. ಆತ್ಮಕ್ಕೆ ಕರ್ತೃತ್ವ ಮತ್ತು ಭೋಕ್ತೃತ್ವಗಳಿರುವುದಿಲ್ಲ. "ನಾನು ಮಾಡುತ್ತಿದ್ದೇನೆ" ಎನ್ನುವುದು ಕರ್ತೃತ್ವ ಭಾವನೆ. ಅಂದರೆ ಈ ಕೆಲಸವನ್ನು ನಾನು

ಮಾಡುತ್ತಿದ್ದೇನೆ, ಈ ಕೆಲಸ ನನ್ನಿಂದ ಆಗುತ್ತಿದೆ ಎನ್ನುವುದೇ ಕರ್ತೃತ್ವ. ಕಷ್ಟ ಸುಖಗಳನ್ನು ನಾನು ಅನುಭವಿಸುತ್ತಿದ್ದೇನೆ ಎಂದುಕೊಳ್ಳುವುದು ಭೋಕ್ತೃತ್ವ.

ಉದಾಹರಣೆಗೆ ನೀವು ಒಂದು ಕೆಲಸ ಮಾಡಿದ್ದೀರಿ, ಅದನ್ನು ತುಂಬಾ ಚೆನ್ನಾಗಿ ಮಾಡಿದ್ದೀರಿ ಎಂದು ಎಲ್ಲರೂ ಪ್ರಶಂಸಿಸಿದರು. ಹಾಗೆ ಹೊಗಳಿದಾಗ ಸಂತೋಷವಾಗುತ್ತದೆ. ಆ ಸಂತೋಷವನ್ನು ಮನಸ್ಸು ಅನುಭವಿಸುತ್ತಿರುತ್ತದೆ. ಅದಕ್ಕಾಗಿಯೇ ಬಾಹ್ಯ ಪ್ರಪಂಚದಲ್ಲಿ ಮಾಡುವ ಪ್ರತಿಯೊಂದು ಕೆಲಸವನ್ನೂ ನಾನೇ ಮಾಡುತ್ತಿದ್ದೇನೆ, ನಾನೇ ಕರ್ತೃ ಎಂದು ಬುದ್ಧಿಯಲ್ಲಿರುವ ಅಹಂಕಾರವು ಅಂದುಕೊಳ್ಳುತ್ತದೆ. ಮತ್ತು ನನಗೆ ದುಃಖ ಅದರ ಕಾರಣದಿಂದ ಬಂತು, ಇದರ ಕಾರಣದಿಂದ ಬಂತು, ಅವರ ಕಾರಣದಿಂದ ಬಂತು ಅಥವಾ ಇವರ ಕಾರಣದಿಂದ ಬಂತು; ನನ್ನ ಪತಿ ಕಷ್ಟ ಕೊಡುತ್ತಿದ್ದಾರೆ, ನಮ್ಮ ಮನೆಯವರು ಕಷ್ಟ ಕೊಡುತ್ತಿದ್ದಾರೆ ಎಂದು ಪದೇ ಪದೇ ಅಂದುಕೊಳ್ಳುವುದೇ ಭೋಕ್ತೃತ್ವ.

"ನಾನು ಮಾಡುತ್ತಿದ್ದೇನೆ" ಎಂಬ ಭಾವನೆ ಬುದ್ಧಿಗೆ ಸಂಬಂಧಿಸಿದ್ದು. "ನಾನು ಅನುಭವಿಸುತ್ತಿದ್ದೇನೆ" ಎಂಬ ಭಾವನೆ ಮನಸ್ಸಿಗೆ ಸಂಬಂಧಿಸಿದ್ದು. **"ಮಾಡುತ್ತಿದ್ದೇನೆ ಎಂಬ ಭಾವನೆಯೇ ಕರ್ತೃತ್ವ, ಅನುಭವಿಸುತ್ತಿದ್ದೇನೆ ಎಂಬ ಭಾವನೆಯೇ ಭೋಕ್ತೃತ್ವ"**. ಇವೆರಡೂ ಮನಸ್ಸು ಮತ್ತು ಬುದ್ಧಿಗೆ ಸೇರಿದವು. ಇವೆರಡು ಸೇರಿದಾಗಲೇ ಅಹಂಕಾರ ಉಂಟಾಗುತ್ತದೆ. ಈ ಅಹಂಕಾರವು ಮಿತಿಮೀರಿದಾಗ, ನೀವು "ನಾನು ಎಷ್ಟೋ ಕೆಲಸಗಳನ್ನು ಮಾಡುತ್ತಿದ್ದೇನೆ" ಎಂದು ಅಂದುಕೊಂಡಾಗ ಬುದ್ಧಿಯಲ್ಲಿ ಅಹಂಕಾರವು ಹೆಚ್ಚಾಗುತ್ತದೆ. ಹಾಗೆಯೇ ಕೆಲವು ವಿಷಯಗಳಲ್ಲಿ ಸಂತೋಷ ಬರುತ್ತದೆ, ಕೆಲವು ವಿಷಯಗಳಲ್ಲಿ ದುಃಖ ಬರುತ್ತದೆ. ಹೊಗಳಿದಾಗ ಸಂತೋಷವಾಗುತ್ತದೆ, ವಿಮರ್ಶಿಸಿದಾಗ ದುಃಖವಾಗುತ್ತದೆ. ಮತ್ತೆ ಇವೆರಡನ್ನೂ ಅನುಭವಿಸುತ್ತಾ, ಇದು ಅವರ ಕಡೆಯಿಂದ ಬಂದಿದೆ, ಇದು ಇವರ ಕಡೆಯಿಂದ ಬಂದಿದೆ ಎಂದು ನಿಮಗೇ ನೀವೇ ಅಂದುಕೊಳ್ಳುತ್ತೀರಿ. ಹಾಗೆ ಬುದ್ಧಿ ಮತ್ತು ಮನಸ್ಸಿನೊಂದಿಗೆ ತಾದಾತ್ಮ್ಯ ಹೊಂದುತ್ತೀರಿ. ಜೀವನದಲ್ಲಿ ಸ್ವಲ್ಪ ಸಮಯ ದುಃಖ, ಸ್ವಲ್ಪ ಸಮಯ ಸಂತೋಷ, ಕೆಲವರ ಮೇಲೆ ಅನುರಾಗ, ಕೆಲವರ ಮೇಲೆ ದ್ವೇಷ – ಇವೆಲ್ಲವೂ ಅಹಂಕಾರಕ್ಕೆ ಸಂಬಂಧಿಸಿದವೇ. ಆದರೆ ಇವುಗಳನ್ನು ಅನುಭವಿಸುತ್ತಾ ಕರ್ಮಗಳನ್ನು ಕೂಡಿಸಿಕೊಳ್ಳುತ್ತೀರಿ.

ಅದಕ್ಕಾಗಿಯೇ ಪತ್ರೀಜಿ ಅವರು ಹಲವು ಬಾರಿ ಹೇಳಿದ್ದಾರೆ: **"ಪ್ರತಿಯೊಂದಕ್ಕೂ ಕಾಮೆಂಟ್‌ಗಳು ಅಥವಾ ಜಡ್ಜ್‌ಮೆಂಟ್‌ಗಳನ್ನು ನೀಡಬೇಡಿ"** ಎಂದು. ಅದನ್ನು ನಾವು ಯಾವುದೋ ಒಂದು ಕೊಟೇಶನ್ ಆಗಿ ತೆಗೆದುಕೊಂಡು ಹತ್ತು ಜನರಿಗೆ ಹೇಳುತ್ತಿದ್ದೇವೆಯೇ ಹೊರತು, ಅದರ ಆಳಕ್ಕೆ ಹೋಗಿ "ಸಾರ್ ನಮಗೆ ಇದನ್ನು ಏಕೆ ಹೇಳಿದರು?" ಎಂದು ಆಲೋಚಿಸುತ್ತಿಲ್ಲ. "ಅವನಿಂದ ದುಃಖ ಬಂತು" ಎಂದು ವಿಮರ್ಶಿಸುತ್ತಿದ್ದೀರಿ. "ಅವರಿಂದ ದುಃಖ ಬಂತು" ಎಂದು ನೀವು ಹೇಳುತ್ತಿದ್ದೀರಿ ಎಂದರೆ ನಿಮ್ಮ ಮನಸ್ಸು ಆ ದುಃಖದೊಂದಿಗೆ ತಾದಾತ್ಮ್ಯ ಹೊಂದಿದೆ. ನೀನು

ಜಡ್ಜ್‌ಮೆಂಟ್ (ತೀರ್ಪು) ನೀಡಿ ನಿನ್ನ ಮನಸ್ಸಿಗೆ ಇನ್ನಷ್ಟು ಬಲವನ್ನು ಒದಗಿಸುತ್ತಿದ್ದೀಯೆ.

ಅವರು ಇಂತಹವರು, ಅಂತಹವರು ಎಂದು ಜಡ್ಜ್‌ಮೆಂಟ್ ನೀಡುತ್ತಿದ್ದೀಯೆ ಎಂದರೆ ನಿನ್ನ ಬುದ್ಧಿಯಲ್ಲಿ ಅದು ತಪ್ಪು, ಒಪ್ಪು ಎಂಬ ನಿರ್ಧಾರ ಮಾಡುತ್ತಿದ್ದೀಯೆ ಎಂದರ್ಥ. ಆದ್ದರಿಂದಲೇ ನಿನ್ನ ಬುದ್ಧಿಯಲ್ಲಿ ಕರ್ತೃತ್ವ ಭಾವ (ನಾನೇ ಮಾಡುತ್ತಿದ್ದೇನೆಂಬ ಭಾವನೆ) ಇದೆ. ಆ ಕಾರ್ಯಕ್ಕೆ ಕಾರಣ ಅವರೇ ಆದಾಗ ನೀವೇಕೆ ಜಡ್ಜ್‌ಮೆಂಟ್ ನೀಡಬೇಕು? ಅವಶ್ಯಕತೆಯಿಲ್ಲ, ಆದರೆ ಮನುಷ್ಯರು ಸುಮ್ಮನಿರುವುದಿಲ್ಲ; ಹಾಗೆಯೇ ಅಹಂಕಾರವನ್ನು ಬೆಳೆಸಿಕೊಳ್ಳುತ್ತಾರೆ. **"ಯಾವಾಗದಾರೆ ಎದುರಿಗಿರುವ ವ್ಯಕ್ತಿಯನ್ನು ವಿಮರ್ಶಿಸುತ್ತೀರೋ, ಯಾವಾಗಾದರೆ ಎದುರಿಗಿರುವ ವ್ಯಕ್ತಿಯ ಬಗ್ಗೆ ನಿರ್ಧಾರಗಳನ್ನು ತೆಗೆದುಕೊಳ್ಳುತ್ತೀರೋ, ಆಗ ನಿಮ್ಮಲ್ಲಿ ಅಹಂಕಾರ ಹೆಚ್ಚುತ್ತಾ ಹೋಗುತ್ತದೆ."**

ಅದಕ್ಕಾಗಿಯೇ ಕರ್ತೃತ್ವ, ಭೋಕ್ತೃತ್ವಗಳು ಇದ್ದರೆ ಅಹಂಕಾರ ಬೆಳೆಸಿಕೊಳ್ಳುತ್ತಾ ಹೋಗುತ್ತಾರೆ. ಅಹಂಕಾರ ಹೇಗೆ ಏರ್ಪಟ್ಟಿತು ಎಂದು ಹೇಳಲು ಅಷ್ಟಾವಕ್ರರು ಹೇಳಿರುವ ವಿಷಯವೇನೆಂದರೆ: ಕರ್ತೃತ್ವ, ಭೋಕ್ತೃತ್ವಗಳ ಮೂಲಕವೇ ಅಹಂಕಾರ ಉಂಟಾಗುತ್ತದೆ. ಅವುಗಳನ್ನು ಬಿಟ್ಟುಬಿಟ್ಟರೆ ಅಹಂಕಾರವು ತೊಲಗಿ ಹೋಗುತ್ತದೆ. ಈ ಕರ್ತೃತ್ವ, ಭೋಕ್ತೃತ್ವ ಇವೆರಡನ್ನೂ ಬಿಟ್ಟು ನೀನು ಸಾಕ್ಷಿಯಾಗಿ ಇರಲು ಕಲಿಯಬೇಕು. ಏಕೆಂದರೆ ಆತ್ಮಕ್ಕೆ ಸಾಕ್ಷಿ ತತ್ವವೇ ಹೊರತು, ಹೇಳುವುದು ಇಲ್ಲ, ಅನುಭವಿಸುವುದು ಇಲ್ಲ. ಅದಕ್ಕಾಗಿಯೇ ಆತ್ಮ ಸ್ಥಿತಿಯಲ್ಲಿರುವ ವ್ಯಕ್ತಿ ಸಾಕ್ಷೀಭೂತನಾಗಿ ನೋಡುತ್ತಾನೆ.

ಶಂಕರಾಚಾರ್ಯರು ಸಾಧಕನಿಗೆ ಶ್ರವಣ, ಮನನ, ನಿಧಿದ್ಧ್ಯಾಸ, ಸಾಕ್ಷಾತ್ಕಾರ ಎಂಬ ನಾಲ್ಕು ಹಂತಗಳು ಇರಬೇಕೆಂದು ಹೇಳಿದ್ದಾರೆ. ಅಂದರೆ ಗುರುವಿನ ಬಳಿ

ಶ್ರದ್ಧೆಯಿಂದ ಕೇಳಬೇಕು, ಅದು ಶ್ರವಣ. ಕೇಳಿದ್ದನ್ನು ಪದೇ ಪದೇ ಮನನ ಮಾಡಿಕೊಳ್ಳಬೇಕು. ಒಮ್ಮೆ ಕೇಳಿ ಬಿಟ್ಟುಬಿಟ್ಟರೆ ಅದು ಅಧಮ ಶ್ರವಣವಾಗುತ್ತದೆ; ಪದೇ ಪದೇ ಮನನ ಮಾಡಿಕೊಂಡರೆ ಅದು ನಿನ್ನಲ್ಲಿ ಸ್ಥಿರವಾಗಿ ನಿಧಿದ್ಧ್ಯಾಸವಾಗಿ ಬದಲಾಗುತ್ತದೆ. ಅಂದರೆ ನೀನು 'ಆತ್ಮ' ಎನ್ನುವ ಧ್ಯಾನವು ನಿನ್ನಲ್ಲಿ ನಿಧಿಯಾಗಿ ಉಳಿಯುತ್ತದೆ. ಹೇಗೆ ಬಂಗಾರದ ಗಣಿಯಲ್ಲಿ ಬಂಗಾರ ಹೆಚ್ಚಾಗಿರುತ್ತದೆಯೋ, ಹಾಗೆಯೇ ಲೋಹಗಳು, ಖನಿಜಗಳು ಗಣಿಗಳಲ್ಲಿ ಸಿಗುತ್ತವೆ. ಈಗ ನೋಡುತ್ತಿರುವ ಕಲ್ಲಿದ್ದಲು ಗಣಿಗಳಲ್ಲಿ ತೋಡಿದಷ್ಟೂ ಕಲ್ಲಿದ್ದಲು ಸಿಗುತ್ತದೆ. ಹಾಗೆಯೇ ಇಂತಹ ಗಣಿಗಳಲ್ಲಿ ಎಲ್ಲವೂ ಸಮೃದ್ಧಿಯಾಗಿ ಸಿಗುತ್ತವೆ. ಅದನ್ನೇ 'ನಿಧಿ' ಎನ್ನುತ್ತಾರೆ. ಹಾಗೆಯೇ ನಮ್ಮ ಹೃದಯದಲ್ಲಿರುವ ಆ ಗಣಿಯಲ್ಲಿ 'ಆತ್ಮ' ಎಂಬ ನಿಧಿಯಿದೆ. ಅಂದರೆ ನೀನು ಆತ್ಮ ಎಂದು ಗುರುಗಳು ಹೇಳಿದಾಗ, ಪದೇ ಪದೇ ಮನನ (ಧ್ಯಾನ) ಮಾಡಿದರೆ, 'ನಾನು ಆತ್ಮ' ಎಂಬ ಭಾವವು ಮನಸ್ಸಿನಲ್ಲಿ ಸ್ಥಿರವಾಗುತ್ತದೆ. ಅದನ್ನೇ 'ನಿಧಿಧ್ಯಾಸನ'

ಎನ್ನುತ್ತಾರೆ. ಅಂದರೆ ನಿನಗೆ ಆ ಭಾವವು ಸ್ಥಿರವಾಗಬೇಕು. ಹಾಗೆ ಸ್ಥಿರವಾದಾಗ ಎಲ್ಲವನ್ನೂ ಸಾಕ್ಷಿಯಾಗಿ ಗಮನಿಸುತ್ತೀಯೇ ಹೊರತು ಯಾವುದಕ್ಕೂ ಕಾಮೆಂಟ್ ಮಾಡುವುದಿಲ್ಲ ಅಥವಾ ತೀರ್ಪು ನೀಡುವುದಿಲ್ಲ ಎಂದು ಶಂಕರಾಚಾರ್ಯರು ಈ ನಾಲ್ಕು ವಿಷಯಗಳನ್ನು ತಿಳಿಸಿದ್ದಾರೆ.

ಬುದ್ಧಿ ಮತ್ತು ಮನಸ್ಸು 'ನಾನು' ಎಂದು ನೀನು ಅಂದುಕೊಳ್ಳುತ್ತಿದ್ದೀಯಾ. ಈ ಕರ್ತೃತ್ವ (ಮಾಡುವವನು) ಮತ್ತು ಭೋಕ್ತೃತ್ವ (ಅನುಭವಿಸುವವನು) ಇವೆರಡೂ ನನ್ನದೇ ಎಂದು ಅಂದುಕೊಂಡರೆ ಬುದ್ಧಿಯಲ್ಲಿ ಅಹಂಕಾರ ಮತ್ತು ಮನಸ್ಸಿನಲ್ಲಿ ಅಹಂಕಾರ ಬೆಳೆದು ಮಿತಿಮೀರುತ್ತದೆ. ಈ ಅಹಂಕಾರವೇ ಗರ್ವವಾಗಿ ಉತ್ತುಂಗಕ್ಕೇರುತ್ತದೆ.
ಯಾರಾದರೂ ಹೊಗಳಿದಾಗ ಅಥವಾ ಏನಾದರೂ ಮಾಡುತ್ತಿರುವಾಗ ಅಹಂಕಾರ ಮಿತಿಮೀರಿದರೆ, 'ನಾನು ಮಾಡಿದ್ದೆಲ್ಲವೂ ಸರಿ' ಎಂದು ಗರ್ವಪಡುತ್ತೀಯಾ. ಅದಕ್ಕಾಗಿಯೇ ಯಾವುದನ್ನೂ ಮಾತನಾಡದೆ, ವಿಮರ್ಶಿಸದೆ, ಮನಸ್ಸಿನೊಂದಿಗೆ ಗುರುತಿಸಿಕೊಳ್ಳದೆ (ತಾದಾತ್ಮ್ಯ ಹೊಂದದೆ) ಮತ್ತು ಬುದ್ಧಿಯೊಂದಿಗೆ ಗುರುತಿಸಿಕೊಳ್ಳದೆ ಇದ್ದರೆ ಈ ಅಹಂಕಾರವನ್ನು ಕಡಿಮೆ ಮಾಡಿಕೊಳ್ಳಬಹುದು.

ಹಾಗಾದರೆ ಏನು ಮಾಡಬೇಕು? ನಡೆಯುವುದು ನಡೆಯುತ್ತದೆ ಎಂದು ಸಾಕ್ಷಿಯಾಗಿ ನೋಡಬೇಕು. ಆಧ್ಯಾತ್ಮಿಕ ಜೀವನಕ್ಕೆ ಕಾಲಿಟ್ಟ ಮೇಲೆ ಧ್ಯಾನ ಸಾಧನೆ ಮಾಡುತ್ತಿರುವಾಗ ಆತ್ಮದಿಂದ ನಿಮಗೆ ಹೆಚ್ಚು ಸಂಕೇತಗಳು ಬರುತ್ತವೆ. ಅಂತಹ ಸಮಯದಲ್ಲಿ ಆ ಕೆಲಸಗಳನ್ನು ಮಾಡಬೇಕೆಂದು ಅನಿಸಿ ಮಾಡುತ್ತಿರುತ್ತೀರಿ. ಹಾಗೆ ಪರಮಾತ್ಮನ ಬಗ್ಗೆ ಕೆಲಸ ಮಾಡುತ್ತಿರುವಾಗ ಅಂದರೆ ಧ್ಯಾನದ ಬಗ್ಗೆ ಬೋಧಿಸುವುದು ಅಥವಾ ಧ್ಯಾನದ ತರಗತಿಗಳನ್ನು ಆಯೋಜಿಸುವುದು ಇಂತಹವುಗಳನ್ನು ಮಾಡುತ್ತಿದ್ದರೆ, ಅದು ಪರಮಾತ್ಮನ ಆದೇಶವೆಂದು ಭಾವಿಸಬೇಕು. ಅದರ ಫಲಿತಾಂಶವೂ ಆತನದೇ ಎಂದುಕೊಳ್ಳದೆ 'ನಾನು ಮಾಡುತ್ತಿದ್ದೇನೆ' ಅಂದರೆ ನಿಮಗೆ ಅಹಂಕಾರವಿದ್ದಂತೆ.
ಅಂದರೆ ನಿಮ್ಮ ಬುದ್ಧಿಯು ಅಹಂಕಾರದೊಂದಿಗೆ ಬೆರೆತಿದೆ. ಹಾಗೆಯೇ 'ತರಗತಿ ಬಹಳ ಯಶಸ್ವಿಯಾಯಿತು, ನನಗೆ ಎಷ್ಟು ಸಂತೋಷವಾಗಿದೆ' ಎಂದು ಹೇಳುತ್ತಾರೆ. ಅಂದರೆ...
ಅದರ ಆನಂದವನ್ನು ಮನಸ್ಸು ಅನುಭವಿಸಿತು. ಅದಕ್ಕಾಗಿಯೇ ಬುದ್ಧಿಯಲ್ಲಿರುವ ಅಹಂಕಾರ ಮತ್ತು ಮನಸ್ಸಿನಲ್ಲಿರುವ ಅಹಂಕಾರ – ಈ ಎರಡೂ ಅಹಂಕಾರಗಳು ಇದ್ದು ಕೆಳಗೆ ಇಳಿಯುತ್ತಿರುವೆ. 'ನಾನು ಆತ್ಮನ ಮೂಲಕ ಮಾಡುತ್ತಿದ್ದೇನೆ' ಎಂಬ ಭಾವನೆ ಅಲ್ಲಿಲ್ಲ.

ಪ್ರಾಪಂಚಿಕವಾಗಿ ಜೀವಿಸುವವನಿಗೆ ಇದು ತಿಳಿಯದಿರಬಹುದು. ಪ್ರಾಪಂಚಿಕ

ಜೀವನದಲ್ಲಿ ಏನನ್ನಾದರೂ ಮಾಡಿದರೆ, "ನಾನು ದೊಡ್ಡ ಮನೆ ಕಟ್ಟಿಸಿದೆ", "ನಾನು ದೊಡ್ಡ ಕಾರು ಕೊಂಡುಕೊಂಡೆ" ಎಂದು ಪ್ರತಿಯೊಂದನ್ನೂ ದೇಹಕ್ಕೆ ಸಂಬಂಧಿಸಿ ಮಾತನಾಡುತ್ತಾರೆ. "ನಾನು ಮಾಡಿದ್ದರಿಂದಲೇ ಆಯಿತು", "ನಾನು ಕಷ್ಟಪಟ್ಟೆ", "ನಾನು ಇದನ್ನು ಮಾಡಿದೆ, ಅದನ್ನು ಮಾಡಿದೆ" ಎಂಬ ಮಾತುಗಳನ್ನು ಪ್ರಾಪಂಚಿಕ ಜೀವನದಲ್ಲಿ ಸಹಜವಾಗಿ ಬಳಸುತ್ತಾರೆ.

ಆದರೆ ಆಧ್ಯಾತ್ಮಿಕ ಜೀವನದಲ್ಲಿ, 'ನೀನು ಮಾಡಬೇಕು' ಎಂದು ಬರುವ ನಿನ್ನ ಭಾವನೆ ಮತ್ತು ಸಂಕಲ್ಪವು ಆತ್ಮನಿಂದಲೇ ನಿನಗೆ ಬರುತ್ತಿರುತ್ತದೆ. ಆದರೆ ನೀನು ಈ ಅರಿವನ್ನು ಕಳೆದುಕೊಂಡಾಗ, ಇನ್ನೂ ಮನಸ್ಸು ಮತ್ತು ಬುದ್ಧಿಗೆ ಪ್ರಾಧಾನ್ಯತೆ ನೀಡಿ ಕರ್ತೃತ್ವ (ಮಾಡುವವನು ನಾನೇ) ಮತ್ತು ಭೋಕ್ತೃತ್ವ (ಅನುಭವಿಸುವವನು ನಾನೇ) ಭಾವದಲ್ಲಿ ಜೀವಿಸುತ್ತಿರುವಾಗ, ನಿನಗೆ ಇನ್ನೂ 'ದೇಹವೇ ನಾನು' ಎಂಬ ಭಾವನೆ ಬಿಟ್ಟಿಲ್ಲ ಎಂಬುದು ಪರಮಾತ್ಮನಿಗೂ ಅರ್ಥವಾಗುತ್ತದೆ, ಗುರುವಿಗೂ ಅರ್ಥವಾಗುತ್ತದೆ. ಈ ಎರಡನ್ನೂ ಬಿಡಬೇಕು. "ನಾನು ಆತ್ಮ, ಈ ಭೂಮಿಯ ಮೇಲೆ ಇದು ನಡೆಯಬೇಕು ಎನ್ನುವುದು ಪರಮಾತ್ಮನ ಸಂದೇಶ ಮತ್ತು ಪರಮಾತ್ಮನ ಸಂಕಲ್ಪ; ಅದು ನನ್ನ ಮೂಲಕ ಮಾಡಲ್ಪಟ್ಟಿದೆ" ಎಂದು ತಿಳಿದುಕೊಳ್ಳಬೇಕು.

ಆಧ್ಯಾತ್ಮಿಕತೆಗೆ ಸಂಬಂಧಿಸಿದ ಪ್ರತಿ ಕೆಲಸವೂ ನಿಮ್ಮ ಮೂಲಕ ಮಾಡಿಸಲ್ಪಡುತ್ತದೆ ಅಷ್ಟೇ, ಆದರೆ ನೀವು ಯಾವುದನ್ನೂ ಮಾಡುತ್ತಿಲ್ಲ. "ನಾನು ಮಾಡುತ್ತಿದ್ದೇನೆ", "ನನಗೆ ಸಂತೋಷವಾಯಿತು", "ದುಃಖವಾಯಿತು" ಎಂದು ಕರ್ತೃತ್ವ ಮತ್ತು ಭೋಕ್ತೃತ್ವವನ್ನು ನಿಮ್ಮ ಮೇಲೆ ಹಾಕಿಕೊಂಡರೆ, ಅದು ಮನಸ್ಸು ಮತ್ತು ಬುದ್ಧಿಗೆ ಅಹಂಕಾರವನ್ನು ಹೆಚ್ಚಿಸಿದಂತೆ. ಅಷ್ಟಾವಕ್ರರು ಜನಕ ಮಹಾರಾಜನಿಗೆ ಇದೇ ಬೋಧನೆಯನ್ನು ಮಾಡುತ್ತಾ, ಮೊದಲನೆಯದಾಗಿ ಬಂಧನ ಹೇಗೆ ಉಂಟಾಯಿತು ಎಂದು ತಿಳಿಸಿದರು. ಆ ಬಂಧನವು ಮನಸ್ಸು ಮತ್ತು ಬುದ್ಧಿಯದ್ದಾದ ಕಾರಣ, ಮೊದಲು ಈ ಬುದ್ಧಿ ಮತ್ತು ಮನಸ್ಸಿನ ಅಹಂಕಾರವನ್ನು ತಗ್ಗಿಸಬೇಕು. ಅಂದರೆ, "ನಾನು ಮಾಡುತ್ತಿದ್ದೇನೆ" ಎಂಬ ಭಾವವನ್ನು ಬಿಟ್ಟು, "ನನಗೆ ದುಃಖವಾಯಿತು, ನನಗೆ ಸಂತೋಷವಾಯಿತು" ಎಂಬ ಭಾವನೆಯನ್ನು ತ್ಯಜಿಸಿದಾಗ, ಮನಸ್ಸು ಮತ್ತು ಬುದ್ಧಿಯು ಅಹಂಕಾರದೊಂದಿಗೆ ತಾದಾತ್ಮ್ಯ ಹೊಂದವು ಎಂದು ಅವರು ಹೇಳಿದರು.

ಕರ್ತೃತ್ವ ಮತ್ತು ಭೋಕ್ತೃತ್ವವನ್ನು ನಿಮ್ಮ ಮೇಲೆ ಹಾಕಿಕೊಂಡಿರುವುದರಿಂದಲೇ ನೀವು ಇನ್ನೂ ಈ ಭೂಮಿಯ ಮೇಲೆ ಒಬ್ಬ ಜೀವಿಯಾಗಿ ವ್ಯವಹರಿಸುತ್ತಿದ್ದೀರಿ ಮತ್ತು ಆ ಅಹಂಕಾರವನ್ನು ಪೋಷಿಸುತ್ತಿದ್ದೀರಿ. 'ಅಹಂ' ಅಂದರೆ 'ನಾನು ಶರೀರ' ಎಂದುಕೊಂಡಾಗಲೇ 'ನಾನೇ ಮಾಡುತ್ತಿದ್ದೇನೆ' ಎಂಬ ಭಾವನೆ ಬರುತ್ತದೆ. ಬಾಹ್ಯವಾಗಿ

ಒಂದು ವೇಳೆ ಹೇಳಬೇಕಾದ ಪರಿಸ್ಥಿತಿ ಬಂದರೆ ಹೊರಗಿನ ದ್ವಂದ್ವದಲ್ಲಿ ಇರಬಹುದು, ಆದರೆ ಅಂತರಂಗದಲ್ಲಿ ತಕ್ಷಣವೇ ಇವು ಯಾವುದೂ ನನ್ನ ಧರ್ಮಗಳಲ್ಲ ಅಂದರೆ ಇವು 'ಆತ್ಮ ಧರ್ಮಗಳು' ಅಲ್ಲ ಎಂದು ತಿಳಿದುಕೊಳ್ಳಬೇಕು.

ಕರ್ತೃತ್ವ (ಮಾಡುವವನು ನಾನೇ), ಭೋಕ್ತೃತ್ವ (ಅನುಭವಿಸುವವನು ನಾನೇ) ಆಗಲಿ, ಅಹಂಕಾರ–ಮಮಕಾರಗಳಾಗಲಿ ಅಥವಾ ರಾಗ–ದ್ವೇಷಗಳಾಗಲಿ ಯಾವುದೂ ಆತ್ಮದ ಗುಣಗಳಲ್ಲ. ಆದ್ದರಿಂದ ಆತ್ಮವು ಎಲ್ಲವನ್ನೂ ಸಾಕ್ಷಿಯಾಗಿ ಗಮನಿಸುತ್ತದೆ. 'ನಾನು ಕೂಡ ನನ್ನ ಶರೀರವನ್ನು ಉಪಯೋಗಿಸುತ್ತಿದ್ದೇನೆ ಮತ್ತು ಆತ್ಮಶಕ್ತಿಯಿಂದ ಕೆಲಸ ಮಾಡುತ್ತಿದ್ದೇನೆ, ಆದ್ದರಿಂದ ಅವುಗಳಿಗೆ ಸಂಬಂಧಿಸಿದ ಯಾವುದೇ ಫಲಿತಾಂಶಗಳು ನನ್ನದಲ್ಲ' ಎಂಬ ಅರಿವು ಇರಬೇಕು.

ಅಂದರೆ ಒಂದು ಕೆಲಸ ಮಾಡುತ್ತಿರುವಾಗ ಯಾರಾದರೂ ಹೊಗಳಿದರೆ 'ಅದು ನನ್ನಿಂದಲೇ ಆಗಿದೆ' ಎಂದುಕೊಂಡು ಸಂತೋಷಪಡುತ್ತಿದ್ದೀರಿ. ಯಾರಾದರೂ ಬೈದರೆ 'ನಾನು ಇಷ್ಟೊಂದು ಕಷ್ಟಪಟ್ಟು ಕೆಲಸ ಮಾಡಿದರೂ ಎಲ್ಲರೂ ನನ್ನನ್ನೇ ಟೀಕಿಸುತ್ತಿದ್ದಾರೆ' ಎಂದು ದುಃಖಪಡುತ್ತಿದ್ದೀರಿ ಎಂದರೆ, ನೀವು ಈ ಎರಡನ್ನೂ ಸ್ವೀಕರಿಸುತ್ತಿದ್ದೀರಿ ಎಂದರ್ಥ. ಅಂದರೆ ನೀವು ಇನ್ನೂ 'ದೇಹ ಸ್ಥಿತಿ'ಯಲ್ಲೇ ಇದ್ದೀರಿ. ದೇಹ ಸ್ಥಿತಿಯಲ್ಲಿ ಇದ್ದಾಗ ಎಲ್ಲವೂ ಇರುತ್ತವೆ. ಅಹಂಕಾರ ಇರುತ್ತದೆ, ಮಮಕಾರ ಇರುತ್ತದೆ, ರಾಗ–ದ್ವೇಷಗಳು ಇರುತ್ತವೆ ಮತ್ತು ಧರ್ಮ–ಅಧರ್ಮಗಳೆಂಬ ಎಲ್ಲಾ ದ್ವಂದ್ವಗಳೂ ಬರುತ್ತವೆ.

ನೀವು 'ದ್ವಂದ್ವಾತೀತ' ಸ್ಥಿತಿಗೆ ತಲುಪಬೇಕು. ಅಂದರೆ ನೀವು ಕೆಲಸ ಮಾಡುತ್ತಿದ್ದರೂ ಮಾಡದಂತೆ ಇರಬೇಕು ಮತ್ತು ಫಲಿತಾಂಶವನ್ನು ಸ್ವೀಕರಿಸದೆ ಅಂದರೆ ಆ ಕರ್ತೃತ್ವ, ಭೋಕ್ತೃತ್ವ ಭಾವಗಳಿಲ್ಲದೆ ಇರಬೇಕು. 'ಹೀಗೆ ಮಾಡಿದರೆ ಚೆನ್ನಾಗಿರುತ್ತದೆ' ಎಂದು ಬುದ್ಧಿಯಿಂದ ನಿರ್ಧಾರ ತೆಗೆದುಕೊಂಡಿದ್ದೀರಿ, ಆದರೆ 'ಅದು ನಾನಲ್ಲ, ಪರಮಾತ್ಮನ ಆಜ್ಞೆಯಂತೆ ನಾನು ಮಾಡುತ್ತಿದ್ದೇನೆ. ಇದನ್ನು ಮಾಡುವುದಕ್ಕೆ ಮಾತ್ರ ನನಗೆ ಅಧಿಕಾರವಿದೆ ಹೊರತು ಇದರ ಫಲಿತಾಂಶವನ್ನು ಸ್ವೀಕರಿಸಲು ನನಗೆ ಅಧಿಕಾರವಿಲ್ಲ' ಎಂಬ ಭಾವನೆಯಲ್ಲಿದ್ದರೆ, ಆಗ ನೀವು 'ಆತ್ಮ ಸ್ಥಿತಿ'ಯಲ್ಲಿದ್ದೀರಿ ಎಂದರ್ಥ.

ನೀವು ಶರೀರಕ್ಕೆ, ಮನಸ್ಸಿಗೆ ಮತ್ತು ಬುದ್ಧಿಗೆ ಪ್ರಾಮುಖ್ಯತೆ ನೀಡದೆ ಇರಬಹುದಾದ ಸ್ಥಿತಿಯು ಕೇವಲ ಸಾಧನೆಯಿಂದ ಮಾತ್ರ ಬರುತ್ತದೆ. ಇಷ್ಟೆಲ್ಲಾ ತಿಳಿದುಕೊಂಡಿದ್ದರೂ ಹಾಗೆ ಇರಲು ಸಾಧ್ಯವಾಗುತ್ತಿಲ್ಲ ಎಂದರೆ, ಇಷ್ಟು ಜನ್ಮಗಳಿಂದ ಮನೋಸ್ಥಿತಿ, ಬುದ್ಧಿ ಸ್ಥಿತಿ ಮತ್ತು ಶರೀರ ಸ್ಥಿತಿಯಲ್ಲಿ ಬದುಕಿದ್ದಾರೆ. ಜನ್ಮ

ಜನ್ಮಾಂತರಗಳಿಂದ ದೇಹವೇ ತಾನೆಂದು ಬದುಕಿದ್ದಾರೆ. ಆದ್ದರಿಂದ ಈ ವಾಸನೆಗಳು (ಹಳೆಯ ಸಂಸ್ಕಾರಗಳು) ಅಷ್ಟು ಬೇಗ ಹೋಗುವುದಿಲ್ಲ.

ಹೀಗೆ 'ನಾನು ಶರೀರ' ಎಂಬ ಭಾವನೆಯೊಂದಿಗೆ ಬಂದ ನಿಮಗೆ, ಆಧ್ಯಾತ್ಮಿಕ ಜೀವನದಲ್ಲಿ ಕಾಲಿಟ್ಟ ತಕ್ಷಣ ಗುರುಗಳು ಬಂದು ಹೇಳುವ ಮೊದಲ ಮಾತು. 'ನೀನು ದೇಹವಲ್ಲ, ಆತ್ಮ'. ಅಂದಿನಿಂದಲೇ ನೀವು ಯಾವುದೇ ಕೆಲಸ ಮಾಡುತ್ತಿದ್ದರೂ 'ನಾನು ಮಾಡುತ್ತಿದ್ದೇನೆ' ಎಂದುಕೊಳ್ಳದೆ, 'ನನ್ನಿಂದ ಮಾಡಿಸಲಾಗುತ್ತಿದೆ' ಎಂಬ ಭಾವನೆಯಿಂದ ಮಾಡಬೇಕು. ಹಾಗೆ ಮಾಡಿದರೆ ಶರೀರ, ಮನಸ್ಸು ಮತ್ತು ಬುದ್ಧಿಯನ್ನು ಕೆಲಸ ಮಾಡಲು ಉಪಯೋಗಿಸಿಕೊಂಡು, ಫಲಿತಾಂಶವನ್ನು ಮಾತ್ರ ಪರಮಾತ್ಮನಿಗೆ ಬಿಟ್ಟುಬಿಡುತ್ತೀರಿ.

ಬಾಹ್ಯವಾಗಿ ಯಾವ ಕೆಲಸ ಮಾಡುತ್ತಿದ್ದರೂ ಕಾಣಿಸುವುದು ಈ ಶರೀರವೇ ಆದುದರಿಂದ, 'ಫಲಾನಾ ವ್ಯಕ್ತಿ ಮಾಡುತ್ತಿದ್ದಾರೆ' ಎಂದು ಇತರರು ಹೇಳುತ್ತಾರೆ. ಆದರೆ ನೀವು ಅದಕ್ಕೆ 'ಸರಿ' ಎನ್ನುತ್ತಲೇ, ಅಂತರಂಗದಲ್ಲಿ ಆತ್ಮದ ಮೇಲೆ ಕೃತಜ್ಞತಾ ಭಾವ ಹೊಂದಿರಬೇಕು. 'ಒಂದು ಕೆಲಸ ಮಾಡಲು ನಾನು ಕೇವಲ ಒಂದು ಉಪಕರಣ (ಪರಿಕರ) ಅಷ್ಟೆ, ಒಳಗಿರುವ ಆತ್ಮವೇ ಎಲ್ಲವನ್ನೂ ಮಾಡಿಸುತ್ತಿದೆ' ಎಂಬ ಭಾವನೆಯಲ್ಲಿ ಇರಬೇಕು. ಯಾವ ಕೆಲಸ ಮಾಡುತ್ತಿದ್ದರೂ ಅದನ್ನು ಆತನ (ಪರಮಾತ್ಮನ) ಆಜ್ಞೆ ಮತ್ತು ಆದೇಶವೆಂದು ಭಾವಿಸಿ ಮಾಡಬೇಕು. ನೀವು ಆತ್ಮ ಸ್ಥಿತಿಯಲ್ಲಿ ಜೀವಿಸಿದಾಗ, ನಿಮ್ಮ ಪ್ರತಿ ಕೆಲಸವೂ ವಿಶ್ವಕ್ಕಾಗಿ ಆದಾಗ, ನಿಮಗೆ ಅನಂತವಾಗಿ ಸಂದೇಶಗಳು ದೊರೆಯುತ್ತವೆ. ನಿಮ್ಮ ಅಂತರಾತ್ಮದಿಂದ (Inner self) ಯಾವುದೇ ಸಂದೇಶ ಬಂದರೂ ಅದನ್ನು ಪರಮಾತ್ಮನ ಆದೇಶವೆಂದೇ ಭಾವಿಸಬೇಕು. ನೀವು ಆತ್ಮವನ್ನು ಗುರುತಿಸಿದಾಗ, ನೀವು ಆತ್ಮವಾಗಿ ಜೀವಿಸಿದಾಗ, ನಿಮಗೆ ಆತ್ಮ ದರ್ಶನವಾಗುತ್ತದೆ ಮತ್ತು ಆತ್ಮಾನುಭೂತಿ ಉಂಟಾಗುತ್ತದೆ. ಪರಮಾತ್ಮನಿಂದ ಸಂದೇಶಗಳೆಲ್ಲವೂ ನಿಮಗೆ ತಲುಪುತ್ತವೆ. ಅವುಗಳನ್ನು ನೀವು ವಿಶ್ವಕ್ಕೆ ನೀಡಲು ಸಾಧ್ಯವಾಗುತ್ತದೆ.

ಆತ್ಮಶಕ್ತಿ ಇಲ್ಲದೆ ಈ ಶರೀರ ಒಂದು ಅಂಗುಲವೂ ಚಲಿಸಲಾರದು. ಈ ದೇಹಕ್ಕೆ ಶಕ್ತಿ ನೀಡುವುದು ಆತ್ಮವೇ ಎಂದು ತಿಳಿದುಕೊಳ್ಳುತ್ತಾ, ಆ ಆತ್ಮಶಕ್ತಿಯನ್ನು ಹೆಚ್ಚಿಸಿಕೊಳ್ಳುವ ಧ್ಯಾನವನ್ನು ನಿರಂತರವಾಗಿ ಮಾಡುತ್ತಿದ್ದರೆ, ಯಾವುದೋ ಒಂದು ದಿನ ಆತ್ಮಾನುಭೂತಿ ಪಡೆಯುತ್ತೀರಿ. ಆಗ 'ನಾನು ಮಾಡುತ್ತಿದ್ದೇನೆ', 'ನಾನು ಅನುಭವಿಸುತ್ತಿದ್ದೇನೆ' ಎಂಬ ಕರ್ತೃತ್ವ–ಭೋಕ್ತೃತ್ವ ಭಾವಗಳಿಂದ ಉಂಟಾದ ಅಹಂಕಾರವು ಕರಗುತ್ತಾ ಹೋಗುತ್ತದೆ.

# ಮಾನವ ಜನ್ಮದ ಹಿರಿಮೆ

ಮಾನವರು ವಿಕಾಸದ ಹಾದಿಯಲ್ಲಿ ಎಷ್ಟೋ ತರಹದ ಜನ್ಮಗಳನ್ನು ಎತ್ತುತ್ತಾರೆ. ಕ್ರಿಮಿ ಕೀಟಗಳಾಗಿ, ಪಕ್ಷಿಗಳಾಗಿ, ನಾಲ್ಕು ಕಾಲುಗಳ ಪ್ರಾಣಿಗಳಾಗಿ ಜನ್ಮವೆತ್ತಿ, ಕೊನೆಗೆ ಮಾನವ ಜನ್ಮವನ್ನು ಪಡೆಯುತ್ತಾರೆ. ಎಲ್ಲಕ್ಕಿಂತಲೂ ಈ ಮಾನವ ಜನ್ಮವೇ ಶ್ರೇಷ್ಠವೆಂದು ಹಿರಿಯರು ಹೇಳುತ್ತಾರೆ. ಹಾಗಾದರೆ ಮಾನವ ಜನ್ಮವೇಕೆ ಶ್ರೇಷ್ಠವಾದುದು? ಎಂಬುದನ್ನು ವಿವರವಾಗಿ ತಿಳಿದುಕೊಳ್ಳೋಣ.

ಖನಿಜಗಳಲ್ಲಿ, ಕಲ್ಲುಗಳಲ್ಲಿ ಚೈತನ್ಯವಿದೆ ಆದರೆ ಅದನ್ನು ವ್ಯಕ್ತಪಡಿಸುವ ಶಕ್ತಿ ಅವುಗಳಿಗಿಲ್ಲ. ಹಾಗೆಯೇ ಮರಗಳಲ್ಲಿ ಚೈತನ್ಯವಿದೆ ಆದರೆ ಅವು ಸ್ವಲ್ಪ ಮಟ್ಟಿಗೆ ಮಾತ್ರ ವ್ಯಕ್ತಪಡಿಸುತ್ತವೆ. ನೋಡಿ, ಒಂದು ಕಲ್ಲಿನಿಂದ ಇನ್ನೊಂದು ಕಲ್ಲು ಹುಟ್ಟುವುದಿಲ್ಲ. ಆದರೆ ಮರಗಳು ಚಲಿಸುತ್ತವೆ ಆದರೆ ಸ್ಥಳಾಂತರಗೊಳ್ಳುವುದಿಲ್ಲ (ಚಲಿಸುವುದಿಲ್ಲ). ಬೀಜಗಳ ರೂಪದಲ್ಲಿ ಪುನರುತ್ಪತ್ತಿ ಮಾಡುತ್ತವೆ. ಆದರೆ ತನ್ನ ಅನುಭವವನ್ನು ಯಾವ ಮರವೂ ವ್ಯಕ್ತಪಡಿಸಲಾರದು. ಮನುಷ್ಯನು "ನನಗೆ ಮಗು ಹುಟ್ಟಿತು" ಎಂದು ಹೇಳಬಲ್ಲನು. ಆದರೆ ಯಾವ ಮರವೂ ಕೂಡ "ನಾನು ಒಂದು ಬೀಜವನ್ನು ನೀಡಿದ್ದೇನೆ, ಆ ಬೀಜದಿಂದಲೇ ಮರಗಳು ಬರುತ್ತವೆ" ಎಂದು ಹೇಳುವ ಶಕ್ತಿಯನ್ನು ಹೊಂದಿಲ್ಲ.

ಇನ್ನು ಪ್ರಾಣಿಗಳು ಸಂಚರಿಸುತ್ತವೆ, ಚಲಿಸುತ್ತವೆ ಮತ್ತು ಪುನರುತ್ಪತ್ತಿ ಮಾಡುತ್ತವೆ. ಅಂದರೆ ಆಕಳಿಗೆ ಒಂದು ಕರು ಹುಟ್ಟಿತು ಎಂದುಕೊಳ್ಳಿ, ಅದು ಪ್ರೀತಿಯಿಂದ ಹತ್ತಿರಕ್ಕೆ ಕರೆದುಕೊಂಡು ನೆಕ್ಕುತ್ತದೆ. ಆದರೆ ಅದು ಬೆಳೆಯುತ್ತಿರುವಂತೆ ಬುದ್ಧಿ ಇಲ್ಲದ ಕಾರಣ, ಅದು ಯಾವ ರೀತಿ ಇರುತ್ತದೆ ಎಂದು ಅದರ ಅನುಭವಗಳನ್ನು ಗ್ರಹಿಸುವ ಶಕ್ತಿ ಅವುಗಳಿಗಿಲ್ಲ. ಪ್ರಾಣಿಗಳಲ್ಲಿ ಅನುಭವಗಳಿರುತ್ತವೆ ಅಂದರೆ ಮಮಕಾರವಿರುತ್ತದೆ, ಮರಿ ಹುಟ್ಟಿದರೆ ನೆಕ್ಕುತ್ತದೆ, ಹತ್ತಿರಕ್ಕೆ ತೆಗೆದುಕೊಳ್ಳುತ್ತದೆ, ಹಾಲು ಕುಡಿಸುತ್ತದೆ ಆದರೆ ಅದನ್ನು ವ್ಯಕ್ತಪಡಿಸುವ ಬುದ್ಧಿ ಪ್ರಾಣಿಗಳಿಗಿಲ್ಲ.

ಅಂದರೆ ಇಲ್ಲಿ ಕಲ್ಲುಗಳಲ್ಲಿ ವ್ಯಕ್ತಪಡಿಸುವ ಶಕ್ತಿಯೇ ಇಲ್ಲ, ಮರವು ಇನ್ನೊಂದು ಮರಕ್ಕೆ ಬೀಜದ ಮೂಲಕ ಜನ್ಮ ನೀಡುತ್ತದೆ ಆದರೆ ಅದನ್ನು ಹೇಳುವ ಮನಸ್ಸು, ಬುದ್ಧಿ ಮರಗಳಿಗಿಲ್ಲ. ಪ್ರಾಣಿಗಳು ಅನುಭವಗಳನ್ನು ಪಡೆಯುತ್ತವೆ ಆದರೆ ಅದನ್ನು ಗ್ರಹಿಸುವ ಶಕ್ತಿ, ಬುದ್ಧಿ ಇಲ್ಲದೆ ಅವೆಲ್ಲವೂ... ಗ್ರಹಿಸಲಿಕ್ಕೆ ಸಾಧ್ಯವಾಗುತ್ತಿಲ್ಲ.

ಮತ್ತು ಈ ಮೂರು ವಿಧಗಳನ್ನು ನೋಡಿದರೆ, ಮನುಷ್ಯನಿಗೆ ಮಾತ್ರವೇ ಬುದ್ಧಿಯಿದ್ದು ತನ್ನ ಪ್ರತಿ ಅನುಭವವನ್ನು ವ್ಯಕ್ತಪಡಿಸಲು ಸಾಧ್ಯವಾಗುತ್ತಿದೆ, ತನ್ನ ಅನುಭೂತಿಗಳನ್ನು ವ್ಯಕ್ತಪಡಿಸುತ್ತಿದ್ದಾನೆ. ಅಂದರೆ ಇಲ್ಲಿ ಮನುಷ್ಯನಿಗೆ ಬುದ್ಧಿಯಿದೆ. ಆ ಬುದ್ಧಿಯಿಂದ ಮಾತ್ರವೇ ತನ್ನ ಅನುಭವಗಳನ್ನು, ಅನುಭೂತಿಗಳನ್ನು

ವ್ಯಕ್ತಪಡಿಸುತ್ತಿದ್ದಾನೆ. ಅಂದರೆ ಸೃಷ್ಟಿಯಲ್ಲಿ ಯಾವ ಜೀವಿಗೆ ನೀಡದ "ಬುದ್ಧಿ" ಎಂಬ ಶಕ್ತಿಯನ್ನು ಪ್ರಕೃತಿಯು ಮನುಷ್ಯನಿಗೆ ನೀಡಿದೆ. ಅದಕ್ಕಾಗಿಯೇ ಸೃಷ್ಟಿಯಲ್ಲಿರುವ 84 ಲಕ್ಷ ಜೀವರಾಶಿಗಳಿಗಿಂತ ಮನುಷ್ಯನು ಶ್ರೇಷ್ಠವಾದುದವನು ಎಂದು ಹೇಳಲಾಗುತ್ತದೆ. ಮನುಷ್ಯನು ಅನುಭೂತಿಗಳನ್ನು ಹೇಳಬಲ್ಲನು, ಅನುಭವಗಳನ್ನು ಹಂಚಿಕೊಳ್ಳಬಲ್ಲನು, ತನ್ನ ನಿಜ ಸ್ವರೂಪವನ್ನು ತಿಳಿದುಕೊಳ್ಳಬಲ್ಲನು; ಈ ಬುದ್ಧಿಯನ್ನು ಉಪಯೋಗಿಸಿ ಮಹಾತ್ಮನಾಗಬಲ್ಲನು. ಹಾಗಾದರೆ ನಿಜ ಸ್ವರೂಪ ಎಂದರೆ ಏನು? ತಾನು ಆತ್ಮ, ತಾನು ಪರಮಾತ್ಮನ ಒಂದು ಅಂಶ ಎಂದು ತಿಳಿದುಕೊಳ್ಳುವ ಜನ್ಮವೇ ಮನುಷ್ಯ ಜನ್ಮ. ಆ ಬುದ್ಧಿಯನ್ನು ಸರಿಯಾಗಿ ಉಪಯೋಗಿಸಿಕೊಳ್ಳುವವರೇ ಮಹಾತ್ಮರಾಗುತ್ತಿದ್ದಾರೆ.

ಆ ಬುದ್ಧಿಯನ್ನು ನಾಶಪಡಿಸಿಕೊಂಡು, ದುರುಪಯೋಗಪಡಿಸಿಕೊಂಡು, ಸರಿಯಾಗಿ ಉಪಯೋಗಿಸದವರು ದಾನವರಾಗಿ, ನಿಕೃಷ್ಟರಾಗಿ, ನಿರರ್ಥಕ ಜೀವಿಯಾಗಿ ಉಳಿಯುತ್ತಿದ್ದಾರೆ. ಅದಕ್ಕಾಗಿಯೇ ಯಾರಾದರೂ ತಪ್ಪು ಮಾಡಿದಾಗ "ಬುದ್ಧಿ ಇಲ್ವಾ?" ಎಂದು ಬೈಯುತ್ತಾರೆ. ಇನ್ನೂ ಸ್ವಲ್ಪ ದೊಡ್ಡವರಾಗಿ ತಪ್ಪು ಮಾಡಿದರೆ "ಬುದ್ಧಿ, ಜ್ಞಾನ ಇಲ್ವಾ?" ಎಂದು ಗದರಿಸುತ್ತಾರೆ. ಅದೇ ಪ್ರಾಣಿಗಳು ಹೊಲಕ್ಕೆ ನುಗ್ಗಿ ಮೇಯ್ದರೆ ಅವುಗಳನ್ನು ಹೊಡೆದು ಓಡಿಸುತ್ತಾರೆಯೇ ಹೊರತು, ಯಾವ ಪ್ರಾಣಿಗೂ "ಬುದ್ಧಿ ಇಲ್ವಾ, ಜ್ಞಾನ ಇಲ್ವಾ?" ಎಂದು ಬೈಯುವುದಿಲ್ಲ.

ಮತ್ತೆ ಮನುಷ್ಯರು ತಪ್ಪು ಮಾಡಿದರೆ ಮಾತ್ರ ಏಕೆ ಹೀಗೆ ಬೈಯುತ್ತಾರೆ? ಅಂದರೆ ಮನುಷ್ಯ ಜನ್ಮ ಎತ್ತಿದ ಮೇಲೆ ಆ ಬುದ್ಧಿಯನ್ನು ಉಪಯೋಗಿಸಿ ಜ್ಞಾನವನ್ನು ಪಡೆದು, ತಾನಾರೆಂದು ತಿಳಿದುಕೊಂಡು, ತಾನೇ ಪರಮಾತ್ಮ ಎಂದು ಅರಿತು ದೈವತ್ವಕ್ಕೆ ಏರಬಲ್ಲ ಅಂತಹ ದೊಡ್ಡ ಶಕ್ತಿಯೇ "ಬುದ್ಧಿ". ಅಂತಹ ಬುದ್ಧಿಯನ್ನು ಉಪಯೋಗಿಸದೆ ಇನ್ನೂ ನಿಕೃಷ್ಟವಾಗಿ ಬದುಕುತ್ತಿರುವಾಗ, ಸಣ್ಣ ಪುಟ್ಟ ತಪ್ಪುಗಳಿಗೂ ಮೊದಲು "ಬುದ್ಧಿ ಇಲ್ವಾ?" ಎಂದು ಬೈಯುತ್ತಾರೆ. ದೊಡ್ಡ ದೊಡ್ಡ ತಪ್ಪುಗಳನ್ನು ಮಾಡಿದರೆ ಬುದ್ಧಿ, ಜ್ಞಾನ ಇದೆಯೇ ಎಂದು ಬಯ್ಯುತ್ತಿರುತ್ತಾರೆ. ಆದರೆ ಈ ಮಾನವರು ನಮಗೆ ವಿವಿಧ ರೀತಿಯಲ್ಲಿ ಕಾಣಿಸಿಕೊಳ್ಳುತ್ತಾರೆ:

1) **ಜಂತು ಸ್ವಭಾವ (ಪ್ರಾಣಿ ಗುಣ) ಹೊಂದಿರುವ ಮಾನವರು.**
2) **ಮಾನವ ಸ್ವಭಾವ ಹೊಂದಿರುವ ಮಾನವರು.**
3) **ದೈವತ್ವ ಹೊಂದಿರುವ ಮಾನವರು.**

ಈಗ ಇವರ ಬಗ್ಗೆ ತಿಳಿದುಕೊಳ್ಳೋಣ.

**1) ಜಂತು ಸ್ವಭಾವ (ಪ್ರಾಣಿ ಗುಣ) ಹೊಂದಿರುವ ಮಾನವರು:** ಇವರು ತಮೋಗುಣದಲ್ಲಿ ಇರುತ್ತಾರೆ. ಪ್ರಾಣಿ ಜನ್ಮದಿಂದ ಈಗಷ್ಟೇ ಮಾನವ ಜನ್ಮಕ್ಕೆ ಬಂದಿರುವ ಇವರು,

ತಮ್ಮ ಸಂತೋಷಕ್ಕಾಗಿ ಇತರರನ್ನು ಹಿಂಸಿಸುತ್ತಾರೆ. ಇವರಲ್ಲಿ ತಮೋಗುಣ ಹೆಚ್ಚಾಗಿರುವುದರಿಂದ ಯಾವಾಗಲೂ ಶಾರೀರಿಕ ಸ್ಥಿತಿಯಲ್ಲೇ ಇರುತ್ತಾರೆ ಮತ್ತು ಇವರಿಗೆ ಆಸೆಗಳು ಅತಿಯಾಗಿರುತ್ತವೆ. ನೀವು ಗಮನಿಸಿದರೆ, ಕೇವಲ ಶಾರೀರಿಕ ಮತ್ತು ಮಾನಸಿಕ ಸ್ಥಿತಿಯಲ್ಲಿರುವವರಿಗೆ ಆಸೆಗಳು ಬಹಳ ಹೆಚ್ಚು. ಇವರು ಯಾವಾಗಲೂ ಆಹಾರ, ನಿದ್ರೆ, ಮೈಥುನಗಳಲ್ಲೇ ಮುಳುಗಿರುತ್ತಾರೆ. ಅಂದರೆ ಕೇವಲ ಶಾರೀರಿಕ ಸುಖಗಳನ್ನು ಬಯಸುತ್ತಾ ಹಾಗೆಯೇ ಜೀವಿಸುತ್ತಾರೆ. ಇದಕ್ಕಾಗಿಯೇ ಇಡೀ ಜೀವನವನ್ನು ವ್ಯಯಿಸುತ್ತಾರೆ ಹೊರತು ಬುದ್ಧಿಯನ್ನು ಉಪಯೋಗಿಸುವುದಿಲ್ಲ. ಯಾರಾದರೂ ಇತರರನ್ನು ಹಿಂಸಿಸಿ ತಮ್ಮ ಆಸೆಗಳನ್ನು ತೀರಿಸಿಕೊಳ್ಳುತ್ತಿದ್ದಾರೆ ಎಂದರೆ ಅವರು ಬುದ್ಧಿಯನ್ನು ಬಳಸುತ್ತಿಲ್ಲ ಎಂದರ್ಥ. ಎದುರಿಗಿರುವ ವ್ಯಕ್ತಿ ನೋವು ಅನುಭವಿಸುತ್ತಾನೆ ಎಂದು ಅವರು ಯೋಚಿಸುವುದಿಲ್ಲ. ಅಂದರೆ ಅದು ಎಂತಹ ಕೀಳು ಜನ್ಮ!

ಇದು ಹೇಗಿರುತ್ತದೆ ಎಂದರೆ, ಒಂದು ಎತ್ತು ಅಥವಾ ಹಸುವಿಗೆ ಹಸಿವಾದಾಗ ಹಸಿರು ಹುಲ್ಲು ಸಿಗದಿದ್ದರೆ, ಅದು ಪಕ್ಕದ ಹೊಲಕ್ಕಾದರೂ ನುಗ್ಗಿ ಮೇಯುತ್ತದೆ. ಎದುರಿನವರ ಬೆಳೆ ಹಾಳಾಗುತ್ತದೆ ಎಂಬ ಆಲೋಚನೆ ಅದಕ್ಕೆ ಇರುವುದಿಲ್ಲ.
ಹಾಗೆಯೇ, ಪಶು ಪ್ರವೃತ್ತಿ ಇರುವ ಮಾನವರು ಎದುರಿನವರನ್ನು ಹಿಂಸಿಸಿಯಾದರೂ, ನೋವು ನೀಡಿಯಾದರೂ ತಮ್ಮ ಸುಖ ಮತ್ತು ಸಂತೋಷಗಳನ್ನು ಪೂರೈಸಿಕೊಳ್ಳುತ್ತಾರೆ. ಈ ದಿನಗಳಲ್ಲಿ ಇತರರ ಬಗ್ಗೆ ಯಾವುದೇ ಯೋಚನೆ ಇಲ್ಲದೆ ತಮಗೆ ಇಷ್ಟ ಬಂದಂತೆ ವರ್ತಿಸುತ್ತಿದ್ದಾರೆ. ಇತರರು ಬಾಧೆಪಡುತ್ತಾರೆಂದಾಗಲಿ ಅಥವಾ ಕಷ್ಟಪಡುತ್ತಾರೆಂದಾಗಲಿ ಯೋಚಿಸದೆ ಮಾತಿನ ಮೂಲಕ ಮತ್ತು ಕೃತಿಯ (ಕೆಲಸದ) ಮೂಲಕ ಹಿಂಸಿಸುತ್ತಾರೆ. ಇವರನ್ನೇ ಪಶು ಪ್ರವೃತ್ತಿಯುಳ್ಳ ಮಾನವರು ಎನ್ನುತ್ತಾರೆ. ಅಂತಹವರನ್ನು ನಮ್ಮ ಸುತ್ತಮುತ್ತಲಿನ ಪ್ರಪಂಚದಲ್ಲಿ ಎಷ್ಟೋ ಜನರನ್ನು ನೋಡುತ್ತಿದ್ದೇವೆ. ಇವರು ಜೀವನವಿಡೀ ಶಾರೀರಿಕ ಸುಖಕ್ಕೆ ಮತ್ತು ಮಾನಸಿಕ ಸುಖಕ್ಕೆ ಪ್ರಾಧಾನ್ಯತೆ ನೀಡುತ್ತಾ ಇರುತ್ತಾರೆ.
**2) ಮಾನವ ಸ್ವಭಾವವುಳ್ಳ ಮಾನವರು:** ಇವರು ರಜೋಗುಣದಲ್ಲಿ ಇರುತ್ತಾರೆ. ರಜೋಗುಣದಲ್ಲಿ ಇರುವವರು ಕರ್ಮಗಳನ್ನು (ಕೆಲಸಗಳನ್ನು) ಹೆಚ್ಚಾಗಿ ಮಾಡುತ್ತಾ ಇರುತ್ತಾರೆ. ಕರ್ಮ ಅಂದ ಕೂಡಲೇ ಅದು ಪಾಪವೆಂದು ಭಾವಿಸಬೇಡಿ. ಇವರು ಯಾವಾಗಲೂ ಖಾಲಿಯಾಗಿ ಇರುವುದಿಲ್ಲ, ಯಾವುದೋ ಒಂದು ಕೆಲಸ ಮಾಡುತ್ತಲೇ ಇರುತ್ತಾರೆ. ಈಗಿರುವ ಸ್ಥಿತಿಗಿಂತಲೂ ಇನ್ನೂ ಉನ್ನತ ಸ್ಥಿತಿಗೆ ಬೆಳೆಯಬೇಕೆಂದು ಇವರು ಬಯಸುತ್ತಾರೆ. ರಜೋಗುಣ ಅಂದ ಕೂಡಲೇ ಅದು ನಿಕೃಷ್ಟವಾದ ಜನ್ಮವೆಂದು ಅಂದುಕೊಳ್ಳಬೇಡಿ. ಉದಾಹರಣೆಗೆ ರಾವಣಾಸುರನನ್ನೇ ತೆಗೆದುಕೊಂಡರೆ, ಯಾವುದೋ ಒಂದು ಕೋರಿಕೆಯಿಂದಾಗಿ ಅವನು ನಾಶವಾಗಿರಬಹುದು ಮತ್ತು

ದೈವವಾಗಲು ಸಾಧ್ಯವಾಗದಿರಬಹುದು, ಆದರೆ ಸಾಧನೆಯಲ್ಲಿ ಅವನು ಶಕ್ತಿವಂತನು ಮತ್ತು ಅಷ್ಟಸಿದ್ಧಿಗಳನ್ನೇ ವಶಪಡಿಸಿಕೊಂಡವನು.

ಅದೇ ರೀತಿ ಮಾನವರಲ್ಲಿ ಬಹಳಷ್ಟು ಮಂದಿ ಎಲ್ಲರಿಗಿಂತಲೂ ಶ್ರೇಷ್ಠರಾಗಿರಬೇಕೆಂದು ನಿರಂತರವಾಗಿ ಶ್ರಮಪಟ್ಟು ಸಂಪಾದಿಸುತ್ತಾ ಇರುತ್ತಾರೆ. ಇವರಿಗೆ ಧರ್ಮ ತಿಳಿದಿರುತ್ತದೆ, ಶಾಸ್ತ್ರಗಳ ಮೇಲೆ ನಂಬಿಕೆ ಇರುತ್ತದೆ, ಒಳ್ಳೆಯದರ ಮೇಲೆ ನಂಬಿಕೆ ಇರುತ್ತದೆ ಮತ್ತು ಭಗವಂತನ ಮೇಲೆ ನಂಬಿಕೆ ಇರುತ್ತದೆ. ಇವರು ಕಷ್ಟಪಡದೆಯೇ ಪಕ್ಕದವರಿಗೆ ಸಹಾಯ ಮಾಡುತ್ತಾ ಇರುತ್ತಾರೆ. ಅಂದರೆ ಇವರು ಪುಣ್ಯಕ್ಕಾಗಿ ಮಾಡಬಹುದು ಅಥವಾ ದಾನ ಧರ್ಮಗಳನ್ನು ಕೂಡ ಹೆಚ್ಚಾಗಿ ಮಾಡುತ್ತಾ ಇರುತ್ತಾರೆ. ಅಂದರೆ ಕೇವಲ ಸ್ವಾರ್ಥಕ್ಕಾಗಿ ಬದುಕುವುದು ತಮೋಗುಣದ ಲಕ್ಷಣವಾದರೆ, ಪಕ್ಕದವರನ್ನು ಬಾಧಿಸದೆ, ಕಷ್ಟಪಡಿಸದೆ, ತಾನು ಕಷ್ಟಪಡದೆ 'ನನ್ನ ಬಳಿ ಇದೆ ಆದ್ದರಿಂದ ನಾನು ಕೊಡುತ್ತೇನೆ' ಎಂದು ಎದುರಿಗಿದ್ದವರಿಗೆ ಸಹಾಯ ಮಾಡುವವರು ಬಹಳ ಮಂದಿ ಇರುತ್ತಾರೆ. ಈ ರೀತಿಯಾಗಿ ರಜೋಗುಣ ಉಳ್ಳವರು ಕರ್ಮಗಳನ್ನು ಹೆಚ್ಚಾಗಿ ಮಾಡುತ್ತಾರೆ. ತಮೋಗುಣ ಇರುವವರು ಕೆಲಸ ಮಾಡಲು ಸೋಂಬೇರಿತನ ತೋರುತ್ತಾರೆ, ಆದರೆ ರಜೋಗುಣ ಇರುವವರು ನಿರಂತರವಾಗಿ ಕೆಲಸ ಮಾಡುತ್ತಾರೆ. ಶ್ರೀಮಂತರಾದವರನ್ನು ಗಮನಿಸಿದರೆ, ಅವರು ಸದಾ ವ್ಯಾಪಾರ ಅಥವಾ ಉದ್ಯೋಗದಲ್ಲಿ ಹಗಲಿರುಳು ಶ್ರಮಿಸುತ್ತಿರುತ್ತಾರೆ ಹೊರತು ಸೋಂಬೇರಿಗಳಾಗಿ ಮಲಗುವುದಿಲ್ಲ. ಒಂದು ಕೆಲಸವನ್ನು ಕೈಗೆತ್ತಿಕೊಂಡರೆ ಅದು ಮುಗಿಯುವವರೆಗೂ ನಿದ್ರೆ ಮಾಡುವುದಿಲ್ಲ. ಇವರು ಶಾಸ್ತ್ರಗಳನ್ನು ಮತ್ತು ಗುರುಗಳನ್ನು ಗೌರವಿಸುತ್ತಾರೆ. ಧರ್ಮದ ಬಗ್ಗೆ ಕಲಿಯುತ್ತಾ ದಾನ-ಧರ್ಮಗಳನ್ನು ಮಾಡುತ್ತಾರೆ. ಇವರು ಯಾವುದೇ ಕೆಲಸವನ್ನು ಕಷ್ಟಪಟ್ಟು ಮಾಡದೆ, ಇಷ್ಟಪಟ್ಟು ಮಾಡುತ್ತಾರೆ. ಪುಣ್ಯ ಬರುತ್ತದೆ ಎಂಬ ಕಾರಣಕ್ಕಾದರೂ ಅದನ್ನು ಪ್ರೀತಿಯಿಂದಲೇ ಮಾಡುತ್ತಾರೆ.

**3) ದೈವತ್ವ ಇರುವವರು:** ಇವರು ಸಾತ್ವಿಕ ಗುಣ ಹೊಂದಿರುವವರು. ಇವರು ಯಾವಾಗಲೂ ದೈವಸ್ವರೂಪಿಗಳಾಗಿ ಜನರಿಗೆ ಯಾವುದಾದರೊಂದು ಸಹಾಯ ಮಾಡುತ್ತಲೇ ಇರುತ್ತಾರೆ. ತಮಗೆ ಕಷ್ಟವಾದರೂ ಪರವಾಗಿಲ್ಲ, ಜನರಿಗೆ ಉಪಕಾರವಾಗಲಿ ಎಂದು ಬಯಸುತ್ತಾರೆ. ಇವರು ಶಾಸ್ತ್ರಗಳನ್ನು ಅಧ್ಯಯನ ಮಾಡುತ್ತಾರೆ, ಧರ್ಮವನ್ನು ತಿಳಿದುಕೊಳ್ಳುತ್ತಾರೆ ಮತ್ತು ಗುರುಗಳನ್ನು ಗೌರವಿಸುತ್ತಾರೆ. ಇಂತಹವರಿಗೇ ಸದ್ಗುರುಗಳು ದೊರೆಯುತ್ತಾರೆ. ಸದ್ಗುರುಗಳು ಸಿಗುವವರೆಗೂ ಇವರಿಗೆ ನೆಮ್ಮದಿ ಇರುವುದಿಲ್ಲ, ಏಕೆಂದರೆ ಇವರಲ್ಲಿ ಸತ್ಯದ ಅನ್ವೇಷಣೆ ಬಹಳ ಹೆಚ್ಚಾಗಿರುತ್ತದೆ. ಇವರು ಸತ್ವಗುಣಕ್ಕೆ ಬಂದಿರುವುದರಿಂದ ಸತ್ಯವನ್ನು ತಿಳಿದುಕೊಳ್ಳಬೇಕೆಂಬ ಆಸಕ್ತಿ ಇವರಲ್ಲಿ ಹೆಚ್ಚಾಗಿರುತ್ತದೆ.

ಇವರು ಎಷ್ಟು ಪೂಜೆ, ವ್ರತ, ಯಜ್ಞ-ಯಾಗಾದಿಗಳನ್ನು ಮಾಡಿದರೂ ಇನ್ನೂ ಏನನ್ನೋ ತಿಳಿದುಕೊಳ್ಳಬೇಕು ಎಂಬ ಹಂಬಲ ಇವರ ಒಳಗಿರುತ್ತದೆ. ಆ ತಪನೆಯನ್ನೇ ಇವರು ತಪಸ್ಸನ್ನಾಗಿ ಮಾಡಿಕೊಳ್ಳುತ್ತಾರೆ. ಇವರ ಈ ತಪನೆಯನ್ನು ನೋಡಿ ಪರಮಾತ್ಮನು ಇವರಿಗೆ ಒಬ್ಬ ಸದ್ಗುರುವನ್ನು ನೀಡಿದಾಗ, ಆ ಗುರುಗಳ ಬೋಧನೆಯನ್ನು ಕೇಳಿದಾಗ ಇವರ ಮನಸ್ಸು ಶಾಂತವಾಗುತ್ತದೆ.

ರಾಘವರಾವ್ ಅವರನ್ನು ನೋಡಿದರೆ, ಅವರು ಚಿಕ್ಕವಯಸ್ಸಿನಲ್ಲಿ ಯಾವುದೋ ಒಂದು ಭಾಷಣದಲ್ಲಿ ಪರಮಾತ್ಮನ ಬಗ್ಗೆ ಕೇಳಿದರು. ಅಂದಿನಿಂದ ವೆಂಕಟೇಶ್ವರ ಸ್ವಾಮಿ ಎಂದರೆ ಇಷ್ಟವಾಗಿ ತಿರುಪತಿಗೆ ಹೋದರೂ, ಗುಡಿ ಕಟ್ಟಿದರೂ, ಅವರ ಅಂತರಾಳದಲ್ಲಿ ಆ ಪರಮಾತ್ಮನ ಬಗ್ಗೆ ಅನ್ವೇಷಣೆ ನಡೆಯುತ್ತಲೇ ಇತ್ತು. ಮೊದಮೊದಲು ಚೆನ್ನಾಗಿ ಹಣ ಸಂಪಾದಿಸಿದರೆ ಪ್ರಪಂಚದಲ್ಲಿ ಗೌರವ ಹೆಚ್ಚಿರುತ್ತದೆ, ದಾನಧರ್ಮಗಳನ್ನು ಹೆಚ್ಚು ಮಾಡಬಹುದು ಎಂದುಕೊಳ್ಳುತ್ತಿದ್ದರು.

ದಾನಗಳು ಮಾಡಿದರೆ ಭಗವಂತನು ಮೆಚ್ಚುತ್ತಾನೆಂದು ಹೆಚ್ಚು ದಾನ ಧರ್ಮಗಳನ್ನು ಮಾಡುತ್ತಿದ್ದರು. ಜನರಿಗೆ ಉಪಯೋಗವಾಗುವ ಕೆಲಸಗಳನ್ನು ಹೆಚ್ಚು ಮಾಡಬೇಕೆಂದು ಉಚಿತ ಸಂಸ್ಥೆ ಸ್ಥಾಪಿಸುವುದು, ಉಚಿತ ಹೋಮಿಯೋ ಆಸ್ಪತ್ರೆ ಏರ್ಪಡಿಸುವುದು ಅಂತಹ ಕಾರ್ಯಕ್ರಮಗಳನ್ನು ಮಾಡಿದರು. ಎಷ್ಟೇ ಮಾಡಿದರೂ ಒಳಗಡೆ ತೃಪ್ತಿ ಇಲ್ಲದೆ, "ಇದು ಅಲ್ಲ ನನಗೆ ಬೇಕಾಗಿರುವುದು" ಅಂದುಕೊಳ್ಳುತ್ತಾ, ಕೊನೆಗೆ "ನನಗೆ ಸತ್ಯವನ್ನು ತಿಳಿಸುವ ಗುರು ಬೇಕು" ಎಂದು ಗುರುಗಳಿಗಾಗಿ ಕೆಲವು ಆಶ್ರಮಗಳಿಗೆ ಹೋಗಿ ಅನ್ವೇಷಿಸಿದರು, ಆದರೆ ಎಲ್ಲಿಯೂ ಸಮಾಧಾನವಾಗಲಿಲ್ಲ. ಅಂದರೆ ಅವರು ಹೇಳುವ ವಿಷಯಗಳಲ್ಲಿ ಈತನಿಗೆ ತೃಪ್ತಿ ಸಿಗಲಿಲ್ಲ.

ಇಲ್ಲಿ ಗಮನಿಸಿ, ನೀವು ಸಿದ್ಧವಾಗಿಲ್ಲದಿದ್ದಾಗ ನಿಮಗೆ ಗುರುಗಳೆಲ್ಲರೂ ಇಷ್ಟವಾಗುವುದಿಲ್ಲ. ಬಾಧ (ಕಷ್ಟ ನೀಡುವ) ಗುರುಗಳು ಇಷ್ಟವಾಗುವುದಿಲ್ಲ, ಬೋಧ ಗುರುಗಳು ಇಷ್ಟವಾಗುವುದಿಲ್ಲ, ಕೇವಲ ಸದ್ಗುರುಗಳು ಮಾತ್ರವೇ ಇಷ್ಟವಾಗುತ್ತಾರೆ. ಅಂದರೆ ಇನ್ನೂ ಜನ್ಮಗಳನ್ನು ಹೆಚ್ಚಿಸುವ ಗುರುಗಳು 'ಬೋಧ ಗುರುಗಳಾಗುತ್ತಾರೆ'. ಹಾಗಾದರೆ ಸದ್ಗುರುಗಳು ಏನು ಮಾಡುತ್ತಾರೆ? ಜನ್ಮಗಳನ್ನು ಕಡಿಮೆ ಮಾಡಲು ಎಂತಹ ಕರ್ಮಗಳನ್ನು ಮಾಡಬೇಕೆಂದು ಕಲಿಸುತ್ತಾರೆ. ಪತ್ರಿಜೀ ಅವರ ಪರಿಚಯವಾಗುವವರೆಗೆ ರಾಘವರಾವ್ ಅವರು ಪುಣ್ಯ ಕರ್ಮಗಳನ್ನೇ ಮಾಡಿದರು. ಅವರ ಪರಿಚಯವಾದ ನಂತರ, ಪುಣ್ಯ ಕರ್ಮಗಳನ್ನು ಮಾಡಿದರೆ ಮತ್ತೆ ಭೋಗ ಸಿಗುತ್ತದೆ, ಜನ್ಮ ಬರುತ್ತದೆ; ಆದರೆ 'ಆತ್ಮ ಕರ್ಮಗಳನ್ನು' ಮಾಡುವವರಿಗೆ ಜನ್ಮರಾಹಿತ್ಯ (ಪುನರ್ಜನ್ಮ ಇಲ್ಲದಿರುವುದು) ಮತ್ತು ಮೋಕ್ಷ ದೊರೆಯುತ್ತದೆ ಎಂದು ಹೇಳಿದಾಗಿನಿಂದ ಧ್ಯಾನ ಸಾಧನೆ ಮಾಡುವುದು,

ಜ್ಞಾನ ಬೆಳೆಸಿಕೊಳ್ಳುವುದು, ಆ ಜ್ಞಾನವನ್ನು ಎಲ್ಲರಿಗೂ ಹಂಚಲು ಒಂದೊಂದು ಊರು ತಿರುಗಿ ಹೇಳುವುದಷ್ಟೇ ಅಲ್ಲದೆ, ಈ ಜ್ಞಾನವನ್ನು ಅವರು ಮರೆತುಹೋಗಬಾರದೆಂದು ಎಷ್ಟೋ ಪುಸ್ತಕಗಳನ್ನು ಮುದ್ರಿಸಿ ಎಲ್ಲರಿಗೂ ತಲುಪಿಸುವ ಪ್ರಯತ್ನ ಮಾಡುತ್ತಿದ್ದಾರೆ. ಈಗ ಅವರಿಗೆ ಜೀವನದಲ್ಲಿ ತೃಪ್ತಿ ಎಂಬುದು ಲಭಿಸಿದೆ. ಅಂದರೆ ದೈವತ್ವವಿರುವ ಮಾನವರು ಏನು ಮಾಡುತ್ತಾರೆಂದರೆ? ತನ್ನ ಯೋಗ. ತಮ್ಮ ಕ್ಷೇಮಕ್ಕಿಂತಲೂ ಜನರ ಯೋಗ ಮತ್ತು ಕ್ಷೇಮವೇ ಮುಖ್ಯವೆಂದು ಭಾವಿಸುವವರು ನೂರಕ್ಕೊಬ್ಬರು ಅಥವಾ ಕೋಟಿಗೊಬ್ಬರು ಇರಬಹುದು. ಎಲ್ಲರೂ ಅಂತಹವರೇ ಆಗಿದ್ದರೆ ಇದು ಕಲಿಯುಗವಾಗುತ್ತಿರಲಿಲ್ಲ, ಕೃತಯುಗವಾಗುತ್ತಿತ್ತು.

ಇಂತಹ ದೈವತ್ವ ಹೊಂದಿದ ಮಾನವರು ತಮ್ಮ ಸುತ್ತಲಿರುವ ಪ್ರಪಂಚವನ್ನು ದೈವದ ಕಡೆಗೆ ನಡೆಸಲು ಪ್ರಯತ್ನಿಸುತ್ತಿರುತ್ತಾರೆ. ಅಂತಹ ಹಂಬಲ ಉಳ್ಳವರಿಗೆ ಸದ್ಗುರುಗಳು ಲಭಿಸುತ್ತಾರೆ. ಅವರು ನಿರ್ದೇಶಿಸಿದಂತೆ ಇವರು ಮುಂದೆ ಸಾಗುತ್ತಿರುತ್ತಾರೆ. ಅಲ್ಲಿಯವರೆಗೂ ಅವರಿಗೆ ತೃಪ್ತಿ ಮತ್ತು ಆನಂದವಿರುವುದಿಲ್ಲ. ಅಂತವರು ತಮ್ಮ ಶರೀರವನ್ನು ಅಥವಾ ಮನಸ್ಸನ್ನು ಲೆಕ್ಕಿಸದೆ ತಿರುಗುತ್ತಿರುತ್ತಾರೆ. "ನಿಮಗೆ ಇಷ್ಟು ವಯಸ್ಸಾದರೂ ಇಷ್ಟು ಚೆನ್ನಾಗಿ ಹೇಗೆ ತಿರುಗುತ್ತಿದ್ದೀರಿ?" ಎಂದು ಬಹಳಷ್ಟು ಜನರು ನನ್ನನ್ನು ಮತ್ತು ಅವರನ್ನೂ ಕೇಳುತ್ತಿರುತ್ತಾರೆ. ನೀವು ಯಾವಾಗಾದರೆ ಶರೀರಕ್ಕೆ ಮತ್ತು ಮನಸ್ಸಿಗೆ ಪ್ರಾಮುಖ್ಯತೆ ನೀಡದೆ ಆತ್ಮಕ್ಕೆ ಪ್ರಾಮುಖ್ಯತೆ ನೀಡಿ, ನಿಮ್ಮ ಸುತ್ತಲಿರುವವರ ಆತ್ಮೋದ್ಧಾರಕ್ಕಾಗಿ ಹಂಬಲಿಸುತ್ತೀರೋ, ಆಗ ಈ ಶರೀರ ಮತ್ತು ಮನಸ್ಸಿಗೆ ಕಷ್ಟವಾಗದಂತೆ ಪ್ರಕೃತಿಯ ಮೂಲಕ ಪರಮಾತ್ಮನೇ ನಿಮ್ಮ ಯೋಗಕ್ಷೇಮಗಳನ್ನು ಜಾಗರೂಕತೆಯಿಂದ ನೋಡಿಕೊಳ್ಳುತ್ತಾನೆ.

ರಾಘವರಾವು ಅವರು ಇತ್ತೀಚೆಗೆ ತಪ್ಪಾಗಿ ಆಸಿಡ್ ಅನ್ನು ಬಾಯಿಗೆ ಹಾಕಿಕೊಂಡರೂ, ಅದರಿಂದ ಹೊರಬಂದು ಮತ್ತೆ ಚೆನ್ನಾಗಿ ಓಡಾಡುತ್ತಿದ್ದಾರೆ ಮತ್ತು ತರಗತಿಗಳನ್ನು ತೆಗೆದುಕೊಳ್ಳುತ್ತಿದ್ದಾರೆ ಎಂಬುದು ನಿಮಗೆ ತಿಳಿದಿದೆ. ದೈವತ್ವವುಳ್ಳ ಮಾನವರು ಆ ರೀತಿ ವರ್ತಿಸುತ್ತಾರೆ. ಕರ್ಮಗಳು ಇದ್ದಾಗ ಬರುತ್ತಲೇ ಇರುತ್ತವೆ. ಯಾರ ಜೀವನದಲ್ಲೇ ಆಗಲಿ, ನೀವು ನಿಮಗಾಗಿ ಬದುಕುತ್ತಿರುವಾಗ ಕರ್ಮವು ದೀರ್ಘಕಾಲ ಇರುತ್ತದೆ. ಜನರಿಗಾಗಿ ಬದುಕುತ್ತಿರುವಾಗ ಕರ್ಮದ ಆಯುಷ್ಯ ಕಡಿಮೆಯಾಗುತ್ತದೆ. ಅಂದರೆ ಅದು ಸ್ವಲ್ಪ ಕಾಲ ಮಾತ್ರ ಇರುತ್ತದೆ, ಆದರೆ ಕರ್ಮವು ಪೂರ್ಣವಾಗಿ ಬಿಟ್ಟು ಹೋಗುವುದಿಲ್ಲ.

ನೀವು ಒಂದು ಖನಿಜವಾಗಿ ಅಥವಾ ಶಿಲೆಯಾಗಿ ಬಂದು ಏನನ್ನೂ ಸಾಧಿಸಲಿಲ್ಲ. ವೃಕ್ಷವಾಗಿ ಬಂದು ಜನರಿಗೆ ಸ್ವಲ್ಪ ಉಪಯೋಗಕ್ಕೆ ಬರುತ್ತೀರಿ, ಪ್ರಾಣಿಯಾಗಿ ಬಂದು ಇನ್ನಷ್ಟು ಉಪಯೋಗಕ್ಕೆ ಬರುತ್ತೀರಿ. ಆದರೆ ಇವುಗಳಿಂದ ದೈವತ್ವಕ್ಕೆ

ಹತ್ತಿರವಾಗಲು ಸಾಧ್ಯವಿಲ್ಲ. ಮಾನವನಿಗೆ ಬುದ್ಧಿಯಿದೆ ಆದ್ದರಿಂದ ಆ ಬುದ್ಧಿಯನ್ನು ಉಪಯೋಗಿಸಿ ಗುರುಗಳ ಮೂಲಕ, ಶಾಸ್ತ್ರಗಳ ಮೂಲಕ, ಎಲ್ಲವನ್ನೂ ಅಧ್ಯಯನ ಮಾಡಿ ತನ್ನ ಸ್ವಸ್ವರೂಪವನ್ನು ತಿಳಿದುಕೊಳ್ಳಬಹುದು. ಆದರೆ ಆ ಬುದ್ಧಿಯನ್ನು ವಿನಾಶ ಮಾಡಿಕೊಂಡರೆ ತಾನು ಎಂದೆಂದಿಗೂ ಕೇವಲ ಒಬ್ಬ ಜೀವಿಯಾಗಿಯೇ ಉಳಿಯುತ್ತಾನೆಯೇ ಹೊರತು ದೇವನಾಗಿ ಬೆಳೆಯಲಾರನು. ಅದಕ್ಕಾಗಿಯೇ ಮಾನವ ಜನ್ಮವು ಶ್ರೇಷ್ಠವಾದುದು ಎಂದು ಹೇಳುತ್ತಾರೆ.

ಪ್ರಕೃತಿಯು ಬುದ್ಧಿ ಎಂಬ ವರವನ್ನು ಮಾನವನಿಗೆ ಮಾತ್ರ ನೀಡಿದೆ. ಬೇರೆ ಯಾವ ಜೀವನಿಗೂ ಬುದ್ಧಿಯಿಲ್ಲ. ಅದಕ್ಕಾಗಿಯೇ ಮಾನವನಿಗಿಂತ ಇವೆಲ್ಲವೂ ಕಡಿಮೆ ಶಕ್ತಿ ಹೊಂದಿವೆ. ಅವುಗಳೂ ಸಹ ಆತ್ಮಸ್ವರೂಪಗಳೇ ಆದರೂ ಅವುಗಳಿಗೆ ಬುದ್ಧಿಯಿಲ್ಲದ ಕಾರಣ ಏನನ್ನೂ ವ್ಯಕ್ತಪಡಿಸಲು ಸಾಧ್ಯವಿಲ್ಲ. ಕೆಲವು ಅನುಭೂತಿಗಳನ್ನು ಪಡೆಯಲಾರವು. ಈಗ ವೃಕ್ಷಕ್ಕೆ ಯಾವುದೇ ಅನುಭೂತಿ ತಿಳಿಯುವುದಿಲ್ಲ. ಜಂತುಗಳಿಗೆ ಅನುಭೂತಿ ಇರುತ್ತದೆ ಆದರೆ ವ್ಯಕ್ತಪಡಿಸಲು ಸಾಧ್ಯವಿಲ್ಲ. ಮಾನವನಿಗೆ ಅನುಭೂತಿಯನ್ನು ಗ್ರಹಿಸಬಲ್ಲ ಮನಸ್ಸು ಇದೆ, ವ್ಯಕ್ತಪಡಿಸುವ ಬುದ್ಧಿ ಇದೆ. ಆದ್ದರಿಂದಲೇ ಸಾಧನೆ ಮಾಡಿ ಮನಸ್ಸಿನಿಂದ ಗ್ರಹಿಸುತ್ತಾ, ಬುದ್ಧಿಯಿಂದ ವ್ಯಕ್ತಪಡಿಸುತ್ತಾ, ಒಬ್ಬ ಮಾನವನು ಮಹಾತ್ಮನಾಗಿ, ಮಾಧವನಾಗಿ ಬೆಳೆಯಬಲ್ಲನು. ಮೊದಲು ಸಾಧನೆಯ ಮೂಲಕ ತನ್ನ ಸ್ವಸ್ವರೂಪವನ್ನು ತಿಳಿದುಕೊಳ್ಳಬೇಕೆಂದರೆ "ನಾನು ಆತ್ಮ" ಎಂದು ತಿಳಿದುಕೊಳ್ಳಬೇಕು. ಮಾನವನ ಅನುಭೂತಿ, ಅನುಭವ ಬುದ್ಧಿಯಲ್ಲಿ ಮೊದಲೇ ನಿಕ್ಷಿಪ್ತವಾಗಿ ಇರುತ್ತದೆ. ಬುದ್ಧಿಯನ್ನು ಉಪಯೋಗಿಸುವ ಮಾನವನು ಮಹಾತ್ಮನಾಗಬಲ್ಲನು. ಬುದ್ಧಿಯನ್ನು ನಾಶಪಡಿಸಿಕೊಂಡು ಪಶುವಿನಂತೆ ಎಲ್ಲರಿಗೂ ಕಷ್ಟ ಕೊಟ್ಟು ಅಧೋಗತಿಗೆ ಇಳಿಯಬಾರದು. ಅದಕ್ಕಾಗಿಯೇ ಯಾವಾಗಲೂ ತಪ್ಪು ಮಾಡದೆ ಇರಬೇಕು, "ಬುದ್ಧಿ ಇಲ್ಲವೇ" ಎಂದು ಅನ್ನಿಸಿಕೊಳ್ಳಬಾರದು.

ಬುದ್ಧಿಯನ್ನು ಉಪಯೋಗಿಸುವವನು ಸರಿಯಾಗಿ ವರ್ತಿಸುತ್ತಾನೆ, ಬುದ್ಧಿಯನ್ನು ಉಪಯೋಗಿಸಿಕೊಳ್ಳದೆ ದುರುಪಯೋಗ ಪಡಿಸಿಕೊಂಡವನು ಸರಿಯಲ್ಲದ ವರ್ತನೆ ತೋರುತ್ತಿರುತ್ತಾನೆ. ಅದಕ್ಕಾಗಿಯೇ ಮಾನವನು ಈ ಸೃಷ್ಟಿಯಲ್ಲಿ ಅತಿ ದೊಡ್ಡ ಜೀವಿ. ಮಾನವ ಜನ್ಮವೇ ದೈವವನ್ನು ತಿಳಿದುಕೊಳ್ಳುವ ಏಕೈಕ ಜನ್ಮ. ಅದಕ್ಕಾಗಿಯೇ ನೀವು ಯಾವಾಗಲೂ ಏನಾದರೊಂದನ್ನು ತಿಳಿದುಕೊಳ್ಳುತ್ತಲೇ ಇರಬೇಕು.

ನಿಮ್ಮನ್ನು ಬಹಳಷ್ಟು ಜನರು ಕೇಳುತ್ತಿರುತ್ತಾರೆ. ಎಲ್ಲವೂ ಆತ್ಮಸ್ವರೂಪಗಳೇ ಕಲ್ಲುಗಳಲ್ಲೂ ದೈವ ಇದ್ದಾನೆ ಎಂದು ಹೇಳುತ್ತಾರಲ್ಲಾ, ಹಾಗಾದರೆ ಕಲ್ಲುಗಳನ್ನು ಏಕೆ ಪೂಜಿಸಬಾರದು? ಎಂದು ಕೇಳುತ್ತಿರುತ್ತಾರೆ. ಕಾರಣವೇನೆಂದರೆ, ಕಲ್ಲುಗಳಲ್ಲಿ ಅತಿ

ಕಡಿಮೆ ಚೈತನ್ಯವಿದೆ, ಎಲ್ಲಕ್ಕಿಂತ ಹೆಚ್ಚಾಗಿ ಮಾನವನಲ್ಲೇ ಅತಿ ಹೆಚ್ಚು ಚೈತನ್ಯವಿದೆ. ಆದ್ದ–ರಿಂದ ಕಲ್ಲುಗಳಲ್ಲಿ ದೈವವನ್ನು ನೋಡುವುದಲ್ಲ, ತನ್ನಲ್ಲಿರುವ ದೈವವು ಸೃಷ್ಟಿಯಲ್ಲೆಲ್ಲಾ ಇದ್ದಾನೆ ಎಂದು ತಿಳಿದುಕೊಳ್ಳಬೇಕು. ಹೀಗೆ ತಿಳಿದುಕೊಂಡು ಮಾನವನು ತನ್ನಲ್ಲಿರುವ ಶಕ್ತಿಯನ್ನು ಹೆಚ್ಚಿಸಿಕೊಳ್ಳುವ ಪ್ರಯತ್ನ ಮಾಡಬೇಕು. ಅಷ್ಟೇ ಹೊರತು, ಅತ್ಯಂತ ಅಲ್ಪ ಚೈತನ್ಯ ಶಕ್ತಿಯುಳ್ಳ ಕಲ್ಲುಗಳನ್ನು ಹಿಡಿದುಕೊಂಡು 'ನನಗೆ ಶಕ್ತಿ ಕೊಡು' ಎಂದು ಕೇಳಿದರೆ, ಶಕ್ತಿಯೇ ಇಲ್ಲದ ಕಲ್ಲುಗಳು ಅತಿ ಶಕ್ತಿವಂತನಾದ ಮಾನವನಿಗೆ ಏನನ್ನು ಕೊಡಬಲ್ಲವು? ಇದನ್ನು ಯೋಚಿಸಿದಾಗ ಎಲ್ಲರೂ ಕೂಡ ಧ್ಯಾನ ಸಾಧನೆ ಮಾಡುತ್ತಾರೆ.

ಏಕೆಂದರೆ ಸಾಧನೆ ಮಾಡುವ ಶಕ್ತಿ ಮಾನವನಿಗಿದೆ. ಬುದ್ಧಿಯನ್ನು ಉಪಯೋಗಿಸಿದರೆ ತಿಳಿದುಕೊಳ್ಳಬಲ್ಲ, ಬುದ್ಧಿಯನ್ನು ಉಪಯೋಗಿಸದಿದ್ದರೆ 'ನನ್ನಿಂದ ಸಾಧ್ಯವಿಲ್ಲ' ಎಂದುಕೊಳ್ಳುತ್ತಾನೆ. ಒಬ್ಬ ಮಾನವನು ತಿಳಿದುಕೊಂಡದ್ದನ್ನು ಇಡೀ ಮಾನವಕುಲವೇ ತಿಳಿದುಕೊಳ್ಳಬಹುದು. ಇದನ್ನು ಅರ್ಥಮಾಡಿಕೊಂಡರೆ ಪ್ರತಿಯೊಬ್ಬರಿಗೂ ದೈವವಾಗುವ ಅರ್ಹತೆಯಿದೆ. ಸೃಷ್ಟಿಯ 84 ಲಕ್ಷ ಜೀವರಾಶಿಗಳಲ್ಲಿ ಮಾನವನೊಬ್ಬನಿಗೇ ಆ ಅರ್ಹತೆಯಿದೆ ಎಂದು ಗ್ರಹಿಸಿದ ದಿನ ಪ್ರತಿಯೊಬ್ಬರೂ ಧ್ಯಾನಕ್ಕೆ ಬರಬಲ್ಲರು, ದೈವವಾಗಬಲ್ಲರು, ಆಗಬೇಕು ಕೂಡ! ಇಷ್ಟು ವಿಷಯಗಳನ್ನು ತಿಳಿದುಕೊಳ್ಳದಿದ್ದರೆ ಬೆಳೆಯಲು ಸಾಧ್ಯವಿಲ್ಲ, ಯಾವುದೋ ಒಂದು ಮೂಲೆಯಲ್ಲಿ ಅನುಮಾನಗಳು ಇರುತ್ತಲೇ ಇರುತ್ತವೆ. ಅದಕ್ಕೇ ಪ್ರತಿಯೊಂದು ವಿಷಯವನ್ನೂ ತಿಳಿದುಕೊಳ್ಳಬೇಕು. 'ಎಲ್ಲಿಯವರೆಗೆ ಕೇಳುತ್ತೀರಿ ನೀವು?' ಎಂದು ತುಂಬಾ ಜನ ಕೇಳುತ್ತಿರುತ್ತಾರೆ. ಆತ್ಮ ದರ್ಶನವಾದ ದಿನ ಈ ಸೃಷ್ಟಿಯಲ್ಲಿ ನೀವು ತಿಳಿದುಕೊಳ್ಳಬೇಕಾದದ್ದೆಲ್ಲಾ ಪೂರ್ತಿಯಾದಂತೆ! ಅಲ್ಲಿಯವರೆಗೂ ಕೇಳುತ್ತಲೇ ಇರಬೇಕು, ಅಲ್ಲಿಯವರೆಗೂ ತಿಳಿದುಕೊಳ್ಳುತ್ತಲೇ ಇರಬೇಕು. ಧ್ಯಾನ ಸಾಧನೆ ಮಾಡುತ್ತಲೇ ಇರಬೇಕು, ನಿಮ್ಮ ಅನ್ವೇಷಣೆ ನಿರಂತರವಾಗಿ ಮುಂದುವರಿಯುತ್ತಲೇ ಇರಬೇಕು.

## ಶೂದ್ರತ್ವ – ವಿಪ್ರತ್ವ – ಬ್ರಾಹ್ಮಣತ್ವ

ಪ್ರಸ್ತುತ ಪ್ರಪಂಚದಲ್ಲಿ ಎಲ್ಲರೂ ತಾವು ಯಾವ ಕುಲದಲ್ಲಿ ಹುಟ್ಟುತ್ತಾರೋ ಅದೇ ತಮ್ಮ ಕುಲ ಎಂದು ಹೇಳಿಕೊಳ್ಳುತ್ತಿದ್ದಾರೆ. ಆದರೆ ಭಗವದ್ಗೀತೆಯ ಪ್ರಕಾರ, ಶ್ರೀಕೃಷ್ಣ ಪರಮಾತ್ಮನು ಗುಣಗಳನ್ನು ಆಧರಿಸಿ ವರ್ಣಗಳನ್ನು ವ್ಯವಸ್ಥೆಗೊಳಿಸಿದ್ದಾನೆ.

**ಶ್ಲೋಕ: ಚಾತುರ್ವರ್ಣ್ಯಂ ಮಯಾ ಸೃಷ್ಟಂ ಗುಣಕರ್ಮವಿಭಾಗಶಃ ।**

**ತಸ್ಯ ಕರ್ತಾರಮಪಿ ಮಾಂ ವಿದ್ಧ್ಯಕರ್ತಾರಮವ್ಯಯಮ್ ॥ (ಭ.ಗೀ. 4–13)**

**ತಾತ್ಪರ್ಯ:** ಬ್ರಾಹ್ಮಣ, ಕ್ಷತ್ರಿಯ, ವೈಶ್ಯ, ಶೂದ್ರ ಎಂಬ ನಾಲ್ಕು ವರ್ಣಗಳ ಸಮುದಾಯವು, ಗುಣ ಮತ್ತು ಕರ್ಮಗಳ ವಿಭಾಗಕ್ಕನುಗುಣವಾಗಿ ನನ್ನಿಂದ ಸೃಷ್ಟಿಸಲ್ಪಟ್ಟಿದೆ. ಈ ರೀತಿಯ ಸೃಷ್ಟಿ ರಚನೆಗೆ ನಾನೇ ಕರ್ತೃವಾಗಿದ್ದರೂ, ನಾಶರಹಿತನಾದ ನನ್ನನ್ನು ಅಕರ್ತೃ ಎಂದೇ

ತಿಳಿಯಿರಿ! ಅಂದರೆ ನಾಲ್ಕು ವರ್ಣಗಳನ್ನು ಗುಣಗಳ ಆಧಾರದ ಮೇಲೆ ವಿಭಜಿಸಿದ್ದೇನೆ ಎಂದು ಹೇಳಿದ್ದಾನೆ.

**1) ಜ್ಞಾನವಿರುವವನನ್ನು ಬ್ರಾಹ್ಮಣನೆಂದೂ,**

**2) ಧೈರ್ಯವಿರುವವನನ್ನು ಕ್ಷತ್ರಿಯನೆಂದೂ,**

**3) ತೃಪ್ತಿಯಿರುವವರನ್ನು ವೈಶ್ಯರೆಂದೂ,**

**4) ಉಳಿದವರನ್ನು ಶೂದ್ರರೆಂದೂ ವಿಭಜಿಸಲಾಗಿದೆ.**

ಪ್ರಸ್ತುತ ವರ್ಣ ವ್ಯವಸ್ಥೆಯು ಹೋಗಿ, ಕುಲಗಳ ವ್ಯವಸ್ಥೆ ಬಂದಿದೆ; ಕುಲಗಳನ್ನು ಜಾರಿಗೆ ತಂದಿದ್ದಾರೆ. ಬ್ರಾಹ್ಮಣ ಕುಲದಲ್ಲಿ ಹುಟ್ಟಿದರೆ ಬ್ರಾಹ್ಮಣನೆಂದೂ, ವೈಶ್ಯ ಕುಲದಲ್ಲಿ ಹುಟ್ಟಿದರೆ ವೈಶ್ಯನೆಂದೂ, ಕ್ಷತ್ರಿಯ ಕುಲದಲ್ಲಿ ಹುಟ್ಟಿದರೆ ಕ್ಷತ್ರಿಯನೆಂದೂ, ಶೂದ್ರರ ಕುಲದಲ್ಲಿ ಹುಟ್ಟಿದರೆ ಶೂದ್ರನೆಂದೂ ಕುಲಗಳನ್ನು ಪರಿಗಣಿಸುತ್ತಿದ್ದಾರೆ. ನೀವು ಕೂಡ ಆತ್ಮಜ್ಞಾನ ಪಡೆಯುವವರೆಗೂ ಇದೇ ಅಭಿಪ್ರಾಯದಲ್ಲಿ ಇರುತ್ತೀರಿ.

ಆದರೆ ಆತ್ಮಜ್ಞಾನ ಪಡೆದಾಗ, ಭಗವಂತನ ದೃಷ್ಟಿಯಲ್ಲಿ ಕುಲಗಳಿಗಿಂತ ಗುಣಗಳಿಗೇ ಪ್ರಾಮುಖ್ಯತೆ ಇರುತ್ತದೆ ಎಂಬ ವಿಷಯವನ್ನು ತಿಳಿದುಕೊಳ್ಳುತ್ತೀರಿ. ಭಗವಂತನು ಕೆಲಸಗಳನ್ನು ಮತ್ತು ಗುಣಗಳನ್ನು ಆಧರಿಸಿ ವಿಭಜಿಸಿದರೆ, ಲೋಕದಲ್ಲಿ ಅದನ್ನು ಕುಲಗಳನ್ನಾಗಿ ಬದಲಾಯಿಸಿಕೊಂಡಿದ್ದಾರೆ.

ಒಬ್ಬರ ಮೇಲೆ ಒಬ್ಬರು ಭಿನ್ನಾಭಿಪ್ರಾಯಗಳನ್ನು ಬೆಳೆಸಿಕೊಳ್ಳುತ್ತಿದ್ದಾರೆ. ಆದರೆ ಪ್ರಸ್ತುತ ಮಾನವರ ಗುಣಗಳನ್ನು ಆಧರಿಸಿ, ಅವರ ಲಕ್ಷಣಗಳ ಆಧಾರದ ಮೇಲೆ ಮೂರು ವಿಧಗಳಾಗಿ ವಿಂಗಡಿಸಲಾಗಿದೆ:

**1) ಶೂದ್ರತ್ವ, 2) ವಿಪ್ರತ್ವ, 3) ಬ್ರಾಹ್ಮಣತ್ವ.**

**1) ಶೂದ್ರತ್ವ:** ಇವರು ಹೆಚ್ಚಾಗಿ ತಮೋಗುಣದಲ್ಲಿ ಇರುತ್ತಾರೆ. ಇವರು ಶುಚಿ, ಶುಭ್ರತೆಯನ್ನು ಪಾಲಿಸುವುದು ಕಡಿಮೆ, ಅಶ್ರದ್ಧೆ (ನಿರ್ಲಕ್ಷ್ಯ) ಹೆಚ್ಚು. ನಮ್ಮ ಪೂರ್ವಜರು ಶುಚಿ, ಶುಭ್ರತೆ ಇಲ್ಲದ ಜಾಗದಲ್ಲಿ ಲಕ್ಷ್ಮೀದೇವಿಯು ನೆಲೆಸುವುದಿಲ್ಲ ಎಂದು ಹೇಳುತ್ತಿದ್ದರು. ಇನ್ನು ಭಗವದ್ಗೀತೆಯಲ್ಲಿಯೂ ಕೂಡ ಶ್ರೀಕೃಷ್ಣ ಪರಮಾತ್ಮನು ಹೀಗೆ ಹೇಳಿದ್ದಾನೆ.

**ಶ್ಲೋಕ: ಅನಪೇಕ್ಷಃ ಶುಚಿರ್ದಕ್ಷ ಉದಾಸೀನೋ ಗತವ್ಯಥಃ ।**

**ಸರ್ವಾರಂಭಪರಿತ್ಯಾಗೀ ಯೋ ಮದ್ಭಕ್ತಃ ಸ ಮೇ ಪ್ರಿಯಃ ॥ (ಭ.ಗೀ. 12.16)**

**ತಾತ್ಪರ್ಯ:** ಯಾವನು ಅಪೇಕ್ಷೆಗಳಿಲ್ಲದವನೋ, ಅಂತರಂಗದ ಶುದ್ಧಿ ಉಳ್ಳವನೋ, ವಿವೇಕವಂತನೋ, ಯಾವುದರ ಮೇಲೂ ಆಸಕ್ತಿ ಇಲ್ಲದವನೋ, ದುಃಖಿಸದವನೋ, ಸಮಸ್ತ ಕರ್ಮಗಳ ಫಲವನ್ನು ತ್ಯಜಿಸಿದವನೋ ಮತ್ತು ನನ್ನಲ್ಲಿ (ಆತ್ಮದಲ್ಲಿ) ಭಕ್ತಿ ಉಳ್ಳವನೋ, ಅವನು ನನಗೆ ಪ್ರಿಯನು.

ಅಂದರೆ ಯಾವುದರ ಮೇಲೂ ಆಸೆ ಇಲ್ಲದವನು, ಶುಚಿಯಾಗಿ, ಶುಭ್ರವಾಗಿ ಇರುವವನು ನನಗೆ ಇಷ್ಟ ಎಂದು ಹೇಳಿದ್ದಾರೆ. ಶುಚಿ ಎಂದರೆ ಕೇವಲ ಸ್ನಾನ ಪಾನಾದಿಗಳಿಂದ ಶರೀರವನ್ನು ಶುದ್ಧವಾಗಿರಿಸಿಕೊಳ್ಳುವುದು ಮಾತ್ರವಲ್ಲ, ಪ್ರತಿಯೊಂದು ಕೆಲಸವನ್ನು ಶುಚಿಯಾಗಿ, ಶುಭ್ರವಾಗಿ ಮಾಡಬೇಕು. ಅದಕ್ಕಾಗಿಯೇ ಶುಭ್ರವಾಗಿ ಇಟ್ಟುಕೊಳ್ಳುವುದು ಬಾಹ್ಯ ಶುಚಿಯಾದರೆ, ಶುಚಿ ಎಂಬುದು ಅಂತರಂಗದ ಶುದ್ಧಿಯ ಅಡಿಯಲ್ಲಿ ಬರುತ್ತದೆ. ಬಾಹ್ಯ ಶುಚಿ ಎಂದರೆ ಸ್ನಾನ ಮಾಡುವುದು. ಇನ್ನು ಅಂತರಂಗದ ಶುದ್ಧಿ ಎಂದರೆ ಮನಸ್ಸನ್ನು, ಬುದ್ಧಿಯನ್ನು, ಚಿತ್ತವನ್ನು ಯಾವುದೇ ಕಲ್ಮಶಗಳಿಲ್ಲದೆ ಧ್ಯಾನದ ಮೂಲಕ ಶುಭ್ರವಾಗಿ ಇಟ್ಟುಕೊಳ್ಳುವುದು. ಮತ್ತು ಪೂರ್ವದಲ್ಲಿ ಅಡುಗೆ ಮಾಡಬೇಕೆಂದರೂ, ಯಾವ ಕೆಲಸ ಮಾಡಬೇಕೆಂದರೂ 'ಮಡಿ' ಎಂಬ ಹೆಸರಿನಲ್ಲಿ ಶುಚಿ ಮತ್ತು ಶುಭ್ರತೆಯನ್ನು ಪಾಲಿಸುತ್ತಿದ್ದರು. ಅಡುಗೆ ಒಲೆಯ ಹತ್ತಿರ ಹೋಗಬೇಕೆಂದರೆ ಹಿಂದಿನ ಕಾಲದಲ್ಲಿ ಜನರು ಸ್ನಾನ ಮಾಡದೆ ಅಡುಗೆ ಮನೆಗೆ ಹೋಗುತ್ತಿರಲಿಲ್ಲ. ಇಂದಿಗೂ ನಾವು ಅಂತಹ ಅನೇಕ ಜನರನ್ನು ನೋಡುತ್ತೇವೆ. ಆದರೆ ಇಂದಿನ ತಲೆಮಾರಿನವರು ಅಡುಗೆ ಮಾಡುವುದನ್ನು ಒಂದು ಕೆಲಸ ಅಥವಾ ಹೊರೆ ಎಂದು ಭಾವಿಸುತ್ತಿದ್ದಾರೆ. ಅಷ್ಟಕ್ಕೂ ಆ ಶುಚಿತ್ವ ಏಕೆ ಅಂದರೆ? ಪೂರ್ವಜರಿಗೆ ಅದರ ಹಿಂದಿನ ವೈಜ್ಞಾನಿಕ ಕಾರಣ ತಿಳಿದಿರಲಿ ಅಥವಾ ತಿಳಿಯದಿರಲಿ, ಅವರು ಎಲ್ಲದರಲ್ಲೂ ದೈವತ್ವವನ್ನು ಕಾಣುತ್ತಿದ್ದರು ಮತ್ತು ಶುದ್ಧವಾಗಿರಲು ಬಯಸುತ್ತಿದ್ದರು.

ಅವರು ಒಲೆ ಹಚ್ಚುವಾಗ ಮೊದಲು ಅಗ್ನಿದೇವನಿಗೆ ನಮಸ್ಕರಿಸಿ ಅಡುಗೆ ಪ್ರಾರಂಭಿಸುತ್ತಿದ್ದರು. ಆದರೆ ಇಂದು ಅತಿಯಾದ ಬುದ್ಧಿವಂತಿಕೆಯಿಂದಲೋ ಅಥವಾ ಪೂರ್ಣ ಜ್ಞಾನದ ಕೊರತೆಯಿಂದಲೋ, ಇವೆಲ್ಲವೂ ಅನಗತ್ಯ ಎಂದು ಭಾವಿಸಲಾಗುತ್ತಿದೆ. ಶುಚಿ ಮತ್ತು ಶುಭ್ರತೆ ಇಲ್ಲದೆ ಹೊರನೋಟಕ್ಕೆ ಚೆನ್ನಾಗಿ ಕಾಣಿಸಿಕೊಂಡರೂ, ಅವರ ಭಾವನೆಗಳು ಮಾತ್ರ ಅಶುದ್ಧತೆಯಿಂದ ಕೂಡಿರುತ್ತವೆ. ಇವರೆಲ್ಲರೂ ತಮೋಗುಣ ಪ್ರಧಾನವಾದವರು. ಅನೇಕರು ಈಗ ಅಡುಗೆ ಮಾಡಿದ ನಂತರ ಸ್ನಾನ ಮಾಡುತ್ತಾರೆ.

**ಆಚಾರ ಮತ್ತು ಫಲಿತಾಂಶದ ನಡುವಿನ ವ್ಯತ್ಯಾಸ:** ನೀವು ಸ್ನಾನ ಮಾಡಿ ಅಡುಗೆ ಮಾಡಿದಾಗ ಸಿಗುವ ರುಚಿಗೂ ಮತ್ತು ಸ್ನಾನ ಮಾಡದೆ ಅಡುಗೆ ಮಾಡಿದಾಗ ಸಿಗುವ ರುಚಿಗೂ ತುಂಬಾ ವ್ಯತ್ಯಾಸವಿರುತ್ತದೆ. ಹೀಗೆ ಶುಚಿತ್ವವನ್ನು ಪಾಲಿಸದವರು ಭಗವಂತನಿಗೆ ಇಷ್ಟವಾಗುವುದಿಲ್ಲವಂತೆ. ತಮೋಗುಣ ಹೆಚ್ಚಾಗಿರುವವರು ಈ ಶುಚಿ-ಶುಭ್ರತೆಗಳನ್ನು ಪಾಲಿಸುವುದಿಲ್ಲ. ಅಂತಹವರಿಗೆ ಆಸೆಗಳು ಕೂಡ ಹೆಚ್ಚಾಗಿರುತ್ತವೆ.

ಏಕೆಂದರೆ ಇವರಿಗೆ ಅಂತರ್ ದೃಷ್ಟಿ ಅಥವಾ ಆತ್ಮ ದೃಷ್ಟಿ ಇರುವುದಿಲ್ಲ. ಕೇವಲ ಬಾಹ್ಯ ಪ್ರಪಂಚವನ್ನು ನೋಡುತ್ತಾ, ಹೀಗಿದ್ದರೆ ಚೆನ್ನಾಗಿರುತ್ತದೆ ಎಂದು ಅತಿಯಾದ

ಆಸೆಗಳನ್ನು ಬೆಳೆಸಿಕೊಳ್ಳುತ್ತಾರೆ. ಅವು ದೈಹಿಕ ಆಸೆಗಳಾಗಿರಲಿ ಅಥವಾ ಮಾನಸಿಕ ಆಸೆಗಳಾಗಿರಲಿ; ಯಾರಲ್ಲಿ ಆಸೆಗಳು ಹೆಚ್ಚಾಗಿರುತ್ತವೆಯೋ ಅವರು ಭಗವಂತನಿಂದ ಅಷ್ಟೇ ದೂರವಿರುತ್ತಾರೆ. ನಾವು ಗಮನಿಸಿದರೆ, ಈ ಆಸೆಗಳೆಲ್ಲವೂ ಲೌಕಿಕವಾದವುಗಳೇ ಆಗಿರುತ್ತವೆ. ಲೌಕಿಕ ಆಸೆಗಳು ಹೆಚ್ಚಾಗಿವೆ ಎಂದರೆ ಅವರು ಖಂಡಿತವಾಗಿಯೂ ತಮೋಗುಣದಲ್ಲಿದ್ದಾರೆ ಎಂದರ್ಥ.

ಕೆಲವರು ತಮ್ಮ ಆಸೆಗಳನ್ನು ತೀರಿಸಿಕೊಳ್ಳಲು ಎದುರಿಗಿರುವವರನ್ನು ನೋಯಿಸುತ್ತಾರೆ, ಕಷ್ಟಪಡಿಸುತ್ತಾರೆ ಮತ್ತು ಕೀಳು ಮಟ್ಟದ ಕೆಲಸಗಳನ್ನು ಮಾಡಲು ಕೂಡ ಹಿಂಜರಿಯುವುದಿಲ್ಲ. ಅವರು ಇನ್ನೂ ಕೆಳಮಟ್ಟಕ್ಕೆ ಇಳಿಯುತ್ತಿರುತ್ತಾರೆ. ಎದುರಿನವನನ್ನು ಕೊಂದಾದರೂ ನನ್ನ ಕೋರಿಕೆ ತೀರಿಸಿಕೊಳ್ಳಬೇಕು ಎನ್ನುವಷ್ಟು ನೀಚವಾಗಿ ವರ್ತಿಸುವವರನ್ನು ನಾವು ಇಂದು ಈ ಭೂಮಿಯ ಮೇಲೆ ಅದೆಷ್ಟೋ ಮಂದಿಯನ್ನು ನೋಡುತ್ತಿದ್ದೇವೆ. ತನಗೆ ಅಡ್ಡಬಂದವನನ್ನು ತೆಗೆದುಹಾಕುವುದು, ತನ್ನ ಮಾತು ಕೇಳದವರನ್ನು ಹಿಂಸಿಸುವುದು, ಈ ರೀತಿಯಾಗಿ ಬಹಳಷ್ಟು ಜನರನ್ನು ನೋಡುತ್ತಿದ್ದೇವೆ. ಮತ್ತೆ ಇಂತಹ ಜನರಿಗೆ ಸತ್ಯ, ಧರ್ಮ ತಿಳಿಯುವುದಿಲ್ಲ, ದಾನದ ಗುಣವಂತೂ ಅಸಲಿಗೆ ಇರುವುದಿಲ್ಲ, ಸ್ವಾರ್ಥಕ್ಕಾಗಿ ಬದುಕುವ ಇವರಿಗೆ ತ್ಯಾಗಬುದ್ಧಿಯೂ ಇರುವುದಿಲ್ಲ. ಈ ಲಕ್ಷಣಗಳು ಇರುವವನನ್ನು 'ಶೂದ್ರತ್ವ' ಉಳ್ಳವನು ಎನ್ನುತ್ತಾರೆ. ಅಂದರೆ ಇವನು ಬ್ರಾಹ್ಮಣ ಕುಲದಲ್ಲಿ ಹುಟ್ಟಿದರೂ, ಎಷ್ಟೇ ದೊಡ್ಡ ಕುಲದಲ್ಲಿ ಹುಟ್ಟಿದರೂ, ಹಿಂಸೆಯಿಂದ ಕೂಡಿದ ಪ್ರವೃತ್ತಿ ಇರುವುದರಿಂದ ಇಂತಹವನನ್ನು ಶೂದ್ರನೆಂದೇ ಕರೆಯುತ್ತಾರೆ ಎಂದು ಮಹಾತ್ಮರು ಹೇಳಿದ್ದಾರೆ.

ಏಕೆ ಇಷ್ಟೆಲ್ಲಾ ಜಾಗ್ರತೆಗಳನ್ನು ಹೇಳುತ್ತಾರೆಂದರೆ, ಭಗವಂತನಿಗೆ ಹತ್ತಿರವಾಗಿಸುವುದು ಸಾತ್ವಿಕ ಮತ್ತು ಶುದ್ಧ ಸಾತ್ವಿಕ ಗುಣಗಳು, ಆದ್ದರಿಂದ ತಮೋಗುಣ ಇರಬಾರದು, ಈ ನೀಚ ಲಕ್ಷಣಗಳು ಇರಬಾರದು. ಅದರಲ್ಲೂ ಸಾಧನೆ ಮಾಡುವವರು ಇನ್ನೂ ಜಾಗರೂಕತೆಯಿಂದ ಗುಣಗಳನ್ನು ಬದಲಾಯಿಸಿಕೊಳ್ಳಬೇಕೆಂದೇ ಇವೆಲ್ಲವನ್ನೂ ಹೇಳಲಾಗಿದೆ. ಎಲ್ಲರೂ ಈ ಶೂದ್ರತ್ವವನ್ನು ಬಿಡಬೇಕು. ದೊಡ್ಡ ಕುಲದಲ್ಲಿ ಹುಟ್ಟಿ ನಾವು ದೊಡ್ಡವರು ಎಂದುಕೊಳ್ಳುವುದಲ್ಲ, ಆ ದೊಡ್ಡ ಕುಲದಲ್ಲಿ ಹುಟ್ಟಿದರೂ ಆ ಕುಲಕ್ಕೆ ತಕ್ಕ ಗುಣಗಳಿದ್ದರೆ ಮಾತ್ರ ಅವರು ದೊಡ್ಡವರು. ಎಷ್ಟೇ ದೊಡ್ಡ ಕುಲದಲ್ಲಿ ಹುಟ್ಟಿದರೂ ಇಂತಹ (ನೀಚ) ಲಕ್ಷಣಗಳಿದ್ದರೆ ಅವರು ಶೂದ್ರತ್ವ ಉಳ್ಳವರೇ ಎಂದು ಹೇಳಲಾಗಿದೆ.

**2) ವಿಪ್ರತ್ವಂ:** ವಿಪ್ರತ್ವ ಎಂದರೆ ಇವರಿಗೆ ದೈವಭಕ್ತಿ ಬಹಳ ಹೆಚ್ಚಾಗಿಯೇ ಇರುತ್ತದೆ. ಇವರು ಶಾಸ್ತ್ರಗಳನ್ನು ಓದುತ್ತಾ, ಅಧ್ಯಯನ ಮಾಡುತ್ತಿರುತ್ತಾರೆ, ಎಷ್ಟೋ ವಿಷಯಗಳನ್ನು ಕಲಿಯುತ್ತಿರುತ್ತಾರೆ. ಅವುಗಳನ್ನು ಕಲಿಯುವಾಗ ಮತ್ತು ಓದುವಾಗ ಇವರಿಗೆ ಬಹಳ

ಆನಂದವಿರುತ್ತದೆ. ಪಕ್ಕದವರ ಬಗ್ಗೆಯೂ ಸ್ವಲ್ಪವಾದರೂ ಆಲೋಚಿಸುತ್ತಾರೆ, ದಾನ ಧರ್ಮಗಳನ್ನು ಮಾಡುತ್ತಾರೆ, ಊರಿಗೆ ಒಳ್ಳೆಯದನ್ನು ಮಾಡಬೇಕೆಂದು ಬಯಸುತ್ತಿರುತ್ತಾರೆ.

ಇಲ್ಲಿ ನಾವು ಗಮನಿಸಿದರೆ, ಈ ಜನರಿಗೆ ಸತ್ವಗುಣ ಬಂದಾಗ, ಸ್ವಲ್ಪ ಒಳ್ಳೆಯದನ್ನು ಮಾಡಬೇಕೆಂಬ ಆಲೋಚನೆಯಿಂದ ಎಲ್ಲರಿಗೂ ದೈಹಿಕ ಸೇವೆ ಮಾಡುತ್ತಿರುತ್ತಾರೆ. ಅವರಿಗೆ ಅಷ್ಟರಮಟ್ಟಿಗೇ ತಿಳಿದಿರುತ್ತದೆ. ಯಾಕೆಂದರೆ ಶಾಸ್ತ್ರಗಳಲ್ಲಿ ದಾನ ಮತ್ತು ನಿಷ್ಕಾಮ ಕರ್ಮ ಮಾಡಬೇಕೆಂದು ಹೇಳುತ್ತಾರೆ. ದೇವಸ್ಥಾನಗಳಲ್ಲಿ ಕೂಡ ಭಗವಂತನ ಪ್ರೀತ್ಯರ್ಥವಾಗಿ ಎಂದು ಓದುತ್ತಿರುತ್ತಾರೆ. ಅಂದರೆ ಭಗವಂತನಿಗೆ ಇಷ್ಟವಾಗುವ ಗುಣ ದಾನದ ಗುಣವೆಂದು, ದಾನದ ಗುಣವಿದ್ದರೆ ಭಗವಂತನಿಗೆ ಪ್ರಿಯರಾಗುತ್ತಾರೆಂದು ಇವರು ಸ್ವಲ್ಪಮಟ್ಟಿಗೆ ಪ್ರಯತ್ನಿಸುತ್ತಿರುತ್ತಾರೆ.

ಇವರದ್ದು ಹಿಂಸಾ ಪ್ರವೃತ್ತಿಯಲ್ಲ, ಏಕೆಂದರೆ ಸತ್ವಗುಣಕ್ಕೆ ಬಂದ ಮೇಲೆ ಹಿಂಸೆಯಿಂದ ದೂರವಿರುತ್ತಾರೆ. ಇವರು ಹೇಗಿರುತ್ತಾರೆಂದರೆ? ಸಾಧ್ಯವಾದರೆ ಸಹಾಯ ಮಾಡುತ್ತಾರೆ, ಮಾಡಲಾಗದಿದ್ದರೆ ಸುಮ್ಮನಿರುತ್ತಾರೆಯೇ ಹೊರತು ಎದುರಿಗಿರುವವರಿಗೆ ನಷ್ಟ ಉಂಟುಮಾಡುವುದಿಲ್ಲ. ಇಲ್ಲಿ ಇವರಿಗೆ ಧರ್ಮವು ತಿಳಿಯುತ್ತಿರುತ್ತದೆ. ದೊಡ್ಡ ದೊಡ್ಡ ಶಾಸ್ತ್ರಗಳಾಗಲಿ ಅಥವಾ ಭಗವದ್ಗೀತೆಯನ್ನಾಗಲಿ ಓದಿದ ಪ್ರತಿಯೊಬ್ಬರಿಗೂ ಧರ್ಮವು ಸ್ವಲ್ಪವಾದರೂ ಅರ್ಥವಾಗುತ್ತದೆ. ಆ ಧರ್ಮವು ಅರ್ಥವಾದಾಗ ಎದುರಿಗಿರುವವರನ್ನು ಹಿಂಸಿಸುವುದಿಲ್ಲ. ಹೀಗೆ ಇವರು ವಿಪ್ರತ್ವದಲ್ಲಿ ಇರುತ್ತಾರೆ. ಇವರು ಕಡಿಮೆ ಕುಲದಲ್ಲಿ ಹುಟ್ಟಿದ್ದರೂ ವಿಪ್ರರೇ. ಅಂದರೆ ಒಳ್ಳೆಯ ಗುಣಗಳು ಇದ್ದವರು ವಿಪ್ರರೇ. ನಾವು ಪ್ರಸ್ತುತ ಯಾರನ್ನು ಬ್ರಾಹ್ಮಣರು ಎಂದು ಕರೆಯುತ್ತಿದ್ದೇವೆಯೋ, ಅವರು ಬ್ರಾಹ್ಮಣ ಕುಲದಲ್ಲಿ ಹುಟ್ಟಿದ್ದರೂ ಕೂಡ ವಿಪ್ರರೇ ಆಗಿರುತ್ತಾರೆ.

**3) ಬ್ರಾಹ್ಮಣತ್ವ:** ಇವರು ಸಕಲ ಶಾಸ್ತ್ರಗಳನ್ನು ಅಧ್ಯಯನ ಮಾಡುತ್ತಾರೆ. ಉಪನಿಷತ್ತುಗಳು, ವೇದಗಳು ಮತ್ತು ಶಾಸ್ತ್ರಗಳನ್ನು ಓದುವವರೆಗೂ ದ್ವೈತದಲ್ಲಿ ಇರುತ್ತಾರೆ. ಅವುಗಳನ್ನು ಯಾವಾಗ ಓದುತ್ತಾರೋ ಮತ್ತು ಅರ್ಥಮಾಡಿಕೊಳ್ಳುತ್ತಾರೋ, ಆಗ ಅದ್ವೈತಕ್ಕೆ ಬರುತ್ತಾರೆ. ಅಂದರೆ ಯಾವಾಗ ಉಪನಿಷತ್ತುಗಳನ್ನು ಓದುತ್ತಾರೋ, ಈ ಜೀವಗಳೆಲ್ಲವೂ ಪರಮಾತ್ಮನ ಸ್ವರೂಪಗಳೇ ಎಂದು ತಿಳಿದುಕೊಳ್ಳುತ್ತಾರೆ. ಭಗವದ್ಗೀತೆಯಲ್ಲಿ "ಅಹಮಾತ್ಮ ಗುಡಾಕೇಶ" ಎಂದು ಓದಿದಾಗ, ಭಗವಂತನು ಎಲ್ಲಾ ಜೀವಿಗಳಲ್ಲಿ ಆತ್ಮನಾಗಿ ಇದ್ದಾನೆ ಎಂದು ತಿಳಿದುಕೊಳ್ಳುತ್ತಾರೆ.

ಇದು ಓದಿದಾಗ ಆನಂದ ಪಡುವುದು 'ವಿಪ್ರತ್ವ'ವಾದರೆ, ಒಬ್ಬ ಸದ್ಗುರುವು ಜೀವನಕ್ಕೆ ಬಂದಾಗ ಅದರ ಅಂತರಾರ್ಥಗಳು ಅರ್ಥವಾಗುತ್ತವೆ. ಇಂತಹವರ ಜೀವನಕ್ಕೆ ಸದ್ಗುರುಗಳೇ ಬರುತ್ತಾರೆ. ಆ ಸದ್ಗುರುಗಳಿಂದಲೇ ಇವರು ಜ್ಞಾನವನ್ನೆಲ್ಲಾ ಕಲಿಯುತ್ತಾರೆ. ಅಂದಿನಿಂದ "ನಾನು ಮಾಡುತ್ತಿದ್ದೇನೆ" ಎಂಬ ಭಾವನೆ ಹೋಗಿ, "ಭಗವಂತನೇ ನನ್ನ

ಕೈಯಿಂದ ಮಾಡಿಸುತ್ತಿದ್ದಾನೆ" ಎಂಬ ಭಾವನೆಗೆ ಬರುತ್ತಾರೆ.

ಇದು ಪೂರ್ವಜನ್ಮದ ಸುಕೃತ, ನಾನು ಕಳೆದ ಜನ್ಮದಲ್ಲಿ ಮಾಡಿದ ಒಳ್ಳೆಯ ಕೆಲಸಗಳಿಂದಲೇ ಭಗವಂತನು ಈ ದಿನ ನನ್ನನ್ನು ಇನ್ನು ಪ್ರೋತ್ಸಾಹಿಸುತ್ತಿದ್ದಾನೆ, ಕೆಲಸ ಮಾಡಲು ಅವಕಾಶ ನೀಡುತ್ತಿದ್ದಾನೆ ಎಂದು ಅಂದುಕೊಳ್ಳುತ್ತಾ ಈ 'ಬ್ರಾಹ್ಮಣತ್ವ'ದಲ್ಲಿ ಸಾಧನೆ, ಜ್ಞಾನ ಇವೆಲ್ಲವನ್ನೂ ಕಲಿಯಲು ಇಷ್ಟಪಡುತ್ತಾರೆ. ಕೆಲವರನ್ನು ನೋಡಿ, ಅವರು ಒಳ್ಳೆಯವರಾಗಿ ಇರುತ್ತಾರೆ ಆದರೆ ಸಾಧನೆಗೆ ಬರುವುದಿಲ್ಲ. 'ಅಹಂ ಬ್ರಹ್ಮಾಸ್ಮಿ', 'ತತ್ವಮಸಿ' ಎಂದು ತಿಳಿದುಕೊಳ್ಳುತ್ತಾರೆ ಆದರೆ ಧ್ಯಾನ ಸಾಧನೆ ಮಾಡುವುದಿಲ್ಲ.
ನಾವು ಒಳ್ಳೆಯ ಕೆಲಸಗಳನ್ನು ಮಾಡುತ್ತಿದ್ದೇವೆ ಅಲ್ವಾ ಎಂದು ತೃಪ್ತಿಯಿಂದ ದಾನಧರ್ಮಗಳನ್ನು ಮಾಡುತ್ತಿರುತ್ತಾರೆ. ಆದರೆ ಬ್ರಹ್ಮನನ್ನು ತಿಳಿದುಕೊಂಡವನು, ಬ್ರಹ್ಮನಿಗಾಗಿ ಪರಿತಪಿಸುವವನು, ಬ್ರಹ್ಮನಿಗಾಗಿ ಪ್ರಯತ್ನಿಸುವವನೇ 'ಬ್ರಾಹ್ಮಣ'. ಇನ್ನು ಆ ಭಗವಂತನನ್ನು ಸೇರುವುದಕ್ಕಾಗಿಯೇ ಈ ಧ್ಯಾನ ಎಂದು ಭಗವದ್ಗೀತೆಯಲ್ಲಿ ಕೂಡ ಹೇಳಲಾಗಿದೆ. ಯಾವಾಗ ಇವರು ಎಲ್ಲರೂ ಆತ್ಮಗಳೇ ಎಂದು ತಿಳಿದುಕೊಳ್ಳುತ್ತಾರೋ, ಆಗ ಯಾರನ್ನೂ ಹಿಂಸಿಸುವುದಿಲ್ಲ. ಅಹಿಂಸೆಯಲ್ಲಿ ಜೀವಿಸುತ್ತಾರೆ.

ಈಗ ನೋಡಿ, ಮೊದಲನೇ ವರ್ಗದವರಿಗೆ ಅಂದರೆ 'ಶೂದ್ರತ್ವ'ದಲ್ಲಿ ಇರುವವರಿಗೆ ದೈವದ ಮೇಲೆ ಭಯವಾಗಲಿ, ಭಕ್ತಿಯಾಗಲಿ ಇರುವುದಿಲ್ಲ. ಅದಕ್ಕೇ ಹಿಂಸೆಯಲ್ಲಿ ಜೀವಿಸುತ್ತಾರೆ. 'ವಿಪ್ರತ್ವ'ದಲ್ಲಿ ಇರುವವರಿಗೆ ಭಗವಂತನಿದ್ದಾನೆ ಎಂಬ ಭಕ್ತಿ ಇರುವುದರಿಂದ, ಹಿಂಸೆ ಮಾಡುವುದು ಪಾಪ ಎಂದು ತಿಳಿದಿರುವುದರಿಂದ ಅವರು ಅಹಿಂಸೆಯಲ್ಲಿ ಜೀವಿಸುತ್ತಾರೆ. ಇನ್ನು 'ಬ್ರಾಹ್ಮಣತ್ವ'ದಲ್ಲಿ ಇರುವವರು ಎಲ್ಲರೂ ಆತ್ಮಸ್ವರೂಪರೇ ಎಂದು ತಿಳಿದಿರುವುದರಿಂದ, ಸೃಷ್ಟಿಯಲ್ಲಿ ಯಾವುದೇ ಜೀವಿಯನ್ನು ಹಿಂಸಿಸಬಾರದು ಎಂಬ ದೊಡ್ಡ ಮನಸ್ಸಿನಿಂದ ಅವರು ಜೀವಿಸುತ್ತಾರೆ. ಗುರುಗಳನ್ನು, ಹಿರಿಯರನ್ನು, ಮಹಾತ್ಮರನ್ನು ಗೌರವಿಸುತ್ತಾರೆ.

ನನಗೇ ಎಲ್ಲವೂ ಗೊತ್ತು ಎಂಬುವ ಅಹಂಕಾರವಿಲ್ಲದೆ ಪ್ರತಿಯೊಂದರಿಂದ, ಪ್ರತಿಯೊಬ್ಬರಿಂದ ಕಲಿಯಲು ಪ್ರಯತ್ನಿಸುತ್ತಾರೆ. ದತ್ತಾತ್ರೇಯರು ಸೃಷ್ಟಿಯಲ್ಲಿನ 24 ಪ್ರಕೃತಿ ಜೀವಿಗಳಿಂದ ಎಷ್ಟೋ ವಿಷಯಗಳನ್ನು ಕಲಿತು ತಾವೊಬ್ಬ ಶ್ರೇಷ್ಠ ಬ್ರಹ್ಮಜ್ಞಾನಿಯಾದರು. ಅಂತಹವರು ಯಾವಾಗಲೂ ಶಾಂತವಾಗಿ, ನಿಶ್ಚಿಂತವಾಗಿ ಬ್ರಹ್ಮ ತೇಜಸ್ಸಿನಿಂದ ಬೆಳಗುತ್ತಿರುತ್ತಾರೆ. ಕಡಿಮೆ ಕುಲದಲ್ಲಿ ಹುಟ್ಟಿದರೂ, ಶೂದ್ರ ಕುಲದಲ್ಲಿ ಹುಟ್ಟಿದರೂ ಯಾರು ಆತ್ಮಜ್ಞಾನ ಮತ್ತು ಬ್ರಹ್ಮಜ್ಞಾನವನ್ನು ಕಲಿಯುತ್ತಾರೋ ಅವರು ಬ್ರಹ್ಮರ್ಷಿಗಳಾಗುತ್ತಾರೆ. ಬ್ರಾಹ್ಮಣ್ಯವನ್ನು ಪಡೆದ ಪ್ರತಿಯೊಬ್ಬರೂ ಬ್ರಹ್ಮರ್ಷಿಗಳಾಗುತ್ತಾರೆ. ನೀವು ನೋಡಿದರೆ, ವಿಶ್ವಾಮಿತ್ರರು ಕ್ಷತ್ರಿಯ ಕುಲದಲ್ಲಿ ಹುಟ್ಟಿದರು. ಆದರೆ ಧ್ಯಾನ ಮಾಡಿ, ಜ್ಞಾನ ಪಡೆದು,

ಬ್ರಹ್ಮತ್ವವನ್ನು ಹೊಂದಿ ಬ್ರಹ್ಮರ್ಷಿಯಾದರು. ಮೀನು ಹಿಡಿಯುವ ಕುಲದಲ್ಲಿ ಹುಟ್ಟಿದ ಮತ್ಸ್ಯಗಂಧಿಯ ಪುತ್ರರಾದ ವ್ಯಾಸ ಭಗವಾನರು ಬ್ರಹ್ಮರ್ಷಿಯಾಗಿ, ಅಂತಹ ಶ್ರೇಷ್ಠ ಬ್ರಹ್ಮಜ್ಞಾನವನ್ನು ಪ್ರಪಂಚಕ್ಕೆ ನೀಡಿದರು. ಹಾಗೆಯೇ ರತ್ನಾಕರನು ಒಬ್ಬ ಬೇಟೆಗಾರ. ಅವನು ನಾರದನಿಂದ ಆತ್ಮಜ್ಞಾನವನ್ನೆಲ್ಲ ತಿಳಿದುಕೊಂಡು, ತಾನೂ ಕೂಡ ಒಂದು ಶ್ರೇಷ್ಠ ಮಹಾಕಾವ್ಯವನ್ನು (ರಾಮಾಯಣ) ಬರೆದು ಪ್ರಪಂಚಕ್ಕೆ ನೀಡಿದನು. ಅಂದರೆ ಕಡಿಮೆ ಕುಲದಲ್ಲಿ ಹುಟ್ಟಿದರೂ ಪರಮಾತ್ಮನ ಮೇಲೆ ಆಸಕ್ತಿಯಿಂದ ಸಾಧನೆ ಮಾಡುತ್ತಾ ಆತ್ಮಜ್ಞಾನ, ಬ್ರಹ್ಮಜ್ಞಾನವನ್ನು ತಿಳಿದುಕೊಂಡರೆ ಬ್ರಾಹ್ಮಣ್ಯವನ್ನು ಪಡೆದು ಬ್ರಹ್ಮರ್ಷಿಯಾಗಿ ಬೆಳೆಯಬಹುದು. ಹಾಗೆಯೇ ಯಾರ ಮನಸ್ಸು ಸಾಧನೆಯತ್ತ ಹೋಗುತ್ತದೆಯೋ ಅವರೆಲ್ಲರೂ ಬ್ರಾಹ್ಮಣರೇ ಎಂದು ಶಂಕರಾಚಾರ್ಯರು ಹೇಳಿದ್ದಾರೆ. ಈಗ ಶೂದ್ರತ್ವವು ತಗ್ಗಿ, ಬ್ರಾಹ್ಮಣ್ಯವು ಹೆಚ್ಚಾಗಬೇಕು.

ವಿಪ್ರತ್ವದಲ್ಲಿ ಇರುವವರು ಓದುತ್ತಾರೆ, ಭಕ್ತಿಯನ್ನು ಬೆಳೆಸಿಕೊಳ್ಳುತ್ತಾರೆ, ಆದರೆ ಅವರು ಎಲ್ಲರಿಗೂ ಹಣದ ರೂಪದಲ್ಲಿ ಸಹಾಯ ಮಾಡುತ್ತಾರೆ ಹೊರತು, ತಮಗಿಲ್ಲದ ಬ್ರಹ್ಮಜ್ಞಾನವನ್ನು ಪಕ್ಕದವರಿಗೆ ಕಲಿಸಲಾರರು. ಈಗ ಯಜ್ಞಯಾಗಾದಿಗಳು, ಹೋಮಗಳನ್ನು ಮಾಡಿದರೆ ಶ್ರೇಷ್ಠವೆಂದು ಭಾವಿಸಿ ಮಾಡುತ್ತಾರೆ. ಆದರೆ ಪುಣ್ಯ ಕರ್ಮಗಳು, ಯಜ್ಞ ಕರ್ಮಗಳು ಮೋಕ್ಷಕ್ಕೆ ಕರೆದೊಯ್ಯುವುದಿಲ್ಲ. ವೇದ ವೇದಾಂಗಗಳನ್ನು ಓದಿದರೆ ಸತ್ಯವು ಅರ್ಥವಾಗುತ್ತದೆ, ಆದರೆ ಅವು ಸತ್ಯದಲ್ಲಿ ಜೀವಿಸಲು ಕಲಿಸುವುದಿಲ್ಲ. ಅದಕ್ಕಾಗಿಯೇ 'ವಿಪ್ರತ್ವ'ದಿಂದ ಈ 'ಬ್ರಾಹ್ಮಣ್ಯ'ಕ್ಕೆ ಬರಬೇಕು.

ವಿಪ್ರತ್ವದಲ್ಲಿ ಮೊದಲು ಎಲ್ಲವನ್ನೂ ಓದುತ್ತಾರೆ, ತದನಂತರ ಅವರಿಗೆ ಭಗವಂತನನ್ನು ತಿಳಿದುಕೊಳ್ಳಬೇಕೆಂಬ ತಪನೆ (ಹಂಬಲ) ಬಂದಾಗ, ಆ ಭಗವಂತನೇ ಒಬ್ಬ ಗುರುವಿನ ರೂಪದಲ್ಲಿ ಅವರ ಬಳಿಗೆ ಬಂದು ಭಗವಂತ ಯಾರೆಂದು ತಿಳಿಸುತ್ತಾನೆ. ಅಲ್ಲಿಯವರೆಗೆ ವಿಗ್ರಹದಲ್ಲಿ ದೇವರನ್ನು ಕಂಡವರು, 'ಆತ್ಮವೇ ದೈವ' ಎಂದು ತಿಳಿದಾಗ ಪೂಜೆಗಳನ್ನು ಬಿಟ್ಟು ಧ್ಯಾನ ಮಾಡಿ, ಜ್ಞಾನ ಪಡೆದು ಬ್ರಾಹ್ಮಣ್ಯಕ್ಕೆ ಬರುತ್ತಾರೆ.

ಬಹಳಷ್ಟು ಜನರು 'ಆತ್ಮವೇ ದೈವ' ಎಂದು ಹೇಳಿದರೂ ನಂಬುವುದಿಲ್ಲ. ಕೇವಲ ಕೆಲವರಿಗೆ ಮಾತ್ರ ನಂಬಿಕೆ ಬರುತ್ತದೆ ಎಂದರೆ, ಅವರ ಕಳೆದ ಜನ್ಮದ ಸಂಸ್ಕಾರಗಳು ಮತ್ತು ವಾಸನೆಗಳು (ಕರ್ಮಫಲಗಳು) ಹೋಗಿವೆ ಹಾಗೂ ಚಿತ್ತ ಶುದ್ಧಿಯಾಗಿದೆ ಎಂದರ್ಥ. ಕಳೆದ ಜನ್ಮದ ವಾಸನೆಗಳು ಹೋಗದಿದ್ದರೆ ಲೌಕಿಕ ಆಸೆಗಳು ಇದ್ದು, ಗುರು ಹೇಳಿದರೂ ಅವರಿಗೆ ನಂಬಿಕೆ ಇರುವುದಿಲ್ಲ. ನಂಬಿಕೆ ಇಲ್ಲದೆ ಮತ್ತು ಪೂಜೆಗಳನ್ನು ಬಿಡಲು ಧೈರ್ಯವಿಲ್ಲದೆ ಬಹಳಷ್ಟು ಜನರು ಇಂದಿಗೂ ಪೂಜೆಗಳನ್ನು

ಮಾಡುತ್ತಲೇ ಇದ್ದಾರೆ. ಸತ್ಯವನ್ನು ಹೇಳುವಾಗ ಭಯಪಡುತ್ತಿದ್ದಾರೆ ಎಂದರೆ, ಅವರು ಇನ್ನೂ ಮನಸ್ಸಿಗೆ ದಾಸರಾಗುತ್ತಿದ್ದಾರೆ ಎಂದು ಅರ್ಥ ಮಾಡಿಕೊಳ್ಳಬೇಕು. ಈ ಬ್ರಹ್ಮಜ್ಞಾನವನ್ನು ಪಡೆದರೆ, ಎಲ್ಲರಲ್ಲೂ ಆ ಪರಬ್ರಹ್ಮ ಸ್ವರೂಪವೇ ಆತ್ಮವಾಗಿ ನೆಲೆಸಿದೆ ಎಂದು ತಿಳಿದುಕೊಂಡು ಎಲ್ಲರನ್ನು ಪ್ರೀತಿಸಲು ಮತ್ತು ಗೌರವಿಸಲು ಸಾಧ್ಯವಾಗುತ್ತದೆ.

ಸರ್ವಜೀವಿಗಳ ಹಿತವನ್ನು ಬಯಸಿದರೆ ಸರ್ವೇಶ್ವರನು ಸಂತೋಷಪಡುತ್ತಾನೆ ಎಂದು ನಾವು ತಿಳಿಯಬೇಕು. ಅಂದರೆ ಸರ್ವಜೀವಿಗಳು ಆತ್ಮಸ್ವರೂಪಿಗಳೇ ಎಂದು ಅನುಭವಪೂರ್ವಕವಾಗಿ ಯಾವಾಗ ತಿಳಿದುಕೊಳ್ಳುತ್ತೇವೆಯೋ, ಆಗಲೇ ಸರ್ವಜೀವಿಗಳ ಹಿತವನ್ನು ಬಯಸುತ್ತೇವೆ. ಅದನ್ನೇ ಬುದ್ಧನು 'ವಿಶ್ವ ಪ್ರೇಮ' ಎಂದು ಹೇಳುತ್ತಾನೆ. ವಿಶ್ವ ಪ್ರೇಮವಿಲ್ಲದವರು ಈ ವಿಶ್ವವನ್ನು ಕಾಪಾಡಲಾರರು. ಕಾಪಾಡುವುದು ಎಂದರೆ ಯುದ್ಧದಲ್ಲಿ ಶತ್ರುಗಳನ್ನು ಎದುರಿಸುವುದು ಎಂದಲ್ಲ. ಹಿಂಸೆಯಿಂದ ಜನರನ್ನು ತಪ್ಪಿಸಿ ಅಹಿಂಸೆಯ ಮಾರ್ಗಕ್ಕೆ ತರಬೇಕು. "ಇವು ನನಗಾಗಿಯೇ ಹುಟ್ಟಿವೆ" ಎಂದು ಹಿಂಸಾ ಮಾರ್ಗದಲ್ಲಿರುವ ಜನರಿಗೆ ಅದು ತಪ್ಪು ಎಂದು ತಿಳಿಸಿ, ಎಲ್ಲವೂ ಆತ್ಮಸ್ವರೂಪಗಳೇ ಎಂದು ಅಹಿಂಸೆಯಲ್ಲಿ ಜೀವಿಸುವಂತೆ ಮಾಡಬೇಕು. ಈ ದಿನ ಪತ್ರೀಜಿಯವರು ಭೂಮಿಯ ಮೇಲೆ ಬಂದು ಮಾಂಸ ಸೇವನೆ ಮಾಡುವುದು ಎಷ್ಟು ತಪ್ಪು ಎಂಬುದನ್ನು ತಿಳಿಸುತ್ತಾ, ಎಲ್ಲರೂ ಧ್ಯಾನವನ್ನು ಕಲಿಯಬೇಕು ಮತ್ತು ಸಹಜೀವಿಗಳನ್ನು ಕೊಲ್ಲಬಾರದು ಎಂಬ ಅಹಿಂಸಾ ಮಾರ್ಗಕ್ಕೆ ಜನರನ್ನು ಕರೆತರಲು ಪ್ರಯತ್ನಿಸಿದರು. ಅಂದು ಬುದ್ಧ ಹಾಗೂ ಮಲಯಾಳ ಸ್ವಾಮಿಯಂತಹವರು ಎಷ್ಟು ತೀವ್ರವಾಗಿ ಶ್ರಮಿಸಿದರೋ, ಇಂದು ಪತ್ರೀಜಿ ಅವರು ಕೂಡ ಅಷ್ಟೇ ತೀವ್ರವಾಗಿ ಶ್ರಮಿಸಿ ಎಲ್ಲರನ್ನೂ ಸಾತ್ವಿಕ ಮಾರ್ಗಕ್ಕೆ ಕರೆತಂದಿದ್ದಾರೆ.

ಅನೇಕರು ಧ್ಯಾನಕ್ಕೆ ಬರುತ್ತಾರೆ, ಆದರೆ ಯಾವುದೋ ಕಾರಣದಿಂದ ಮತ್ತೆ ಹಿಂತಿರುಗುತ್ತಾರೆ. ಭಗವಂತನು ಕೂಡ ಪ್ರಕೃತಿಯ ಮೂಲಕ ಅನೇಕ ಪರೀಕ್ಷೆಗಳನ್ನು ಒಡ್ಡುತ್ತಾನೆ. ಅಂದರೆ, "ನಾವು ಅಂದುಕೊಂಡಿದ್ದನ್ನು ಸಾಧಿಸಲು ಸಾಧ್ಯವಾಗಲಿಲ್ಲ, ಯಾವುದೇ ಪ್ರಗತಿ ಕಾಣುತ್ತಿಲ್ಲ, ನಾನು ಬೆಳೆದಿದ್ದೇನೋ ಇಲ್ಲವೋ ನನಗೆ ತಿಳಿಯುತ್ತಿಲ್ಲ" ಎಂದು ಹೇಳುತ್ತಿರುತ್ತಾರೆ. ನಾವು ಅದೆಲ್ಲವನ್ನೂ ಪಕ್ಕಕ್ಕಿಟ್ಟು, ಯಾವ ದಿನ ಗುರುಗಳು ಬಂದರೋ ಆ ದಿನದಿಂದ ಧ್ಯಾನ ಮಾಡುವುದು ನನ್ನ ಕರ್ತವ್ಯ ಹಾಗೂ ಭಗವಂತನನ್ನು ತಿಳಿದುಕೊಳ್ಳುವುದೇ ಮಾನವ ಜನ್ಮದ ಧರ್ಮ ಎಂದು ಭಾವಿಸಿ ಮುನ್ನಡೆಯಬೇಕು.

ಸಾಧನೆ ಮಾಡುತ್ತಿದ್ದರೂ ನೀವು 'ಆತ್ಮ' ಎಂಬುದು ತಿಳಿಯುತ್ತಿಲ್ಲ ಎಂದರೆ, ಮಧ್ಯದಲ್ಲಿರುವ ನಿಮ್ಮ ಮನಸ್ಸು ಮಲಿನವಾಗಿದೆ ಎಂದರ್ಥ. ಆ ಕೊಳೆಯನ್ನು

ಹೋಗಲಾಡಿಸಿ, ಮನಸ್ಸನ್ನು ಶುದ್ಧವಾಗಿ ಇಟ್ಟುಕೊಳ್ಳಬೇಕೆಂದರೆ ಕೊಳೆ ಎಲ್ಲಿ ಉಂಟಾಗುತ್ತಿದೆ ಎಂದು ವಿಚಾರಿಸಬೇಕು.

- **ಮನಸ್ಸು ಬಂಧನಗಳಿಂದ ಮಲಿನವಾಗುತ್ತಿದೆಯೇ?**
- **ಸ್ವಾರ್ಥದಿಂದ ಮಲಿನವಾಗುತ್ತಿದೆಯೇ?**
- **ಅಥವಾ ನನ್ನಲ್ಲಿ ತ್ಯಾಗಬುದ್ಧಿ ಇಲ್ಲದ ಕಾರಣ ಮಲಿನವಾಗುತ್ತಿದೆಯೇ?**
- **ಗುರುಗಳು ಹೇಳಿದಂತೆ ಸೇವಾ ಮಾರ್ಗದಲ್ಲಿ ಇಲ್ಲದ ಕಾರಣ ಮಲಿನವಾಗುತ್ತಿದೆಯೇ?**

ಎಂದು ಕಾಲಕಾಲಕ್ಕೆ ಆತ್ಮವಿಮರ್ಶೆ ಮಾಡಿಕೊಳ್ಳಬೇಕು.

"ನನಗೆ ಇನ್ನೂ ಆತ್ಮದರ್ಶನವಾಗುತ್ತಿಲ್ಲ, ಆನಂದ ಸಿಗುತ್ತಿಲ್ಲ" ಎಂದರೆ, ಗುರುಗಳು ಹೇಳಿದ ಸಾಧನೆಯಲ್ಲಾಗಲಿ ಅಥವಾ ಜ್ಞಾನದಲ್ಲಾಗಲಿ ತಪ್ಪಿಲ್ಲ. ನನ್ನ ಆಚರಣೆಯಲ್ಲೇ ತಪ್ಪಿದೆ ಎಂದು ಅರಿಯಬೇಕು. ಆಚರಣೆ ಸರಿಯಾಗಿದ್ದು, ಹಿಂಸೆಯನ್ನು ಬಿಟ್ಟು ಶ್ವಾಸವನ್ನು ಹಿಡಿದರೆ (ಶ್ವಾಸದ ಮೇಲೆ ಗಮನವಿಟ್ಟರೆ), ಸರಿಯಾದ ಜ್ಞಾನ ಪಡೆದರೆ, ಬ್ರಾಹ್ಮಣತ್ವವನ್ನು ಹೊಂದಿ ಬ್ರಹ್ಮರ್ಷಿಯಾಗಿ ಭೂಮಿಯ ಮೇಲೆ ಬೆಳೆಯುತ್ತೀರಿ.

ಗುರುಗಳು ಯಾವ ಆಶಯದೊಂದಿಗೆ ಭೂಮಿಯ ಮೇಲೆ ಬಂದರೋ, ಯಾವ ಪ್ರಯತ್ನವನ್ನು ಮಾಡಿದರೋ, ಶಿಷ್ಯನೂ ಕೂಡ ಅದೇ ಆಶಯದೊಂದಿಗೆ ನಿಂತಾಗ ಮಾತ್ರ ಗುರು ಮೆಚ್ಚಿದ ಶಿಷ್ಯನಾಗುತ್ತಾನೆ. ಹಾಗೆ ಇರಬೇಕೆಂದರೆ ಧ್ಯಾನ ಸಾಧನೆ ಮಾಡಬೇಕು, ಜ್ಞಾನವನ್ನು ಹೆಚ್ಚಿಸಿಕೊಳ್ಳಬೇಕು ಮತ್ತು ವಿಶ್ವ ಪ್ರೇಮವನ್ನು ಹೊಂದಿರಬೇಕು. ಬ್ರಾಹ್ಮಣತ್ವವೇ ನಿಮ್ಮ ಜೀವಿತದ ಗುರಿಯಾಗಲಿ, ಬ್ರಾಹ್ಮಣತ್ವವನ್ನು ಅಳವಡಿಸಿಕೊಂಡರೆ ಬ್ರಹ್ಮರ್ಷಿಗಳೇ ಆಗುತ್ತೀರಿ. ಹೀಗೆ ವಿಷಯಗಳನ್ನು ತಿಳಿದುಕೊಳ್ಳುತ್ತಾ ಶೂದ್ರತ್ವದಲ್ಲಿ ಹುಟ್ಟಿ, ಬ್ರಾಹ್ಮಣತ್ವದೊಂದಿಗೆ ಬ್ರಹ್ಮರ್ಷಿಯಾಗಿ ಮರಣ ಹೊಂದಬೇಕು. ಈ ನಡುವಿನ ಜೀವನವೆಲ್ಲವೂ ಲೋಕ ಕಲ್ಯಾಣಕ್ಕಾಗಿ ಶ್ರಮಿಸಬೇಕು. ಅಂದರೆ ಜ್ಞಾನ ಪಡೆದ ನಂತರ ಸುಮ್ಮನೆ ಕುಳಿತುಕೊಳ್ಳುವುದಲ್ಲ, ಅದನ್ನು ಹತ್ತು ಜನರಿಗೆ ಹಂಚಬೇಕು. ನಿಮ್ಮ ಆಶಯಗಳಿಗೆ ತಕ್ಕಂತೆ ನಿಮಗೆ ಅವಕಾಶಗಳು ಒದಗಿ ಬರುತ್ತವೆ. ನಿಮಗೆ ಆಶಯವೇ ಇಲ್ಲದಿದ್ದರೆ ಅವಕಾಶಗಳು ಎಲ್ಲಿಂದ ಬರುತ್ತವೆ? ಮೊದಲು ಗುರುಗಳು ಹೇಳಿದ ಮಾರ್ಗದಲ್ಲಿ ನಡೆಯಬೇಕು, ಗುರುಗಳು ಹೇಳಿದ ಕೆಲಸಗಳನ್ನು ಮಾಡಬೇಕು ಮತ್ತು ವಿಶ್ವ ಕಲ್ಯಾಣಕ್ಕಾಗಿ ಶ್ರಮಿಸಬೇಕು ಎಂಬ ಆಶಯ ನಮ್ಮಲ್ಲಿರಬೇಕು. ಗುರುಗಳ ಮಾತನ್ನು ಕೇಳಿದರೆ ಜ್ಞಾನ ಬರುತ್ತದೆ, ಅದರೊಂದಿಗೆ ವಿಶ್ವ ಕಲ್ಯಾಣಕ್ಕಾಗಿ ಶ್ರಮಿಸುವುದು ಭಗವಂತ ಮೆಚ್ಚುವ ಕೆಲಸ. ಇದನ್ನು ತಿಳಿದುಕೊಂಡ ದಿನ ಎಲ್ಲರೂ ಕಲಿತು ಎಲ್ಲರಿಗೂ ಕಲಿಸುತ್ತಲೇ ಇರುತ್ತಾರೆ.

# ಜೀವನದಲ್ಲಿ ವಿಜಯ ಸಾಧಿಸಬೇಕೆಂದರೆ?

ಈ ಭೂಮಿಯ ಮೇಲೆ ಜೀವಿಸುತ್ತಿರುವ ಪ್ರತಿಯೊಬ್ಬರೂ ಲೌಕಿಕ ಜೀವನದಲ್ಲಾಗಲಿ ಅಥವಾ ಆಧ್ಯಾತ್ಮಿಕ ಜೀವನದಲ್ಲಾಗಲಿ, ಪ್ರತಿಯೊಂದರಲ್ಲೂ ಯಶಸ್ಸು ಪಡೆಯಬೇಕೆಂದು ಬಯಸುತ್ತಾರೆ. ಅಂದರೆ ಎಲ್ಲದರಲ್ಲೂ ಸಫಲತೆ ಅಥವಾ ವಿಜಯವನ್ನು ಸಾಧಿಸಬೇಕೆಂದು ಅಂದುಕೊಳ್ಳುತ್ತಾರೆ.

ನಿಮಗಿರುವ ಶಕ್ತಿಗೆ ಸಣ್ಣ ಸಣ್ಣ ಕೋರಿಕೆಗಳನ್ನು ಈಡೇರಿಸಿಕೊಳ್ಳಬಹುದು. ಆದರೆ ದೊಡ್ಡ ದೊಡ್ಡ ಆಸೆಗಳನ್ನು ಏಕೆ ಈಡೇರಿಸಿಕೊಳ್ಳಲು ಸಾಧ್ಯವಾಗುತ್ತಿಲ್ಲ ಎಂದು ಒಮ್ಮೆ ವಿವೇಚನೆ ಮಾಡಿದರೆ, ಮೊದಲನೆಯ ದೋಷ "ನಾನು ಈ ದೇಹ" ಎಂದು ಅಂದುಕೊಳ್ಳುವುದು. ನಾನು ದೇಹ ಎಂದು ಅಂದುಕೊಂಡ ತಕ್ಷಣ ಅಹಂಕಾರ ಬರುತ್ತದೆ, ತದನಂತರ ಈ ಜಗತ್ತಿನ ಮೇಲೆ ವ್ಯಾಮೋಹ ಉಂಟಾಗುತ್ತದೆ. ಅಂದರೆ ನೋಡಿದ್ದೆಲ್ಲವೂ ಬೇಕು ಎನ್ನುವ ವ್ಯಾಮೋಹ ಹುಟ್ಟುತ್ತದೆ.

ಗಮನಿಸಿದರೆ, ಜ್ಞಾನಿಗಳು ಮಾತ್ರ ನೋಡಿದ್ದನ್ನೆಲ್ಲಾ ಬೇಕೆಂದು ಬಯಸುವುದಿಲ್ಲ. ಆದರೆ ಸಾಮಾನ್ಯ ಜನರು ನೋಡಿದ್ದೆಲ್ಲಾ ಬೇಕೆಂದು ಅಂದುಕೊಳ್ಳುತ್ತಾ ವಿಷಯ ವಾಂಛೆಗಳಿಗೆ ಒಳಗಾಗುತ್ತಿದ್ದಾರೆ. ಒಬ್ಬೊಬ್ಬರು ಒಂದೊಂದು ರೀತಿಯ ಕೋರಿಕೆಯನ್ನು ಬೆಳೆಸಿಕೊಂಡು ಅದು ಈಡೇರದಿದ್ದರೆ ಸಂಕಟಪಡುತ್ತಾರೆ. ಅದು ಸಂಸಾರದಲ್ಲಾಗಲಿ, ವ್ಯಾಪಾರದಲ್ಲಾಗಲಿ ಅಥವಾ ಉದ್ಯೋಗದಲ್ಲಾಗಲಿ, ಅಂದುಕೊಂಡಂತೆ ನಡೆಯಬೇಕೆಂದು ವಿಪರೀತವಾದ ಆಸೆ ಇಟ್ಟುಕೊಳ್ಳುತ್ತಾರೆ. ಒಂದು ವೇಳೆ ಸೋಲಾದರೆ ನಿರುತ್ಸಾಹಗೊಂಡು ಖಿನ್ನತೆಗೆ (Depression) ಒಳಗಾಗುತ್ತಾರೆ ಮತ್ತು ಅನಾರೋಗ್ಯವನ್ನು ತಂದುಕೊಳ್ಳುತ್ತಿದ್ದಾರೆ.

ಗಮನಿಸಿದರೆ, ಜ್ಞಾನಿಗಳಾದವರು ಎಲ್ಲರಿಗಿಂತ ನೆಮ್ಮದಿಯಾಗಿ ಬದುಕುತ್ತಿದ್ದಾರೆ ಎಂಬ ವಿಷಯ ಅರ್ಥವಾಗುತ್ತದೆ. ಪ್ರಸ್ತುತ ಯಾರನ್ನು ನೋಡಿದರೂ ಯಾವುದೋ ಒಂದು ಬಾಧೆ, ಯಾವುದೋ ಒಂದು ದುಃಖ ಅಥವಾ ಅನಾರೋಗ್ಯದಿಂದ ಬಳಲುತ್ತಿದ್ದಾರೆ. ಇದಕ್ಕೆ ಕಾರಣ ಅವರಲ್ಲಿ ವಿಶ್ವಶಕ್ತಿಯ ಕೊರತೆಯೇ ಆಗಿದೆ. ಯಾರಿಗಾದರೂ ಸಮಸ್ಯೆಗಳು ಬರುತ್ತವೆ. ಸಮಸ್ಯೆಗಳಿಂದಾಗಿ ವಿಪರೀತವಾಗಿ ಆಲೋಚನೆ ಮಾಡುವುದರಿಂದ ಮಾನಸಿಕವಾಗಿ ದುರ್ಬಲರಾಗಿ ಅನಾರೋಗ್ಯಕ್ಕೆ ತುತ್ತಾಗುತ್ತಾರೆ. ಸಮಸ್ತ ಅನಾರೋಗ್ಯಗಳಿಗೆ ಭಾವೋದ್ವೇಗಗಳೇ ಕಾರಣ ಎಂದು ಖಚಿತವಾಗಿ ಹೇಳಬಹುದು. ಈಗ ಭೂಮಿಯ ಮೇಲೆ ಪ್ರತಿಯೊಬ್ಬರಲ್ಲೂ ಸ್ವಾರ್ಥ ಹೆಚ್ಚಾಗಿದೆ. "ನಾನು ಸುಖವಾಗಿರಬೇಕು, ನನ್ನ ಪತ್ನಿ ಸುಖವಾಗಿರಬೇಕು, ನನ್ನ ಪತಿ ಸುಖವಾಗಿರಬೇಕು, ನನ್ನ ಮಕ್ಕಳು

ಸುಖವಾಗಿರಬೇಕು" ಎನ್ನುವ ಸ್ವಾರ್ಥದಿಂದ ಎಷ್ಟೋ ಮಾಡಬಾರದ ಕೆಲಸಗಳನ್ನು ಮಾಡುತ್ತಾ, ಎಷ್ಟೋ ಬೇಡದ ಕೋರಿಕೆಗಳನ್ನು ಬಯಸುತ್ತಾ, ಆಸೆಗೆ ಮಿತಿಯಿಲ್ಲದೆ, ಆ ಆಸೆಗಳನ್ನು ತೀರಿಸಿಕೊಳ್ಳುವ ಶಕ್ತಿಯಿಲ್ಲದೆ ಅನಾರೋಗ್ಯಕ್ಕೆ ಈಡಾಗುತ್ತಿದ್ದಾರೆ. ಆ ಪ್ರಾಣಶಕ್ತಿಯನ್ನು ಕಳೆದುಕೊಳ್ಳುವುದರಿಂದ ಅವರಿಗೆ ಯಶಸ್ಸು ಸಿಗುತ್ತಿಲ್ಲ. ಉದಾಹರಣೆಗೆ, ಕೆಲವರು ಫಸ್ಟ್ ಕ್ಲಾಸ್ ಬರಬೇಕೆಂದು ಹಗಲಿರುಳು ಓದಿದರೂ ಒಂದೊಂದು ಬಾರಿ ಬರದೇ ಇರಬಹುದು. ಆದರೆ ಸ್ವಲ್ಪ ಧ್ಯಾನ ಮಾಡಿ ಓದಿದರೆ ಅವರು ಖಂಡಿತವಾಗಿಯೂ ವಿಜಯ ಸಾಧಿಸುತ್ತಾರೆ. ಏಕೆಂದರೆ ಧ್ಯಾನದ ಮೂಲಕ ಪ್ರಾಣಶಕ್ತಿಯನ್ನು ಪಡೆಯುವುದರಿಂದ ಅವರ ಇಂದ್ರಿಯಗಳು ಶಕ್ತಿವಂತವಾಗುತ್ತವೆ, ಅವರು ಅಂದುಕೊಂಡಿದ್ದನ್ನು ಸಾಧಿಸುತ್ತಾರೆ.

ಆ ಪ್ರಾಣಶಕ್ತಿ ಇಲ್ಲದೆ ಎಷ್ಟು ಕೋರಿಕೆಗಳನ್ನು ಬಯಸಿದರೂ ಪ್ರಯೋಜನವಿಲ್ಲ. ಅದಕ್ಕಾಗಿಯೇ ಶರೀರ ಮತ್ತು ಮನಸ್ಸನ್ನು ಉಪಯೋಗಿಸಿ ಮಾಡುವ ಸಣ್ಣ ಪುಟ್ಟ ಕೆಲಸಗಳಲ್ಲಿ ಮಾತ್ರ ಯಶಸ್ಸು ಪಡೆಯುತ್ತಾರೆ. ಆದರೆ ದೊಡ್ಡ ದೊಡ್ಡ ಕಾರ್ಯಗಳನ್ನು ಮಾಡಬೇಕೆಂದರೆ ಧ್ಯಾನದ ಮೂಲಕ ಆ ಪ್ರಾಣಶಕ್ತಿ ಹೆಚ್ಚಾಗಬೇಕು.

ವಿವೇಕಾನಂದರನ್ನು ರಾಮಕೃಷ್ಣ ಪರಮಹಂಸರು ವಿದೇಶಕ್ಕೆ ಹೋಗಿ ಆತ್ಮಜ್ಞಾನವನ್ನು ಬೋಧಿಸು ಎಂದು ಹೇಳಿದಾಗ, ಅವರ ಜೇಬಿನಲ್ಲಿ ಒಂದು ಬಿಡಿಗಾಸೂ ಇರಲಿಲ್ಲವಂತೆ. ಆದರೆ ಗುರುಗಳು ಹೇಳಿದ್ದಾರೆಂದರೆ ಅದನ್ನು ಮಾಡಿಯೇ ತೀರಬೇಕು, ಅಷ್ಟೊಂದು ಮಂದಿ ಶಿಷ್ಯರಿದ್ದರೂ ನನ್ನನ್ನೇ ಅವರು ಆಯ್ಕೆ ಮಾಡಿದ್ದಾರೆಂದರೆ ನನ್ನಲ್ಲಿ ಸಾಮರ್ಥ್ಯ ಇದೆ ಎಂದೇ ಅರ್ಥ, ಆದ್ದರಿಂದ ನಾನು ಹೋಗಲೇಬೇಕು ಎಂದು ವಿವೇಕಾನಂದರು ಹೊರಟರು. ಅವರ ಬಳಿ ಜ್ಞಾನವಿತ್ತು ಆದರೆ ಹಣವಿರಲಿಲ್ಲ. ಹಾಗೆ ಹೊರಟ ಮೇಲೆ ಏನೂ ಮಾಡಲಾಗದೆ ಕನ್ಯಾಕುಮಾರಿಯ ಒಂದು ಬೆಟ್ಟದ ಮೇಲೆ ಅವರು ಧ್ಯಾನದಲ್ಲಿ ಕುಳಿತುಬಿಟ್ಟರಂತೆ. ಅದನ್ನು 'ವಿವೇಕಾನಂದ ರಾಕ್' ಎಂದು ಕನ್ಯಾಕುಮಾರಿಯಲ್ಲಿ ಇಂದಿಗೂ ಕರೆಯುತ್ತಾರೆ. ವಿವೇಕಾನಂದರು ಜ್ಞಾನಪರವಾಗಿ ಬೆಳೆದವರಾದ್ದರಿಂದ ಗುರುವಿನ ಮಾತಿಗೆ ಎದುರು ಮಾತನಾಡದೆ ತನ್ನ ಪ್ರಯತ್ನ ತಾನು ಮಾಡುತ್ತಾ ಪರಮಾತ್ಮನನ್ನು ಶರಣು ಬೇಡಿದರು. ಬೇಡಿಕೊಳ್ಳುತ್ತಾ ಅವರು ಕಣ್ಣು ಬಿಟ್ಟು ನೋಡುವಷ್ಟರಲ್ಲಿ ಒಬ್ಬ ಮಹಿಳೆ ಅವರನ್ನೇ ನೋಡುತ್ತಾ ಕುಳಿತಿದ್ದಳಂತೆ. ಆಕೆಯೇ ಸೋದರಿ ನಿವೇದಿತಾ, ಆಕೆ ವಿದೇಶದಿಂದ ಬಂದಿದ್ದಳು.

ಭಾರತದೇಶದಲ್ಲಿ ಎಷ್ಟೋ ಮಂದಿ ಧ್ಯಾನ ಮಾಡುತ್ತಾ ಯೋಗಿಗಳಾಗಿದ್ದಾರೆ. ಆ ಯೋಗಿಗಳನ್ನೆಲ್ಲಾ ದರ್ಶಿಸಿ ತಿಳಿದುಕೊಳ್ಳಬೇಕು ಎಂದು ಆಕೆ ಬಂದಿದ್ದಳು. ಹೀಗೆಯೇ ಪಾಲ್ ಬ್ರಂಟನ್ ಕೂಡ ಒಂದು ಕಾಲದಲ್ಲಿ ಆತುರವಾಗಿ ಬಂದಿದ್ದನು.

“ಆಗಬೇಕಾದ ಕಾರ್ಯವನ್ನು ಗಂಧರ್ವರೇ ತೀರಿಸುತ್ತಾರೆ” ಎಂಬ ಒಂದು ಗಾದೆಯನ್ನು ಹೇಳುತ್ತಿರುತ್ತಾರೆ. ಈತ ಕಣ್ಣು ಬಿಡುವಷ್ಟರಲ್ಲಿ ನಿವೇದಿತಾ ಈತನನ್ನೇ ನೋಡುತ್ತಾ ಕುಳಿತಿದ್ದಳು. ಆಕೆ ಏನು ಮಾಡಿದಳೆಂದರೆ, “ಸ್ವಾಮಿ, ಭಾರತದೇಶದಲ್ಲಿ ಯೋಗಿಗಳು ಕಾವಿ ಬಟ್ಟೆ ಧರಿಸುತ್ತಾರಲ್ಲವೇ! ನೀವು ಯಾರು? ಈಗ ನೀವು ಏನು ಮಾಡುತ್ತಿದ್ದೀರಿ? ನೀವು ಯೋಗಿಯೇ?” ಎಂದು ಕೇಳಿದಳಂತೆ.

ಕೇಳಿದಾಗ ವಿವೇಕಾನಂದರು, “ನಮ್ಮ ಗುರುಗಳು ವಿದೇಶಕ್ಕೆ ಹೋಗಲು ಹೇಳಿದರು, ಅಲ್ಲಿ ಆಧ್ಯಾತ್ಮಿಕವಾಗಿ ಬೋಧಿಸಲು ಹೇಳಿದರು, ಆದರೆ ನನ್ನ ಕೈಯಲ್ಲಿ ಹಣವಿಲ್ಲ, ನಾನು ಹೇಗೆ ಹೋಗಲಿ ಎಂದು ಆ ಪರಮಾತ್ಮನನ್ನೇ ಬೇಡಿಕೊಳ್ಳುತ್ತಿದ್ದೇನೆ” ಎಂದು ಹೇಳಿದರು. “ಓಹೋ.. ಹಾಗಾದರೆ ನೀವು ವಿದೇಶಕ್ಕೆ ಹೋಗಿ ಬೋಧಿಸಬೇಕೆಂದಿದೆಯೇ! ನಾನು ಇಲ್ಲಿ ಯೋಗಿಗಳನ್ನು ಹುಡುಕುತ್ತಾ ಬಂದಿದ್ದೇನೆ. ನಾನೇ ನಿಮ್ಮನ್ನು ಕರೆದುಕೊಂಡು ಹೋಗುತ್ತೇನೆ” ಎಂದು ಆಕೆ ವಿವೇಕಾನಂದರನ್ನು ವಿದೇಶಗಳಲ್ಲೆಲ್ಲಾ ಸುತ್ತಿಸಿ, ಕೊನೆಗೆ ಆಕೆ ಕೂಡ ಭಾರತಕ್ಕೆ ಬಂದು ಇಲ್ಲೇ ನೆಲೆಸಿದಳು. ಹೀಗೆ ನಮ್ಮ ಶಕ್ತಿ ಸಾಲದಿದ್ದಾಗ, ಧ್ಯಾನದಲ್ಲಿ ಕುಳಿತಾಗ ಬೇಕಾದವರನ್ನು ಪರಮಾತ್ಮನೇ ಕಳುಹಿಸುತ್ತಾನೆ. ಆದರೆ ಲೌಕಿಕ ಜೀವನದಲ್ಲಿ ಧ್ಯಾನವಿಲ್ಲದೆ, ಯಾವುದನ್ನೂ ಸಾಧಿಸಲು ಸಾಧ್ಯವಾಗುತ್ತಿಲ್ಲ ಎಂದು ದುಃಖಪಡುತ್ತಾರೆ. ಅದಕ್ಕೇ ಮಹಾತ್ಮರು ಏನು ಹೇಳುತ್ತಾರೆಂದರೆ? “ಸಮಸ್ತ ದುಃಖಗಳಿಗೆ ಕಾರಣ ಧ್ಯಾನ ಇಲ್ಲದಿರುವುದೇ” ಎಂದು ಹೇಳುತ್ತಾರೆ.

ಯಾರ ಜೀವನದಲ್ಲಿ ಧ್ಯಾನವಿರುತ್ತದೆಯೋ ಅವರು ವಿಜಯವನ್ನು ಸಾಧಿಸಬಲ್ಲರು. ಧ್ಯಾನ ನಿನ್ನ ಬಳಿ ಇದ್ದರೆ, ಶಕ್ತಿಯನ್ನು ನೀನು ಪಡೆದರೆ, ಹೇಗಾದರೂ ನೀನು ಸಫಲತೆಯನ್ನು ಸಾಧಿಸುತ್ತೀಯಾ. ಶರೀರಕ್ಕೆ ವೈಭವವನ್ನು ನೀಡುವ ಭಗವಂತನನ್ನು, ಹಾಯಾಗಿ ಜೀವಿಸಲು ಬೇಕಾದ ಸಕಲ ಸಂಪನ್ಮೂಲಗಳನ್ನು ಒದಗಿಸಿದ ಭಗವಂತನನ್ನು ನೀವು ಮರೆತುಹೋಗಿದ್ದೀರಿ. ಮರೆತುಹೋಗಿರುವುದಕ್ಕಾಗಿಯೇ ಇಷ್ಟೊಂದು ದುಃಖಗಳು ಬರುತ್ತಿವೆ. ನಿಜವಾಗಿ ನಿಮ್ಮ ತಂದೆ–ತಾಯಿಗಳು ಪ್ರೀತಿಸುತ್ತಿದ್ದಾರೆ, ಪತಿ ಪ್ರೀತಿಸುತ್ತಿದ್ದಾನೆ, ಪತ್ನಿ ಪ್ರೀತಿಸುತ್ತಿದ್ದಾಳೆ, ನಿಮ್ಮ ಮಕ್ಕಳು ಪ್ರೀತಿಸುತ್ತಿದ್ದಾರೆ ಎಂಬ ಭ್ರಾಂತಿಯಲ್ಲಿ ಬದುಕುತ್ತಿದ್ದೀರಿ. ಆದರೆ ಎಲ್ಲರಿಗಿಂತ ಹೆಚ್ಚಾಗಿ ಪ್ರೀತಿಸುವವನು ಭಗವಂತ. ನೀವು ಮರೆತಿದ್ದರೂ, ಅಜಾಗರೂಕರಾಗಿದ್ದರೂ, ಅವನು ನಿಮ್ಮಲ್ಲೇ ಇದ್ದು ನಿಮ್ಮನ್ನು ಪ್ರತಿ ಕ್ಷಣವೂ ಕಾಪಾಡುತ್ತಿರುತ್ತಾನೆ. ಮತ್ತೆ ಹಾಗೆ ನಮ್ಮನ್ನು ಕಾಪಾಡುತ್ತಿರುವ ಭಗವಂತನನ್ನು ನಾವು ಸ್ಮರಿಸುವುದು ಎಂದರೆ ನಿತ್ಯವೂ ಧ್ಯಾನ ಮಾಡುವುದೇ

ಆಗಿದೆ. ಅದಕ್ಕಾಗಿಯೇ ಮಹಾತ್ಮರು ಯಾರು ಭೂಮಿಯ ಮೇಲೆ ಭಗವಂತನನ್ನು ಪ್ರೀತಿಸುತ್ತಾರೋ ಅವರಿಗೆ ಆತ್ಮ ಶ್ರದ್ಧೆ, ಆತ್ಮ ಪ್ರೀತಿ, ಆತ್ಮ ದೃಷ್ಟಿ ಇರಬೇಕು, ಈ ಮೂರು ಇದ್ದರೆ ಸರ್ವಜೀವಿಗಳ ಎಡೆಗೆ ಪ್ರೀತಿಯಿಂದ, ಪರೋಪಕಾರ ಬುದ್ಧಿಯಿಂದ ಜೀವಿಸುತ್ತಾರೆ ಎಂದು ಹೇಳುತ್ತಾರೆ.

⏭ **ಆತ್ಮ ಪ್ರೀತಿ:** ಆತ್ಮದ ಮೇಲೆ ಪ್ರೀತಿ ಎಂದರೆ ಭಗವಂತನ ಮೇಲೆ ಪ್ರೀತಿ. ಭಗವಂತನ ಮೇಲೆ ಪ್ರೀತಿ ಎಂದರೆ ಕೇವಲ ವಿಗ್ರಹಗಳಲ್ಲಿ ದೇವರನ್ನು ನೋಡಿ ಪ್ರಸಾದಗಳನ್ನು, ನೈವೇದ್ಯ ಗಳನ್ನು ಇಡುವುದಲ್ಲ. ನೀವು ಯಾವಾಗ ಆಧ್ಯಾತ್ಮಿಕ ಜೀವನಕ್ಕೆ ಬಂದಿರೋ, ಯಾವಾಗ ನಿಮಗೆ ಗುರುಗಳು ಸಿಕ್ಕಿದ್ದಾರೋ, ಯಾವಾಗ ನೀವು ಸತ್ಯವನ್ನು ತಿಳಿದುಕೊಂಡಿರೋ, ಅಂದಿನಿಂದ ಆತ್ಮವೇ ಭಗವಂತನಾದ್ದರಿಂದ ಆತ್ಮದ ಮೇಲೆ ಪ್ರೀತಿ ಇರಬೇಕು.

⏭ **ಆತ್ಮ ಶ್ರದ್ಧೆ:** ಅದೇ ರೀತಿ ಆತ್ಮದ ಮೇಲೆ ಶ್ರದ್ಧೆ ಇರಬೇಕು. ಶ್ರದ್ಧೆ ಎಂದರೆ ಆತ್ಮಕ್ಕೆ ನಿತ್ಯ ಪೂಜೆ, ಅಂದರೆ ಪ್ರತಿದಿನವೂ ಧ್ಯಾನ ಮಾಡುವುದೇ ಆಗಿದೆ. "ಶ್ವಾಸದ ಮೇಲೆ ಗಮನ" (ಉಸಿರಾಟದ ಮೇಲೆ ಗಮನ) ಮೂಲಕ ನಿತ್ಯವೂ ಪ್ರಾಣಶಕ್ತಿಯಿಂದ ಆತ್ಮಕ್ಕೆ ಅಭಿಷೇಕ ಮಾಡುವುದೇ ಆತ್ಮ ಪೂಜೆ.

⏭ **ಆತ್ಮ ದೃಷ್ಟಿ:** ಆತ್ಮ ದೃಷ್ಟಿ ಎಂದರೆ ಸೃಷ್ಟಿಯಲ್ಲಿ ನಾವು ಯಾವುದನ್ನೂ ನೋಡಿದರೂ, ಎಷ್ಟೇ ದೊಡ್ಡ ವಿಷಯಗಳನ್ನು ನೋಡಿದರೂ, ಅವು ಅಷ್ಟು ಉನ್ನತವಾಗಿರಲು ಕಾರಣ ಆತ್ಮವೇ. ಆತ್ಮ ಶಕ್ತಿ ಇದ್ದರೆ ಮಾತ್ರ ಅವೆಲ್ಲವೂ ಉನ್ನತವಾಗಿ, ಸುಂದರವಾಗಿ ತಯಾರಾಗಿವೆ ಎಂದು ನಿತ್ಯವೂ ಭಾವಿಸಬೇಕು.

ಈ ಮೂರು ಅಂದರೆ ಆತ್ಮದ ಮೇಲೆ ಪ್ರೀತಿ, ಆತ್ಮದ ಮೇಲೆ ಶ್ರದ್ಧೆ ಮತ್ತು ಆತ್ಮ ದೃಷ್ಟಿ ಎಂಬುವು ಯಾವಾಗ ಇರುತ್ತವೆಯೋ, ಆಗ ನೀವು ಆತ್ಮಸ್ಥಿತಿಯನ್ನು ಮೆಲ್ಲಮೆಲ್ಲನೆ ತಲುಪುತ್ತೀರಿ. ಅಷ್ಟೇ ಅಲ್ಲದೆ, ಸರ್ವ ಪ್ರಾಣಿಗಳ ಎಡೆಗೆ ಪ್ರೀತಿ ತೋರಿಸಬೇಕು. ಅಂದರೆ ಎಲ್ಲಾ ಜೀವಿಗಳೂ ಆತ್ಮ ಸ್ವರೂಪಗಳೇ ಎಂದು ತಿಳಿದುಕೊಂಡು ಯಾವ ಜೀವಿಯನ್ನೂ ದ್ವೇಷಿಸಬಾರದು. ಕಾರಣ, ಯಾರನ್ನು ದ್ವೇಷಿಸಿದರೂ ಆ ಭಗವಂತನನ್ನೇ ದ್ವೇಷಿಸಿದಂತೆ. ಅದನ್ನೇ ಶಂಕರಾಚಾರ್ಯರು 'ಸಾಕ್ಷಿಭೂತ ಸ್ಥಿತಿ' ಎಂದಿದ್ದಾರೆ.

ಯಾರಾದರೂ ಸನ್ಯಾಸಿಯಂತೆ ನಟಿಸುತ್ತಾ ಪ್ರವರ್ತಿಸುತ್ತಿದ್ದರೆ, "ಇವನು ಮನಸ್ಸಿನ ಪ್ರಭಾವದಲ್ಲಿದ್ದಾನೆ, ಅದಕ್ಕೇ ಆತ್ಮದ ಬಗ್ಗೆ ಅರ್ಥವಾಗದೆ, ಅನಗತ್ಯ ವಿಷಯಗಳಿಗೆ ಪ್ರಾಮುಖ್ಯತೆ ನೀಡುತ್ತಾ ಆತ್ಮ ಶಕ್ತಿಯನ್ನು ವೃಥಾ ಮಾಡುತ್ತಿದ್ದಾನೆ" ಎಂದು ಭಾವಿಸುತ್ತಾ ನೀವು ಮಾತ್ರ ಅವನನ್ನು ಸಾಕ್ಷಿಯಾಗಿ ನೋಡುತ್ತಾ

ಬಿಟ್ಟುಬಿಡಬೇಕು. ಅದೇ ಒಬ್ಬ ಜ್ಞಾನಿ, ಒಬ್ಬ ಯೋಗಿ ಅಥವಾ ಒಬ್ಬ ಋಷಿ ನಿಮಗೆ ಎದುರಾದಾಗ, "ನನಗೆ ಸರಿಯಾದ ಮಾರ್ಗ ತೋರಿಸಲು ಭಗವಂತನೇ ಇವನನ್ನು ನನ್ನ ಮುಂದೆ ಕಳುಹಿಸಿದ್ದಾನೆ" ಎಂದು ಅವರನ್ನು ಗೌರವಿಸಬೇಕು. ಅವರು ಧ್ಯಾನ ಮಾಡಿ ಜ್ಞಾನ ಪಡೆಯುತ್ತಿದ್ದರೆ, ನಿಮ್ಮ ದೃಷ್ಟಿಯಲ್ಲಿ ಅವರು ಒಳ್ಳೆಯವರೇ. ಲೋಕದಲ್ಲಿ ಒಳ್ಳೆಯದನ್ನು ವಿಮರ್ಶಿಸುವವರು ಕೋಟಿಗಟ್ಟಲೆ ಜನರಿದ್ದಾರೆ, ಆದರೆ ಒಳ್ಳೆಯದನ್ನು ಹೊಗಳುವವರು ಅತಿ ಕಡಿಮೆ ಜನರಿರುತ್ತಾರೆ.

**ಕೃಷ್ಣ ಮತ್ತು ಮಹಾಭಾರತದ ಉದಾಹರಣೆ:** ಈಗ ನೀವು ಶ್ರೀಕೃಷ್ಣನನ್ನು ಉದಾಹರಣೆಯಾಗಿ ತೆಗೆದುಕೊಂಡರೆ, ಆತನು ತನ್ನ ಸೈನ್ಯವನ್ನು ಒಂದು ಕಡೆ ಇಟ್ಟು, ತಾನು ಮಾತ್ರ ಒಂದು ಕಡೆ ಇರುತ್ತೇನೆ ಎಂದಾಗ, ದುರ್ಯೋಧನನಿಗೆ ಅದರ ಅರ್ಥವಾಗದೆ ತನಗೆ ಕೃಷ್ಣನ ಸೈನ್ಯವೇ ಬೇಕು ಎಂದನು. ಅಂದರೆ ಅವನಿಗೆ ಭಗವಂತನ ಅವಶ್ಯಕತೆ ಇರಲಿಲ್ಲ, ಭಗವಂತ ನೀಡುವ ವಸ್ತುಗಳು ಬೇಕಾಗಿದ್ದವು.

ಆದರೆ ಪಾಂಡವರು ತಮಗೆ ಭಗವಂತನೇ ಬೇಕು ಎಂದರು. ಏಕೆಂದರೆ ಭಗವಂತನಿರುವಲ್ಲೇ ವಿಜಯವಿರುತ್ತದೆ ಎಂಬುದು ಅವರಿಗೆ ತಿಳಿದಿತ್ತು. ಇದನ್ನು ನೋಡಿ ನಮಗೆ ಅರ್ಥವಾಗಬೇಕಾದ್ದೇನೆಂದರೆ ಯಾರು ಭಗವಂತನನ್ನು ಆರಾಧಿಸುತ್ತಾರೋ, ಯಾರು ಭಗವಂತನನ್ನು ಪ್ರೀತಿಸುತ್ತಾರೋ ಮತ್ತು ಯಾರು ಭಗವಂತನ ಮೇಲೆ ದೃಷ್ಟಿ ಇಡುತ್ತಾರೋ, ಅವರ ಜೀವನದಲ್ಲಿ ಎಲ್ಲವೂ ವಿಜಯವೇ ಆಗಿರುತ್ತದೆ.

ಕೌರವರನ್ನು ಮತ್ತು ಪಾಂಡವರನ್ನು ನಾವು ಉದಾಹರಣೆಯಾಗಿ ತೆಗೆದುಕೊಂಡರೆ, ಭಗವಂತನನ್ನು ಕೋರಿದವರು ಕೇವಲ ಐವರೇ (ಪಾಂಡವರು). ಭಗವಂತ ನೀಡಿದ ವಸ್ತುಗಳನ್ನು ಕೋರಿದವರು ನೂರು ಜನ (ಕೌರವರು).ಅಷ್ಟು ದೊಡ್ಡ ಸೈನ್ಯವನ್ನು ನೀಡಿದರೂ ಆ ನೂರು ಜನರಿಗೆ (ಕೌರವರಿಗೆ) ವಿಜಯ ಸಿಗಲಿಲ್ಲ. ಆದರೆ ಶ್ರೀಕೃಷ್ಣನು ತಾನೊಬ್ಬನೇ ಇದ್ದು ಇವರಿಗೆ (ಪಾಂಡವರಿಗೆ) ವಿಜಯ ಸಿಗುವಂತೆ ನೋಡಿಕೊಂಡನು.

ಧರ್ಮವನ್ನು ಪ್ರೀತಿಸುವವರು ಅತಿ ಕಡಿಮೆ ಇರುತ್ತಾರೆ, ಅಧರ್ಮವನ್ನು ಪ್ರೀತಿಸುವವರು ಎಷ್ಟೋ ಮಂದಿ ಇರುತ್ತಾರೆ. ಆದರೆ ಯಾರಿಗೆ ಆತ್ಮದ ಮೇಲೆ ಅಂದರೆ ಭಗವಂತನ ಮೇಲೆ ಪ್ರೀತಿ, ಶ್ರದ್ಧೆ ಮತ್ತು ದೃಷ್ಟಿ ಇರುತ್ತದೆಯೋ ಅವರಿಗೆ ಯಾವಾಗಲೂ ವಿಜಯವೇ. ನಿಮಗೆ ಯಾವುದರಲ್ಲಾದರೂ ಯಶಸ್ಸು ಸಿಗಲಿಲ್ಲವೆಂದರೆ, ಗುರು ಹೇಳಿದಂತೆ ನೀವು ಆ ಕೆಲಸ ಮಾಡಲು ಈ ಭೂಮಿಯ ಮೇಲೆ ಬಂದಿಲ್ಲ ಎಂದರ್ಥ. ನೀವು ಸಾವಿರ ಕೋಟಿ ಸಂಪಾದಿಸಲು

ಈ ಭೂಮಿಗೆ ಬಂದಿಲ್ಲ. ಆ ಸಾವಿರ ಕೋಟಿ ಯಾರಿಂದ ಬರುತ್ತಿದೆಯೋ, ಅವನನ್ನು (ಭಗವಂತನನ್ನು) ತಿಳಿದುಕೊಳ್ಳಲು ಬಂದಿದ್ದೀರಿ. ಅವನು ನಿನ್ನಲ್ಲಿ ಅಣುಮಾತ್ರವಾಗಿದ್ದಾನೆ, ಆ ಅಣುಮಾತ್ರದವನನ್ನು ನೀನು ತಿಳಿದುಕೊಂಡರೆ ಇಡೀ ಸೃಷ್ಟಿಯೇ ನಿನ್ನ ಪಾದಗಳ ಮೇಲೆ ಬೀಳುತ್ತದೆ ಎಂಬುದನ್ನು ತಿಳಿದುಕೊಳ್ಳಬೇಕು. ಆತ್ಮ ಪ್ರೀತಿ, ಆತ್ಮ ಶ್ರದ್ಧೆ ಮತ್ತು ಆತ್ಮ ದೃಷ್ಟಿ ಇದ್ದಾಗ ನೀವು ಭಗವಂತನಿಗೆ ಇಷ್ಟವಾದ ಕೆಲಸಗಳನ್ನೇ ಮಾಡುತ್ತೀರಿ. ಅಂದರೆ ಸರ್ವ ಪ್ರಾಣಿಗಳ ಮೇಲೆ ಪ್ರೀತಿ ತೋರಿಸುತ್ತೀರಿ. ಎಲ್ಲಾ ಜೀವಿಗಳೂ ಭಗವಂತನೇ, ಜೀವಿಗಳನ್ನು ಪ್ರೀತಿಸಿದರೆ ಭಗವಂತನು ನಿನ್ನನ್ನು ಮೆಚ್ಚಿಕೊಳ್ಳುತ್ತಾನೆ. ಹಾಗಾಗಿ ನೀವು ಅಹಿಂಸಾ ಮಾರ್ಗದಲ್ಲಿ ಸಾಗುತ್ತೀರಿ.

ಹಾಗೆಯೇ ಪರೋಪಕಾರ ಬುದ್ಧಿಯಿಂದ ಜೀವಿಸುತ್ತೀರಿ. ಅದಕ್ಕಾಗಿಯೇ ಯೋಗಿಗಳು ಯಾವಾಗಲೂ "ನಾನು ಸುಖವಾಗಿರಬೇಕು" ಎಂದು ಆಲೋಚಿಸುವುದಿಲ್ಲವಂತೆ; "ನನ್ನಿಂದ ಲೋಕಕ್ಕೆ ಏನು ಒಳಿತಾಗುತ್ತದೆ?" ಎಂದು ಆಲೋಚಿಸುತ್ತಾರಂತೆ. ಅಂತಹ ಯೋಗ ಜೀವನಕ್ಕೆ ನೀವು ಬಂದಿದ್ದೀರಿ. ಅಂದಮೇಲೆ ಭೋಗಕ್ಕಾಗಿ ಕಾಯುವುದಲ್ಲ; ನಿಮಗೆ ನೀಡಲಾದ ಸಂಪನ್ಮೂಲಗಳನ್ನು ಅನುಭವಿಸುತ್ತಾ, ಯೋಗ ಜೀವನವನ್ನು ನಡೆಸುವುದೇ ಮಾನವ ಜನ್ಮದ ಪರಮಾರ್ಥ.

ಅದಕ್ಕಾಗಿಯೇ ಸೃಷ್ಟಿಯಲ್ಲಿ ಪರಮಾತ್ಮನನ್ನು ತಿಳಿದುಕೊಂಡ ಯೋಗಿ ಮತ್ತು ಜ್ಞಾನಿಯೇ ನಿಜವಾದ 'ಭೋಗವಂತ' (ಅನುಭವಿಸುವವನು). ಯಾವಾಗ ನೀವು ನಿತ್ಯವೂ ಧ್ಯಾನ ಮಾಡುತ್ತಾ ಭಗವಂತನ ಮೇಲೆ ಪ್ರೀತಿಯಿಂದ ಇರುತ್ತೀರೋ, ಭಗವಂತನ ಮೇಲೆ ದೃಷ್ಟಿ ಮತ್ತು ಶ್ರದ್ಧೆಯನ್ನು ಇಡುತ್ತೀ–ರೋ ಆಗ ನೀವು ಭೂಮಿಯ ಮೇಲೆ ಸಾಧಿಸಲಾಗದಿದ್ದುದು ಯಾವುದೂ ಇರುವುದಿಲ್ಲ. ಒಬ್ಬ ಯೋಗಿಗೆ ಅಷ್ಟ ಸಿದ್ಧಿಗಳು ಪಾದಾಕ್ರಾಂತವಾಗುತ್ತವೆ, ಸಿದ್ಧಿಗಳೇ ಆತನಿಗೆ ಎಲ್ಲವನ್ನೂ ಒದಗಿಸುತ್ತವೆ. ಪ್ರಕೃತಿಯೂ ಸಹ ಆತನಿಗೆ ಗುಲಾಮವಾಗುತ್ತದೆ. ಯೋಗಿ ಏನನ್ನು ಶಾಸಿಸುತ್ತಾನೋ ಅದು ನಡೆಯುತ್ತದೆ. ಅದಕ್ಕಾಗಿಯೇ ಮಹಾತ್ಮರು ಬಾಹ್ಯ ದೃಷ್ಟಿಯನ್ನು ತಗ್ಗಿಸಿ ಅಂತರ್ದೃಷ್ಟಿಯನ್ನು ಹೆಚ್ಚಿಸಿಕೊಳ್ಳುತ್ತಾರೆ, ಅದೇ ವಿಜಯಕ್ಕೆ ದಾರಿ ಎಂದು ಹೇಳುತ್ತಿರುತ್ತಾರೆ.

ಭೂಮಿಯ ಮೇಲೆ "ನಾನು ಸಾಧಿಸಲು ಸಾಧ್ಯವಾಗುತ್ತಿಲ್ಲ" ಎನ್ನುವ ನಿರುತ್ಸಾಹವು ಜ್ಞಾನವಿಲ್ಲದವನಿಗೆ ಇರುತ್ತದೆ; ಜ್ಞಾನಿಗೆ "ನಾನು ಸಾಧಿಸಬಲ್ಲೆ" ಎಂಬ ಧೈರ್ಯವಿರುತ್ತದೆ. ನೀವು ಆತ್ಮನೊಂದಿಗೆ ಸಂಬಂಧವನ್ನು ಕಡಿದುಕೊಂಡರೆ ಎಲ್ಲವೂ ಅಪಜಯಗಳೇ, ಆದರೆ ಆತ್ಮನೊಂದಿಗೆ ಸಂಬಂಧ ಬೆಳೆಸಿಕೊಂಡರೆ

ಎಲ್ಲವೂ ವಿಜಯಗಳೇ. ನಿತ್ಯವೂ ಧ್ಯಾನ ಮಾಡುವವನು ಆತ್ಮನೊಂದಿಗೆ ಸಂಬಂಧ ಬೆಳೆಸಿಕೊಂಡಂತೆ. ಆದರೆ ಕಲ್ಲುಗಳನ್ನು, ಫೋಟೋಗಳನ್ನು ಪೂಜಿಸುತ್ತಾ, ಪುಣ್ಯಕ್ಷೇತ್ರಗಳನ್ನು ತಿರುಗುತ್ತಾ ಅಲ್ಲೆಲ್ಲೋ ಭಗವಂತನಿದ್ದಾನೆ ಎಂದು ಭಾವಿಸುವುದು ಆತ್ಮನೊಂದಿಗಿನ ಸಂಬಂಧವನ್ನು ಬಿಟ್ಟುಕೊಟ್ಟಂತೆ. ಈಗ ತುಂಬಾ ಜನರಿಗೆ ಹೇಳುತ್ತಿದ್ದೇನೆ ಆತ್ಮನೇ ಭಗವಂತ, ಧ್ಯಾನವೇ ಭಗವಂತನ ನಿಜವಾದ ಆರಾಧನೆ. ಆದರೆ ಬಹಳಷ್ಟು ಜನರಿಗೆ ಇದು ಅರ್ಥವಾಗುತ್ತಿಲ್ಲವೆಂದರೆ ಅವರಿಗೆ ಇನ್ನೂ ಅರ್ಹತೆ ಬಂದಿಲ್ಲ ಎಂದರ್ಥ.

ಈ ಕಲಿಯುಗದಲ್ಲೇ ವಿಗ್ರಹಾರಾಧನೆ ಬಂದಿದೆ. ಆದರೂ ಜನರು ವಿಗ್ರಹಾರಾಧನೆಯನ್ನು ಬಿಡಲು ಯಾಕೆ ಸಾಧ್ಯವಾಗುತ್ತಿಲ್ಲವೆಂದರೆ? ಧ್ಯಾನಕ್ಕೆ ಬರುವ ಅರ್ಹತೆ ಇಲ್ಲದೆ, ಭಗವಂತನನ್ನು ತಿಳಿದುಕೊಳ್ಳುವ ಅರ್ಹತೆ ಇಲ್ಲದೆ, ಕೊಳೆಯಾದ ಕನ್ನಡಿಯಂತಿರುವ ಮನಸ್ಸಿನಿಂದಾಗಿ ಅದನ್ನು ಬಿಡಲು ಸಾಧ್ಯವಾಗುತ್ತಿಲ್ಲ. ಕನ್ನಡಿಯ ಮೇಲೆ ಕೊಳೆ ಕುಳಿತರೆ ಮುಖ ಹೇಗೆ ಕಾಣಿಸದೋ, ಹಾಗೆಯೇ ಮನಸ್ಸು ಸ್ವಚ್ಛವಾಗಿಲ್ಲದಿದ್ದರೆ ಮನಸ್ಸಿನ ಹಿಂದಿರುವ ಆತ್ಮನ ದರ್ಶನವಾಗದು. ಅವರು ಸತ್ವಗುಣಕ್ಕೆ ಬಾರದ ಕಾರಣ ಸತ್ಯವನ್ನು ಅರ್ಥಮಾಡಿಕೊಳ್ಳುವ ಶಕ್ತಿ ಅವರಿಗೆ ಇರುವುದಿಲ್ಲ. ಅದಕ್ಕಾಗಿಯೇ ಇವೆಲ್ಲವನ್ನೂ ತಿಳಿದುಕೊಂಡ ನೀವು ಬಹಳ ಅದೃಷ್ಟವಂತರು. ಆ ಭಗವಂತನ ಕೃಪೆಯಿಂದಲೇ ಪತ್ರಿಜಿಯವರು ನಿಮ್ಮ ಜೀವನಕ್ಕೆ ಬಂದು ಅದ್ಭುತವಾದ ಆತ್ಮಜ್ಞಾನವನ್ನು ನೀಡಿದ್ದಾರೆ.

ಅದಕ್ಕಾಗಿಯೇ ಪ್ರತಿಯೊಬ್ಬ ಧ್ಯಾನಿಯೂ ತಿಳಿದುಕೊಳ್ಳಬೇಕಾದ್ದು ಏನೆಂದರೆ? ನೀವು ಭಗವಂತನ ಕಡೆಗೆ ತಿರುಗಿದ್ದು ಬಾಹ್ಯವಾದ ಆಸೆಗಳಿಗಾಗಿ ಅಲ್ಲ, ಇದಕ್ಕಿಂತಲೂ ಮಿಗಿಲಾದ ಆನಂದಮಯ ಸ್ಥಿತಿ ಭಗವಂತನ ಬಳಿ ಮಾತ್ರ ಇರುವುದರಿಂದಲೇ. ಪ್ರತಿ ಮಾನವನಿಗೂ ಸಹ ಆತ್ಮ ಪ್ರೀತಿ, ಆತ್ಮ ಶ್ರದ್ಧೆ, ಆತ್ಮ ದೃಷ್ಟಿ ಇರಬೇಕು. ಈ ಮೂರು ಬಂದಾಗ ಭಗವಂತನಿಗೆ ಇಷ್ಟವಾದ ಕಾರ್ಯಗಳು ಅಂ–ದರೆ ಸರ್ವಜೀವಿಗಳ ಎಡೆಗೆ ಪ್ರೀತಿ ತೋರಿಸುತ್ತೀರಿ, ಪರೋಪಕಾರ ಬುದ್ಧಿಯಿಂದ ಜೀವಿಸುತ್ತೀರಿ. ಆತ್ಮನನ್ನು ಮರೆತವರು ದೊಡ್ಡ ಕೆಲಸಗಳನ್ನು ಮಾಡಲು ಸಾಧ್ಯವಿಲ್ಲ, ಆತ್ಮದ ಮೇಲೆ ಶ್ರದ್ಧೆ ಇದ್ದವರು ಎಷ್ಟೋ ದೊಡ್ಡ ಕಾರ್ಯಗಳನ್ನು ಮಾಡಬಲ್ಲರು. ಪತ್ರಿಜಿಯವರ ಮಾತಿಗೆ ಅಂತಹ ಶಕ್ತಿ ಇರುವುದರಿಂದಲೇ ಅವರು ಪಿರಮಿಡ್‌ಗಳನ್ನು ಕಟ್ಟಲು ಹೇಳಿದ ತಕ್ಷಣ ಎಲ್ಲರೂ ಕಟ್ಟುತ್ತಿದ್ದಾರೆ. ಅವರ ವಾಕ್ಕನ್ನು 'ಬ್ರಹ್ಮ ವಾಕ್ಕು' ಎಂದು ಭಾವಿಸಿ ಎಷ್ಟೋ ಮಂದಿ ಶಿಷ್ಯರು ಆ ಕೆಲಸವನ್ನು ಮಾಡುತ್ತಿದ್ದಾರೆ.

ರಾಮಕೃಷ್ಣ ಪರಮಹಂಸರು ಹೇಳಿದಾಗ ವಿವೇಕಾನಂದರು ಬೇಡ

ಎನ್ನಲಿಲ್ಲ. "ನಾನು ಮಾಡಬಲ್ಲೆ" ಎಂಬ ಧೈರ್ಯದೊಂದಿಗೆ ಅವರು ಮುನ್ನಡೆದರು. ದೈವದ ಸಹಕಾರ ಅವರಿಗೆ ಲಭಿಸಿತು. ಹಾಗೆಯೇ ಗುರುಗಳು ಹೇಳಿದ್ದಾರೆಂದರೆ, ನಮ್ಮ ಜ್ಞಾನದ ಪರಿಧಿ ಹೆಚ್ಚಾದಾಗ ನಾವು ಸಾಧನೆಯನ್ನು ಗಟ್ಟಿಯಾಗಿ ಮಾಡಿದರೆ ಆ ದೈವವು ಯಾವುದೋ ಒಂದು ರೂಪದಲ್ಲಿ ಸಹಾಯ ಮಾಡುತ್ತದೆ. ಮಾನವನ ಕರ್ತವ್ಯ ಮತ್ತು ಮಾನವನ ಧರ್ಮ ಏನೆಂದರೆ? ಭೂಮಿಯ ಮೇಲೆ ದೇಹವಿರುವಾಗಲೇ ದೇಹವನ್ನು ಸೃಷ್ಟಿಸಿದವನನ್ನು ತಿಳಿದುಕೊಳ್ಳಬೇಕು. ಅದಕ್ಕಿರುವ ಏಕೈಕ ಮಾರ್ಗ "ಶ್ವಾಸದ ಮೇಲೆ ಗಮನ". ಇದನ್ನೇ ಪತ್ರಿಜಿಯವರು ನಮ್ಮೆಲ್ಲರಿಗೂ ಬೋಧಿಸಿದರು. ಇಷ್ಟೆಲ್ಲಾ ವಿಧವಾಗಿ ನಾವು ತಿಳಿದುಕೊಳ್ಳುತ್ತಿದ್ದರೂ, ಕೆಲವೊಮ್ಮೆ "ಧ್ಯಾನ ಮಾಡುತ್ತಿದ್ದರೂ ಯಾವುದೇ ಲಾಭವಿಲ್ಲ" ಎನ್ನುತ್ತಾರೆ. ಈ ಜನ್ಮಕ್ಕೆ ಬಂದಿರುವ ನಿಮಗೆ ಯಾವುದೋ ಒಂದು ಅಲ್ಪ ಪುಣ್ಯದ ಫಲವಾಗಿ ಈ ಸಾಧನಾ ಮಾರ್ಗ ತಿಳಿದಿದೆ. ಸ್ವಲ್ಪವೇ ಧ್ಯಾನ ಮಾಡಿ "ಲಾಭ ಬರುತ್ತಿಲ್ಲ" ಎಂದರೆ ಹೇಗೆ? ಆ ಪಾಪಗಳೆಲ್ಲಾ ಕರಗಬೇಕಲ್ಲವೇ? ಅವು ಕರಗಿದಾಗ ನಿಮ್ಮ ಶಕ್ತಿ ಹೆಚ್ಚುತ್ತಾ ಹೋಗುತ್ತದೆ. ಆದ್ದರಿಂದ "ಯಾವುದೇ ಲಾಭ ಬರುತ್ತಿಲ್ಲ" ಎಂದು ಎಂದಿಗೂ ಅಂದುಕೊಳ್ಳಬೇಡಿ. "ನನ್ನಲ್ಲಿ ಇನ್ನೂ ಯಾವುದೋ ದೋಷವಿದೆ, ನನಗೆ ಶಕ್ತಿ ಸಾಲುತ್ತಿಲ್ಲ" ಎಂದು ಭಾವಿಸಬೇಕೇ ಹೊರತು, ಧ್ಯಾನದಲ್ಲಾಗಲಿ ಅಥವಾ ಗುರುವಿನಲ್ಲಾಗಲಿ ದೋಷವನ್ನು ಹುಡುಕಬಾರದು.

ಧ್ಯಾನದಲ್ಲಿ, ಗುರುಗಳಲ್ಲಿ ದೋಷಗಳನ್ನು ಹುಡುಕಿದರೆ ನೀವು ಇನ್ನೂ ಅಜ್ಞಾನದಲ್ಲಿ ಮುಳುಗಿ ಹೋಗುತ್ತೀರಿ. ಹಾಗೆ ದೋಷ ಹುಡುಕುವುದು ಪರಮಾತ್ಮನನ್ನು ಅವಮಾನಿಸಿದಂತೆ! ಏಕೆಂದರೆ ಪರಮಾತ್ಮನ ದಯೆಯಿಂದಲೇ ನಮಗೆ ಗುರು ಲಭಿಸಿದ್ದಾರೆ, ಆ ಗುರು ನಮಗೆ ಸಾಧನೆಯನ್ನು ಕಲಿಸಿದ್ದಾರೆ. ಅಷ್ಟೇ ಅಲ್ಲದೆ, "ಪರಮಾತ್ಮನೇ ಈ ಸಂದೇಶವನ್ನು ಗುರುವಿನ ಮೂಲಕ ನನಗೆ ತಲುಪಿಸಿದ್ದಾನೆ" ಎಂದು ಆನಂದದಿಂದ, ಗುಡಿಯಲ್ಲಿ ಪ್ರಸಾದ ಸ್ವೀಕರಿಸುವಂತೆ ಆ ಸಾಧನೆಯನ್ನು ಸ್ವೀಕರಿಸಬೇಕು. ಅದನ್ನು ಬಿಟ್ಟು ಗುರುವನ್ನಾಗಲಿ, ಸಾಧನೆಯನ್ನಾಗಲಿ ಅನುಮಾನಿಸಿದರೆ ಅದು ಪರಮಾತ್ಮನಿಗೆ ಮಾಡುವ ಅಪಮಾನವೇ ಸರಿ. ಹಾಗೆ ಅವಮಾನಿಸಿದರೆ ನಿಮಗೆ ಯಾವುದೇ ಸಫಲತೆ ಸಿಗುವುದಿಲ್ಲ. ಅದಕ್ಕಾಗಿಯೇ ಭಗವಂತನ ಕೃಪೆ ಉಂಟಾಗಬೇಕೆಂದರೆ ಆತನು ಕಳುಹಿಸಿದ ಗುರುಗಳು ನೀಡಿದ ಜ್ಞಾನವನ್ನು ಹೆಚ್ಚಿಸಿಕೊಳ್ಳುತ್ತಾ, ಅದನ್ನು ಆಚರಿಸುತ್ತಾ, ವಿಜಯದ ಒಂದೊಂದೇ ಮೆಟ್ಟಿಲನ್ನು ಏರುವುದೇ ನಿಮ್ಮ ಕೆಲಸ. ಕೊನೆಯಲ್ಲಿ ನೀವು ಸಾಧಿಸುವ ವಿಜಯವೇನೆಂದರೆ ನಿಮ್ಮ ಆತ್ಮವನ್ನು ಸತ್ಯಲೋಕಕ್ಕೆ ತಲುಪಿಸುವುದೇ ಆಗಿದೆ.

# ಶ್ರೀರಾಮ ಪಬ್ಲಿಕೇಶನ್ಸ್‌ನಲ್ಲಿ ದೊರೆಯುವ ಪುಸ್ತಕಗಳು

| | | |
|---|---|---|
| 1. | ಅಹಿಂಸೆ ಮತ್ತು ಶಾಖಾಹಾರ | ರೂ.20 |
| 2. | ನವವಿಧ ಧರ್ಮಗಳ | ರೂ.40 |
| 3. | ಧ್ಯಾನ | ರೂ.60 |
| 4. | ವಿದ್ಯಾರ್ಥಿಗಳ ವಿಕಾಸಕ್ಕೆ ಧ್ಯಾನ ವಿದ್ಯೆ | ರೂ.30 |
| 5. | ಭಾಗವತ ಸನ್ನಿವೇಶಗಳ ಅಂತರಾರ್ಥ | ರೂ.30 |
| 6. | ಶಿರಡಿ ಸಾಯಿ ಸಂದೇಶಗಳು | ರೂ.30 |
| 7. | ಪ್ರಾಣ ಶಕ್ತಿ | ರೂ.100 |
| 8. | ಜೀವನದ ಸೂಕ್ಷ್ಮಗಳು | ರೂ.100 |
| 9. | ಸಂಘಂ ಶರಣಂ ಗಚ್ಛಾಮಿ | ರೂ.300 |
| 10. | ತುಳಸಿ ದಳ (i) | ರೂ.200 |
| 11. | ತುಳಸಿ ದಳ (ii) | ರೂ.220 |
| 12. | ಆಶ್ಚರ್ಯ ಆಶ್ಚರ್ಯ | ರೂ.40 |
| 13. | ದುಃಖ ನಿವಾರಣೆಯ ಮಾರ್ಗ | ರೂ.70 |
| 14. | ಧ್ಯಾನದಿಂದಲೇ ಜ್ಞಾನ | ರೂ.70 |
| 15. | ಬ್ರಹ್ಮಜ್ಞಾನ | ರೂ.70 |
| 16. | ಜ್ಞಾನ ಜ್ಯೋತಿ | ರೂ.90 |
| 17. | ಗೈಡಿಂಗ್ | ರೂ.100 |
| 18. | ಸಂಕಲ್ಪವೆಂದರೇನು? | ರೂ.50 |
| 19. | ಕರ್ಮ ಸಿದ್ಧಾಂತ | ರೂ.70 |
| 20. | ಜ್ಞಾನ ಕುಸುಮಗಳು | ರೂ.90 |
| 21. | ಆಲೋಚನಾ ಶಕ್ತಿ | ರೂ.40 |
| 22. | ಆತ್ಮವಿಜ್ಞಾನ ಮತ್ತು ಮೃತ್ಯುವೇ ಇಲ್ಲ | ರೂ.40 |
| 23. | ಆಧ್ಯಾತ್ಮಿಕ ಶಾಸ್ತ್ರ | ರೂ.40 |
| 24. | ಮರಣದ ನಂತರ ನಮ್ಮ ಜೊತೆ ಬರುವುದು | ರೂ.60 |
| 25. | ಜ್ಞಾನ ಯುಗ | ರೂ.60 |
| 26. | ಸೇತು ವಿಜ್ಞಾನ | ರೂ.40 |
| 27. | ಮರಣಿಸುವ ಮುಂಚೆಯೇ ಮರಣಿಸಬೇಕು | ರೂ.130 |
| 28. | ಅತೀಂದ್ರಿಯ ಶಕ್ತಿಗಳು | ರೂ.40 |
| 29. | ಆಲೋಚಿಸಿ | ರೂ.70 |
| 30. | ನಿರ್ವಾಣ ಮಾರ್ಗ | ರೂ.60 |
| 31. | ಸತ್ಯ | ರೂ.40 |
| 32. | ಆರ್ಥಿಕ ಪರಿಸ್ಥಿತಿ | ರೂ.40 |
| 33. | ಚಕ್ರಗಳು | ರೂ.30 |
| 34. | ಭೂತದಯೇ ಮತ್ತು ದೈವತ್ವ | ರೂ.80 |
| 35. | ಮೌನ ಧ್ಯಾನ | ರೂ.40 |
| 36. | ಗುರುವನ್ನು ಗುರುತಿಸುವುದು ಹೇಗೆ? | ರೂ.30 |
| 37. | ತ್ರೀ ವಿಧಗಳು | ರೂ.70 |
| 38. | ಈ ಜೀವನವಿರುವುದು ಏಕೆ? | ರೂ.50 |
| 39. | ಧ್ಯಾನವೆಂದರೆ? | ರೂ.60 |
| 40. | ಮೆಹರ್ ಬಾಬಾ ಸಂದೇಶ | ರೂ.80 |
| 41. | ಬುದ್ಧನ ಸೂಕ್ತಿಗಳು | ರೂ.60 |
| 42. | ಸತ್ಯಮಾರ್ಗ | ರೂ.80 |
| 43. | ಶಾಸ್ತ್ರಗಳ ಅಂತರಾತ್ಮ | ರೂ.80 |
| 44. | ಜೀವನ ಶಾಸ್ತ್ರ | |
| 45. | ಮೂರು ರೀತಿಯ ಜೀವನಗಳು | ರೂ.50 |
| 46. | ಆತ್ಮಜ್ಞಾನ ಹೊಂದಲು ಸಾಧ್ಯವಾಗದಿರಲು ಕಾರಣಗಳು. | ರೂ.70 |
| 47. | ಮನಸ್ಸಿನ ಸ್ಥಿತಿಗಳು | ರೂ.40 |
| 48. | ಮಾಸ್ಟರ್ ಆಗಿ ಬೆಳೆಯಬೇಕೆಂದರೆ | ರೂ.50 |
| 49. | ಕಬೀರರ ಸಂದೇಶಗಳು–1 | ರೂ.70 |
| 50. | ಧರ್ಮ ಸೂಕ್ಷ್ಮಗಳು | ರೂ.40 |
| 51. | ಭಗವಂತನಿಗೆ ಇಷ್ಟರಾಗಬೇಕೆಂದರೆ | ರೂ.50 |
| 52. | ಚಾಂಪಿಯನ್ ಆಗಬೇಕೆಂದರೆ. | ರೂ.30 |
| 53. | ವಿಧುರನ ಸಂದೇಶಗಳು. | ರೂ.40 |
| 54. | ಆಶ್ಚರ್ಯಕರವಾದ ವಿಷಯಗಳು. | ರೂ.60 |
| 55. | ಅರಿಹಂತ್ | ರೂ.50 |
| 56. | ಧಾರ್ಮಿಕ ಜೀವನ ಎಂದರೆ? | ರೂ.60 |
| 57. | ಮಾತೆ ಮಾಣಿಕೇಶ್ವರಿ ಸಂದೇಶಗಳು–1 | ರೂ.60 |
| 58. | ಗುರು ಪೂರ್ಣಿಮೆ ವಿಶಿಷ್ಟತೆ | ರೂ.60 |
| 59. | ಜೀವನದಲ್ಲಿ ವಿಜಯ ಸಾಧಿಸಬೇಕೆಂದರೆ | ರೂ.50 |



# ಗುರು ಪೂರ್ಣಿಮೆಯ ವಿಶಿಷ್ಟತೆ

ಮೊಟ್ಟಮೊದಲಿಗೆ ಪರಮಾತ್ಮನು ಜ್ಞಾನವನ್ನೆಲ್ಲಾ ಬ್ರಹ್ಮದೇವನಿಗೆ ಶಬ್ದ ರೂಪವಾಗಿ ಕೇಳಿಸಿದನು. ಶಬ್ದ ರೂಪದಲ್ಲಿ ಬ್ರಹ್ಮನು ಕೇಳಿಸಿಕೊಂಡ ಕಾರಣ ಅವುಗಳಿಗೆ 'ಶ್ರುತಿಗಳು' ಎಂಬ ಹೆಸರು ಬಂದಿತು. ಜ್ಞಾನವು ಶ್ರುತಿಗಳ ರೂಪದಲ್ಲಿದ್ದರೆ ಕಲಿಯುಗದಲ್ಲಿ ಮಾನವರು ಅರ್ಥಮಾಡಿಕೊಳ್ಳಲು ಸಾಧ್ಯವಿಲ್ಲ ಎಂದು ಪರಾಶರ ಮಹರ್ಷಿಗಳು ಗ್ರಹಿಸಿ, ವ್ಯಾಸರ ಮೂಲಕ ಆ ಶ್ರುತಿಗಳನ್ನು ನಾಲ್ಕು ಭಾಗಗಳಾಗಿ ವಿಂಗಡಿಸಿ 'ವೇದಗಳು' ಎಂದು ಹೆಸರಿಸಿದರು.

ವೇದಗಳು ಎಂದರೆ ಜ್ಞಾನ ಎಂದು ಅರ್ಥ. ವೇದಗಳನ್ನು ಒಟ್ಟು ನಾಲ್ಕಾಗಿ ವಿಂಗಡಿಸಲಾಗಿದೆ. ವ್ಯಾಸಭಗವಾನರು ಈ ವೇದಗಳನ್ನು ಹೇಳುತ್ತಿರುವಾಗ, ಗಣಪತಿಯು ಬರೆಯುತ್ತಾ. "ಯಾಕೆ ಇವೆಲ್ಲವನ್ನೂ ಬರೆಯುತ್ತಿದ್ದೇವೆ? ಇದರ ಸಾರಾಂಶವೇನು?" ಎಂದು ಕೇಳಿದಾಗ, ವ್ಯಾಸರು "ಪರೋಪಕಾರಾಯ ಪುಣ್ಯಂ, ಪಾಪಾಯ ಪರಪೀಡನಂ" (ಪರೋಪಕಾರ ಮಾಡುವುದು ಪುಣ್ಯ, ಇತರರನ್ನು ಪೀಡಿಸುವುದು ಪಾಪ) ಎಂದು ಹೇಳಿದರು.

ವ್ಯಾಸ ಭಗವಾನರು ವೇದಗಳನ್ನು ಹಾಗೆ ಬರೆದಿಟ್ಟು ಭೂಮಿಯ ಮೇಲೆ ಬಿಟ್ಟು ಹೋಗಲಿಲ್ಲ. ತಮ್ಮ ಶಿಷ್ಯರ ಮೂಲಕ ಅವುಗಳನ್ನು ಪ್ರಚಾರ ಮಾಡಿಸಿದರು.

- ಋಗ್ವೇದವನ್ನು ಪೈಲನಿಂದ,
- ಯಜುರ್ವೇದವನ್ನು ವೈಶಂಪಾಯನನಿಂದ,
- ಸಾಮವೇದವನ್ನು ಜೈಮಿನಿ ಮಹರ್ಷಿಯಿಂದ,
- ಅಥರ್ವಣ ವೇದವನ್ನು ಸುಮಂತನಿಂದ ಹೀಗೆ ನಾಲ್ಕು ವೇದಗಳನ್ನು

ನಾಲ್ವರು ಶಿಷ್ಯರ ಮೂಲಕ ನಾಲ್ಕು ದಿಕ್ಕುಗಳಲ್ಲಿ ಪ್ರಚಾರ ಮಾಡಿಸಲಾಯಿತು.

ಕಲಿಯುಗದಲ್ಲಿ ಎಲ್ಲರೂ ಪಡೆಯುತ್ತಿರುವ ಜ್ಞಾನವು ವ್ಯಾಸ ಭಗವಾನರು ಹೇಳಿದ ವೇದಗಳು, ಉಪನಿಷತ್ತುಗಳು, ಬ್ರಹ್ಮಸೂತ್ರಗಳು, ಅಷ್ಟಾದಶ ಪುರಾಣಗಳು ಮತ್ತು ಮಹಾಭಾರತದಿಂದಲೇ ಪಡೆಯುತ್ತಿದ್ದಾರೆ. ಪ್ರಪಂಚಕ್ಕೆ ಜ್ಞಾನವನ್ನು ನೀಡಿದ ವ್ಯಾಸ ಭಗವಾನರ ಹುಟ್ಟಿದ ದಿನವನ್ನು ಎಲ್ಲರೂ ಹಬ್ಬವಾಗಿ ಆಚರಿಸಬೇಕು. ಅದಕ್ಕಾಗಿಯೇ ಜ್ಞಾನಿಗಳೆಲ್ಲರಿಗೂ ಗುರುಪೂರ್ಣಿಮೆ ಎಂದರೆ ವ್ಯಾಸ ಪೂರ್ಣಿಮೆ ಎಂಬ ದೊಡ್ಡ ಹಬ್ಬ.

– ಬ್ರಹ್ಮವಿದ್ವರಿಷ್ಠ ತಟವರ್ತಿ ರಾಜ್ಯಲಕ್ಷ್ಮಿ

ಪಿರಮಿಡ್ ಸ್ಪಿರಿಚ್ಯುಯಲ್ ಸೊಸೈಟೀಸ್ ಮೂವ್‌ಮೆಂಟ್, ಇಂಡಿಯಾ

ಧ್ಯಾನದ ಬಗ್ಗೆ ಮತ್ತಷ್ಟು ಸಮಾಚಾರಕ್ಕಾಗಿ ಈ ಕೆಳಗಿನ ವೆಬ್‌ಸೈಟ್ ಸಂಪರ್ಕಿಸಿ

http: //www.youtube.com/pmckannada

- www.meditationeverywhere.org
- www.pssmovement.org


## ಶ್ರೀರಾಮ ಪಬ್ಲಿಕೇಶನ್ಸ್

ಶ್ರೀ ರಾಮಧಾಮ ಧ್ಯಾನ ಮಂದಿರ, ನಾರಾಯಣಪ್ಪ ಗಾರ್ಡನ್
ವೈಟ್‌ಫೀಲ್ಡ್ ಬೆಂಗಳೂರು–560 066
ಸಂಪರ್ಕಿಸಿ: ಹೆಚ್.ಎನ್. ಶ್ರೀನಿವಾಸ ಮೊ. 9449695503
ವಿಜಯಲಕ್ಷ್ಮೀ ಎಸ್.ಎನ್. ಮೊ. 8050082689

ರೂ. 60/-


ತಟವರ್ತಿ ವೀರರಾಘವರಾವ್, ರಾಜ್ಯಲಕ್ಷ್ಮೀ ಅವರ ಪುಸ್ತಕಗಳು ವೆಬ್‌ಸೈಟ್‌ನಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು.

ಈ QR Codeನ್ನು Google Lensನಲ್ಲಿ ಸ್ಕ್ಯಾನ್ ಮಾಡಿರಿ

Telugu Books | English Books | Hindi Books | Kannada Books | Tamil Books